
ಪುಸ್ತಕ ಪ್ರಪಂಚ

ಸಂಪುಟ ೩೬ ೧೯೮೨ ಜೂನ್ ಸಂಚಿಕೆ ೧೧



ವಿಷಯ ಸೂಚಿ

ಮುಖಚಿತ್ರ: ಜಿರಾಫೆ

ಸಂಪಾದಕೀಯ ಮಂಡಲಿ

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆ

ಸಂಪುಟ ೩೬ ಜೂನ್ ೧೯೮೭ ಸಂಚಿಕೆ ೧೧

ಜೀನ್ ಕ್ರಾಂತಿ


ತೆಂಗಿನಕಾಯಿ ಗಾತ್ರದ ಮೊಟ್ಟೆ, ಕುಂಬಳಕಾಯಿ ಗಾತ್ರದ ಟೊಮ್ಯಾಟೋ ಹಣ್ಣು ಎಂದಾದರೂ ನೋಡಿದ್ದೀರಾ? ಆದರೆ ಅವನ್ನು ನೋಡಿದರೆ ನೀವು ಆಶ್ಚರ್ಯ ಪಡಬೇಕಾಗಿಲ್ಲ. ಜೀವವಿಜ್ಞಾನದಲ್ಲಿ ಇಂದು ನಡೆದಿರುವ ಸಂಶೋಧನೆಗಳು ಜೀನ್ ಕ್ರಾಂತಿಗೆ ದಾರಿ ಮಾಡಿಕೊಡುತ್ತಿವೆ. ಇದರ ಕೊನೆ ಬಹುಶಃ ಬಹಳ ಆಶ್ಚರ್ಯಕಾರಕ. ಹಾಗಾದರೆ ಜೀನ್ ಎಂದರೇನು? ಹಾಗೂ ಜೀನ್ ಕ್ರಾಂತಿ ಎಂದರೇನು?

ಜೀವದ ರಹಸ್ಯವೇ ಜೀನ್. ಇದರ ರೂಪ ಡಿಆಕ್ಸಿರೈಬೊನ್ಯೂಕ್ಲಿಯಿಕ್ ಆಮ್ಲ ಅಥವಾ ರಾಸಾಯನಿಕ ವಸ್ತು. ಜೀವಿಯ ಶರೀರ ಸಹಸ್ರಾರು ಜೀವಕೋಶಗಳಿಂದ ಮಾಡಲ್ಪಟ್ಟಿದೆ. ಪ್ರತಿ ಕೋಶದಲ್ಲಿ ಕೋಶ ಕೇಂದ್ರವಿದ್ದು ಅದರಲ್ಲಿ ನಿರ್ದಿಷ್ಟ ಸಂಖ್ಯೆಯಲ್ಲಿ ವರ್ಣತಂತುಗಳು ಇರುತ್ತವೆ. ಪ್ರತಿ ವರ್ಣತಂತುವಿನಲ್ಲಿ ರಸಾಯನ ರೂಪಿ ಜೀನ್ ಅಥವಾ ಡಿ. ಎನ್. ಎ. ಇರುತ್ತದೆ. ಒಂದು ವರ್ಣತಂತುವಿನಲ್ಲಿ ಹಲವಾರು ಜೀನುಗಳಿರುತ್ತವೆ. ಇವು ಒಂದು ತಳಿಯಿಂದ ಇನ್ನೊಂದು ತಳಿಗೆ ಗುಣಗಳನ್ನು ಕೊಂಡೊಯುತ್ತವೆ. ಸಂತಾನಗಳು ತಂದೆಯಿಂದ ಮತ್ತು ತಾಯಿಯಿಂದ ಸಮವಾದ ಜೀನುಗಳನ್ನು ಪಡೆಯುತ್ತವೆ.

ವಿಜ್ಞಾನದಲ್ಲಿ ಗೆಲಿಲಿಯೋ, ಕೊಪರ್ನಿಕಸ್, ಐನ್‌ಸ್ಟೈನ್ ಮತ್ತು ಜಗದೀಶ ಚಂದ್ರಬೋಸ್ ಮುಂತಾದವರು ಅವರವರ ತತ್ವಗಳನ್ನು ಪ್ರತಿಪಾದಿಸಿದಾಗ ಒಂದು ರೀತಿಯ ಕ್ರಾಂತಿಯೇ ನಡೆಯಿತು. ಜೀವಶಾಸ್ತ್ರದಲ್ಲಿ ಡಾರ್ವಿನ್ ಮಹಾಶಯ ತನ್ನ 'ಮಂಗನಿಂದ ಮಾನವ' ಎಂಬ ನಿಯಮವನ್ನು ಪ್ರತಿಪಾದಿಸಿದಾಗಲೂ ಕ್ರಾಂತಿ ನಡೆಯಿತು. ಈಗ ಜೀವ ವಿಜ್ಞಾನಿಗಳು ಇಷ್ಟೇ ದಿಗ್ಭ್ರಮೆ ಮತ್ತು ಕ್ರಾಂತಿ ಉಂಟುಮಾಡುವಂಥ ಸಂಶೋಧನೆಯಲ್ಲಿ ತೊಡಗಿದ್ದಾರೆ.

೨

೧೯೦೦ ನೇ ಇಸವಿಯಲ್ಲಿ ಮೆಂಡಲನ ನಿಯಮದ ಪುನರ್ ಪ್ರತಿಪಾದನೆಯಾದ ನಂತರ, ಮೆಂಡಲನ ಗುಣಗಳನ್ನು ಜೊಹಾನ್ ಸನ್ ಮಹಾಶಯ ೧೯೦೨ ರಲ್ಲಿ 'ಜೀನ್' (ಅಂದರೆ ಗುಣಾಣು) ಎಂದು ಕರೆದ. ಇದರ ರೂಪ ತಿಳಿದುದು ೧೯೫೩ ರಲ್ಲಿ ವ್ಯಾಟ್ಸನ್ ಕ್ರಿಕ್ ಮತ್ತು ವಿಲ್ಸನ್ನರು ಡಿ.ಎನ್.ಎ. ಮಾದರಿಯನ್ನು ರಚಿಸಿದಾಗಲೇ. ಅನಂತರ ವಿಜ್ಞಾನಿಗಳು, ಜೀನಿನ ಅಸ್ತಿತ್ವ, ಕ್ರಿಯೆ ಮುಂತಾದ ಭೌತ, ರಾಸಾಯನಿಕ ಹಾಗೂ ಜೈವಿಕ ಗುಣಗಳ ಬಗ್ಗೆ ಸಂಶೋಧನೆಗಳನ್ನು ನಡೆಸಿದರು.



ಇಂದಿನ ಸಂಶೋಧನೆಗಳಿಂದ ಜೀವಿ ಎಂಬ ಕಾರ್ಖಾನೆಯ ಸಂಪೂರ್ಣ ನೀಲ ನಕಾಶೆ ನಮಗೆ ದೊರೆಯಲಿದೆ. ಕ್ಯಾನ್ಸರಿನಂಥ ಭಯಂಕರ ರೋಗದ ರಹಸ್ಯ ನೂರಾರು ಆನುವಂಶಿಕ ರೋಗಗಳ ಬಗ್ಗೆ ಮಾಹಿತಿ ಮತ್ತು ಅವುಗಳ ನಿವಾರಣೋಪಾಯ ಇತ್ಯಾದಿ ದೊರೆಯಲಿದೆ. ಪ್ರಾಣಿಗೆ ಅಥವಾ ಸಸ್ಯಕ್ಕೆ ಹೊಸ ಹೊಸ ಜೀನುಗಳನ್ನು ಸೇರಿಸಿ, ಅವುಗಳ ತಳಿಯನ್ನು ಅಭಿವೃದ್ಧಿ ಮಾಡಬಹುದಾಗಿದೆ. ಹೊಸ ಜೀನುಗಳನ್ನು ಸೇರಿಸುವುದು ಬ್ಯಾಕ್ಟೀರಿಯಾಗಳಂಥ ಸೂಕ್ಷ್ಮಜೀವಿಗಳಲ್ಲಿ ಸುಲಭ. ಆದರೆ ಮನುಷ್ಯನಿಗಾಗಲಿ ಇನ್ನಾವುದೇ ದೊಡ್ಡ ಜೀವಿಗಾಗಲಿ ಸೇರಿಸುವುದು ಅಷ್ಟು ಸುಲಭವಲ್ಲ.

ಜೀವಶಾಸ್ತ್ರಜ್ಞರು ಇಂದು ಡಿ. ಎನ್. ಎ.ಲ್ಲಿಯ ಅಡಗಿರುವ ಸಂದೇಶವನ್ನು ಓದಬಲ್ಲರು. ಅದನ್ನೇ ನಕಲು ಮಾಡಬಲ್ಲರು. ಪ್ರಯೋಗಶಾಲೆಯಲ್ಲಿ ಕೃತ್ರಿಮವಾಗಿ ಹೊಸ ಜೀನನ್ನೇ ಸೃಷ್ಟಿಸಬಲ್ಲರು. ಲಕ್ಷಾಂತರ ಜೀನುಗಳಿರುವ ಕೋಶ ಒಂದರಲ್ಲಿ ತಮಗೆ ಇಷ್ಟ ಬಂದ ಜೀನನ್ನು ಕತ್ತರಿಸಿ ಆ ಸ್ಥಾನಕ್ಕೆ ಬೇರೆ ಜೀನನ್ನು ಜೋಡಿಸಬಲ್ಲರು.

ಈ ಡಿ. ಎನ್. ಎ. ಅಥವಾ ಜೀನುಸರಣಿ ಕೇವಲ ಹತ್ತು ಅಣುಗಳಷ್ಟು ಅಗಲವಾಗಿದ್ದು, ಹಲವಾರು ಶತಕೋಟಿ ಅಣುಗಳಷ್ಟು ಉದ್ದವಾಗಿರುತ್ತದೆ. ಒಬ್ಬ ಮನುಷ್ಯನ ಜೀವಕೋಶವೊಂದರಲ್ಲಿರುವ ಜೀನನ್ನು ಪೂರ್ತಿ ಎಳೆದರೆ ೩ ಅಡಿ

ಉದ್ದವಾದ ಸೂಕ್ಷ್ಮಾತಿಸೂಕ್ಷ್ಮ ಎಳೆಯಾಗಿದ್ದು ಮನುಷ್ಯನ ಶರೀರದಲ್ಲಿರುವ ಎಲ್ಲಾ ಡಿ.ಎನ್.ಎಯನ್ನು ಒಂದರ ತುದಿಗೊಂದರಂತೆ ಜೋಡಿಸಿದರೆ, ಇಡಿ, ಪ್ರಪಂಚಕ್ಕೆ ಒಂದು ಸುತ್ತು ಸುತ್ತಬಹುದು. ಆದರೆ ಇದರ ರಚನೆ ಅತಿ ಸರಳ. ಇದರಲ್ಲಿ ಅಡಿನೀನ್ (A), ಥೈಮೀನು (T), ಗ್ವಾನೀನ್ (G) ಮತ್ತು ಸೈಟೋನೀನ್ (C) ಎಂಬ ನಾಲ್ಕು ಸಾರಜನಕ ಕ್ಷಾರಗಳು ಹಾಗೂ ಒಂದು ಶರ್ಕರ ಮತ್ತು ಒಂದು ರಂಜಕಾಮ್ಲದ ಕಣಗಳಿರುತ್ತವೆ. ಸುತ್ತಿದ ಏಣಿಯ ಆಕಾರವನ್ನು ಹೊಂದಿದ ಈ ಡಿ.ಎನ್.ಎ.ಗೆ ಎರಡು ಭಾಗಗಳಿದ್ದು, ಒಂದೊಂದು ಕಡೆ ಒಂದೊಂದು ಸರಪಣಿಯಿರುತ್ತದೆ. ಪ್ರತಿ ಸರಪಣಿಯಲ್ಲಿ ಒಂದು ಶರ್ಕರ ರಂಜಕಾಮ್ಲ ಮತ್ತು ಸಾರಜನಕ ಕ್ಷಾರಗಳಿದ್ದು ಅದು ಇನ್ನೊಂದು ಸರಪಣಿಗೆ ಜಲಜನಕ ಬಂಧದಿಂದ ಸೇರಿಕೊಂಡಿರುತ್ತದೆ. ಯಾವಾಗಲೂ ಅಡಿನೀನು ಥೈಮೀನುಗಳ ಮಧ್ಯೆ ಮತ್ತು ಗ್ವಾನೀನು ಸೈಟೋನೀನುಗಳ ಮಧ್ಯೆ ಮಾತ್ರ ಬಂಧವೇರ್ಪಡಲು ಸಾಧ್ಯ. ಡಿ.ಎನ್.ಎ.ಗೆ ಸ್ವಯಂ ಪುನರುತ್ಪತ್ತಿ ಮಾಡುವ ಶಕ್ತಿಯಿದ್ದು ನಿರ್ದಿಷ್ಟರೀತಿಯಲ್ಲಿಯೇ ಜಲಜನಕ ಬಂಧವೇರ್ಪಡುತ್ತದೆ. ಒಂದು ತಳಿಯಿಂದ ಇನ್ನೊಂದು ತಳಿಗೆ ಈ ಜೀನುಗಳು ಲೈಂಗಿಕ ಕೋಶಗಳ ಮೂಲಕ ಸಾಗಿಸಲ್ಪಡುತ್ತವೆ. ಅತಿ ಸೂಕ್ಷ್ಮ ವೈರಸ್ಸೇ ಆಗಲಿ ಮಾನವನ ಶರೀರವೇ ಆಗಲಿ, ಎಲ್ಲ ಜೀವಿಗಳಲ್ಲಿಯೂ ರಾಸಾಯನಿಕವಾಗಿ ಡಿ.ಎನ್.ಎ.ಯ ಆಕೃತಿ ಒಂದೆ. ಅವುಗಳಲ್ಲಿರುವ ರಾಸಾಯನಿಕ ವಸ್ತುಗಳೂ ಬದಲಾಗುವುದಿಲ್ಲ. ಆದರೆ ಬ್ಯಾಕ್ಟೀರಿಯಾಕ್ಕೂ ಎರೆಹುಳುವಿಗೂ ಮಾನವನ ಜೀನುಗಳಿಗೂ ವ್ಯತ್ಯಾಸವೇ ಇಲ್ಲ ಎಂದಲ್ಲ. ಡಿ.ಎನ್.ಎ.ಯ ಉದ್ದದಲ್ಲಿ ಮತ್ತು ಸಾರಜನಕ ಕ್ಷಾರಗಳ ಸರಣಿ ಮತ್ತು ಸಂಖ್ಯೆಯಲ್ಲಿ ವ್ಯತ್ಯಾಸವಿರುತ್ತದೆ. ಕೇವಲ ಒಂದೇ ಒಂದು ಕ್ಷಾರ ಬದಲಾದಲ್ಲಿ ಜೀವಿ ವಿಕೃತಿಯನ್ನು ಹೊಂದುತ್ತದೆ. ಜೀವಿಗೆ ಅಡಿಗಲ್ಲು ಪ್ರೋಟೀನ್, ಜೀನು ಪ್ರೋಟೀನ್ ಸಂಶ್ಲೇಷಣೆಗೆ ಅವಶ್ಯವಾದ ಸಂದೇಶಗಳನ್ನು ಹಿಡಿದುಕೊಂಡು ಅವಶ್ಯವಿದ್ದಾಗ ಕಳಿಸುತ್ತದೆ. ಮೂರು ಕ್ಷಾರ ಸರಣಿ ಒಂದು ಸಂಕೇತವೆನಿಸಿಕೊಳ್ಳುತ್ತದೆ. ಉದಾಹರಣೆಗೆ ಕೇವಲ ಗ್ವಾನೀನು ಮಾತ್ರ ಸರಣಿಯಲ್ಲಿದೆ ಎಂದುಕೊಂಡರೆ, ಅದರ ಸಂದೇಶ ಕೇವಲ G ಯನ್ನು ಹೊಂದಿರುತ್ತದೆ. ಹಾಗೆಯೇ ಇದರಿಂದ ಸಂಶ್ಲೇಷಿಸಲ್ಪಟ್ಟ ಪ್ರೋಟೀನಲ್ಲಿ ಒಂದೇ ಒಂದು ಅಮೈನೋ ಆಮ್ಲದ ಸರಣಿಯಿರುತ್ತದೆ. ಪ್ರತಿ ಜೀನಿಗೆ ಸ್ವಯಂ ನಿಯಂತ್ರಣ ಶಕ್ತಿ ಕೂಡ ಉಂಟು. ಅವಶ್ಯಕತೆಯಿದ್ದಾಗ ಮಾತ್ರ ಜೀನ್ ಪ್ರೋಟೀನನ್ನು ಸಂಶ್ಲೇಷಿಸುತ್ತದೆ. ಇಲ್ಲವಾದರೆ ಸ್ಥಿರವಾಗುತ್ತದೆ. ಆದರೆ ಈ

ಡಿ.ಎನ್.ಎ ಸ್ಥಿರವೇನಲ್ಲ. ವಿಕಿರಣ ಮತ್ತು ಕೆಲವು ರಾಸಾಯನಿಕ ವಸ್ತು ಅಥವಾ ಸೂಕ್ಷ್ಮಜೀವಿ ಇದನ್ನು ಧ್ವಂಸಮಾಡಬಲ್ಲವು. ಹೀಗೆ ಧ್ವಂಸಗೊಂಡ ಜೀನುಗಳನ್ನು ಕೆಲವು ಕಿಣ್ವಗಳ ಸಹಾಯದಿಂದ ಪುನಃ ಜೋಡಿಸಬಹುದು. ಹಾಗೆಯೇ ಸಾವಿರಾರು ಜೀನುಗಳಲ್ಲಿ ಒಂದನ್ನು ಆರಿಸಿ, ಅದನ್ನು ತೆಗೆದು, ಅದರ ಸ್ಥಾನದಲ್ಲಿ ಬೇರೆ ಜೀನನ್ನು ಜೋಡಿಸಬಹುದು. ಅದರ ಕ್ರಮ ಹೀಗೆ: ೧. ಕೋಶಗಳನ್ನು ಒಡೆದು, ಅದರಲ್ಲಿರುವ ಡಿ.ಎನ್.ಎ.ಯನ್ನು ಬಿಡಿಸಿ, ಸುಮಾರು ೨೦,೦೦೦ ಕ್ಷಾರಗಳಿರುವಂತೆ ತುಂಡುಮಾಡುವುದು. ಅದರಲ್ಲಿ ಬೇಕಾದುದನ್ನು ಆರಿಸುವುದು. ೨. ಬ್ಯಾಕ್ಟೀರಿಯಾ ಮತ್ತು ವೈರಸುಗಳ ಜೀನುಗಳಿಗೆ ಬೇರೆ ಕೋಶಗಳ ಜೀನುಗಳೊಂದಿಗೆ ಸಂಯೋಗವಾಗುವ ಗುಣವಿದೆ. ಹೊಸ ಜೀನನ್ನು ಬ್ಯಾಕ್ಟೀರಿಯಾದೊಂದಿಗೆ ಜೋಡಿಸಿ, ಬ್ಯಾಕ್ಟೀರಿಯಾಗಳನ್ನು ಬೇರೆ ಬೇರೆಯಾಗಿ ಬೆಳೆಸುವುದರಿಂದ ಹೊಸ ಜೀನುಗಳನ್ನೊಳಗೊಂಡ ಬ್ಯಾಕ್ಟೀರಿಯಾ ಸಂತತಿಗಳ ನಿರ್ಮಾಣವಾಗುತ್ತದೆ. ಬ್ಯಾಕ್ಟೀರಿಯಾ ವೃದ್ಧಿಯಾಗುವುದರ ಜೊತೆಗೆ ಹೊಸ ಜೀನೂ ವೃದ್ಧಿಯಾಗುತ್ತದೆ. ಇಂಥ ಸಂತತಿಯಿಂದ ನಮಗೆ ಅವಶ್ಯವೆನಿಸುವ ಜೀನನ್ನು ಆರಿಸಿಕೊಳ್ಳಬಹುದು. ಈ ಬ್ಯಾಕ್ಟೀರಿಯಾ ಮಾನವಕೋಶಕ್ಕೆ ತನ್ನ ಜೀನನ್ನೂ ಸೇರಿಸುವುದರ ಜೊತೆಗೆ ಹೊಸ ಜೀನನ್ನೂ ಸೇರಿಸುತ್ತದೆ.

ಪ್ಲಾಸ್ಮಿಡ್ ಅಥವಾ ರಿಕಾಂಬಿನೆಂಟ್ ಡಿ.ಎನ್.ಎ. ತಂತ್ರದಲ್ಲಿ ಬ್ಯಾಕ್ಟೀರಿಯಾದ ಚಿಕ್ಕ ಪ್ಲಾಸ್ಮಿಡ್ ಎಂಬ ಡಿ.ಎನ್.ಎ. ಸುರುಳಿಯನ್ನು ಕಿಣ್ವಗಳ ಸಹಾಯದಿಂದ ಕತ್ತರಿಸುತ್ತಾರೆ. ಅದಕ್ಕೆ ಬೇರೆ ಜೀವಿಯ ಜೀನೊಂದನ್ನು ಜೋಡಣೆಮಾಡಿ ಕೂಡಿಸಬಹುದು.

ಒಂದೇ ಗುಂಪಿನ ಪ್ರಾಣಿಗಳ ಜೀನುಗಳಲ್ಲಿ ಹೆಚ್ಚು ಸಾಮ್ಯ ಉಂಟು. ಉದಾಹರಣೆಗೆ ಮಾನವ ಪ್ರಭೇದದಲ್ಲಿ ಯುರೋಪಿಯನ್ ಮತ್ತು ನೀಗ್ರೋ ಗುಂಪಿಗೆ ಅಮೆರಿಕನ್, ಆಸ್ಟ್ರೇಲಿಯನ್ ಮತ್ತು ಏಷಿಯನ್ನರಿಗಿಂತ ಸಾಮ್ಯ ಹೆಚ್ಚು. ಪ್ರಬಲ ವರ್ಣದ್ವೇಷಿಯಾದ ಬಿಳಿಯನಿಗೆ ನೀನು ನೀಗ್ರೋನ ಸಂಬಂಧಿ ಎಂದರೆ ಆತನಿಗೆ ಕೋಪ ಬರಲಾರದೆ? ಹಾಗೆಯೇ ಗೊರಿಲ್ಲಾ, ಚಿಂಪಾಂಜಿ ಮತ್ತು ಮಾನವನಲ್ಲಿ ಕೂಡ ಈ ಸಾಮ್ಯ ಇದೆ. ಗೊರಿಲ್ಲಾ, ಚಿಂಪಾಂಜಿ ಹಾಗೂ ಮಾನವನ ನಡುವೆ ಜೀನು ಸಾಮ್ಯ ಇದಕ್ಕಿಂತ ಸ್ವಲ್ಪ ಕಡಿಮೆ ಅಷ್ಟೆ. ಅಂದರೆ ನಾವು ಇನ್ನೊಬ್ಬನನ್ನು ನೀನು ಕೋತಿ ಎಂದರೆ ಆತ ಕ್ರಾಂತಿಯನ್ನುಂಟು ಮಾಡಲಾರನೆ?

ವಿಕಿರಣಗಳು, ಕೆಲವು ರಾಸಾಯನಿಕ ವಸ್ತುಗಳು ಮುಂತಾದವು ಕ್ಯಾನ್ಸರ್ ಜನಕ ವಸ್ತುಗಳು. ಇವು ಜೀವಿಯ ಮೇಲೆ ಹೇಗೆ ಪರಿಣಾಮ ಬೀರುತ್ತವೆ? ಕ್ಯಾನ್ಸರ್ ಹೇಗೆ ಬರುತ್ತದೆ? ಎಂಬುದು ಈ ತನಕ ತಿಳಿದಿರಲಿಲ್ಲ. ತಾಂತ್ರಿಕ ಬೆಳವಣಿಗೆಯಿಂದ ಇಂದು ನಮಗೆ ಕ್ಯಾನ್ಸರಿಗೆ ಕಾರಣ ತಿಳಿದಿದೆ. ಕ್ಯಾನ್ಸರ್ ಜನಕಗಳು, ಕೋಶಗಳ ಕೆಲವು ಜೀನುಗಳನ್ನು ವಿಕೃತಗೊಳಿಸಿ ಅವುಗಳ ಸ್ವಯಂ ನಿಯಂತ್ರಣ ಶಕ್ತಿಯನ್ನು ಕುಂದಿಸುತ್ತವೆ. ಆಗ ಈ ಜೀನುಗಳು ತಡೆಯಿಲ್ಲದೆ, ನಿಯಂತ್ರಣವಿಲ್ಲದೇ ಪ್ರೋಟೀನನ್ನು ಸಂಶ್ಲೇಷಿಸುತ್ತವೆ. ಇದರ ಪರಿಣಾಮ, ಕೋಶಗಳ ನಿಯಂತ್ರಣರಹಿತ ಬೆಳವಣಿಗೆ. ಇದನ್ನೇ ನಾವು ಕ್ಯಾನ್ಸರ್ ಎನ್ನುತ್ತೇವೆ. ಕ್ಯಾನ್ಸರ್ ಹೊಂದಿದ ಜೀನುಗಳನ್ನು ಈಗಿನ ತಂತ್ರವಿದ್ಯೆಯ ನೆರವಿನಿಂದ ಬೇರೆಡೆಗೆ ಸಾಗಿಸಿ ಕ್ಯಾನ್ಸರ್ ರಹಿತ ಜೀನುಗಳನ್ನು ಈ ಸ್ಥಾನದಲ್ಲಿ ಜೋಡಿಸಬಹುದು. ಅಂದರೆ ಕ್ಯಾನ್ಸರ್ ರೋಗ ಸಂಪೂರ್ಣ ನಿರ್ಮೂಲವಾಗುವ ಕಾಲ ಹತ್ತಿರ ಬಂದಿದೆ ಎಂದರ್ಥವಲ್ಲವೇ?

ನಿಮಗೆ ಮಗು ಜನಿಸುವ ಮೊದಲೇ ಅದರ ಗುಣಗಳನ್ನು ತಿಳಿಯಲು ಸಾಧ್ಯವಿದೆ. ಆಮ್ನಿಯೋ ಸಿಂಥೆಸಿಸ್ ಎಂಬ ವಿಧಾನದಲ್ಲಿ, ಗರ್ಭದಲ್ಲಿ ಬೆಳೆಯುತ್ತಿರುವ ಭ್ರೂಣದ ಕೆಲವು ಕೋಶಗಳನ್ನು ಹೊರತೆಗೆದು, ಅವುಗಳ ಜೀನುಗಳನ್ನು ಗುರುತಿಸಬಹುದು. ನಿಮಗೆ ಜನಿಸುವ ಮಗು ಹೆಣ್ಣೇ? ಗಂಡೇ? ಆನುವಂಶಿಕ ರೋಗಗಳನ್ನು ಹೊಂದಿದೆಯೇ? ಎಂದು ತಿಳಿದುಕೊಳ್ಳಬಹುದು. ನಿಮ್ಮ ಮಗುವಿನ ಭವಿಷ್ಯವನ್ನು ತಿಳಿಯಲು, ನೀವು ಮುಂದೆ ಜ್ಯೋತಿಷಿಗಳನ್ನು ಸಂದರ್ಶಿಸಬೇಕಾಗಿಲ್ಲ. ತಳಿಶಾಸ್ತ್ರಜ್ಞನನ್ನು ಕಂಡು ನೂರಕ್ಕೆ ನೂರರಷ್ಟು ನಿಜವಾಗುವ ಭವಿಷ್ಯವನ್ನು ತಿಳಿದುಕೊಳ್ಳಬಹುದು.

ನೀವು ಮದುವೆಯಾಗುವ ತರುಣರೇ? ಜೋಡಿಯನ್ನು ಸರಿಹೊಂದಿಸುವುದಕ್ಕೆ, ನೀವು ಜಾತಕ ಕುಂಡಲಿಗಳನ್ನು ಹೊಂದಿಸಬೇಕಾಗಿಲ್ಲ. ತಳಿ ಶಾಸ್ತ್ರಜ್ಞ, ನಿಮ್ಮ ಜೊತೆಯನ್ನು ನೋಡಿ, ನಿಮ್ಮ ಜೀನುಗಳನ್ನು ಅಭ್ಯಸಿಸಿ, ನಿಮ್ಮ ಜೋಡಿ ಸರಿಹೊಂದುವುದೇ, ಇಲ್ಲವೇ? ನಿಮ್ಮ ಮಕ್ಕಳು, ನಿಮ್ಮ ಸಂಸಾರ ಹೇಗಿರುತ್ತವೆ ಎಂದು ಹೇಳಬಲ್ಲ. ತಳಿಶಾಸ್ತ್ರಜ್ಞನ ಭವಿಷ್ಯ ನೂರಕ್ಕೆ ನೂರರಷ್ಟು ಸತ್ಯ.

ನಮ್ಮ ಪುರಾಣಗಳ ರಕ್ತಬೀಜಾಸುರರು ಬಂದರೆ ಏನನ್ನುತ್ತೀರಿ? ಕ್ಲೋನಿಂಗ್ ಮೂಲಕ ಮೇಧಾವಿಗಳ ಕೋಶಗಳನ್ನು ಬೆಳೆಸಿ, ಅವುಗಳಿಂದ ನಕಲು ಮೇಧಾವಿಗಳನ್ನು ತಯಾರಿಸುವ ಸಾಧ್ಯತೆಯಿದೆ. ಈ ವಿಧಾನದಿಂದ

ನೂರಾರು ನ್ಯೂಟನ್ನರು, ಕೋಪರ್ನಿಕಸ್‌ರ ಉದ್ಭವವಾದರೆ, ಅವರನ್ನು ನಮ್ಮ ಸಮಾಜ ಸ್ವೀಕರಿಸುವುದೇ?

ಸ್ತ್ರೀಯಾಗಲೀ, ಪುರುಷನಾಗಲೀ ನಿರ್ವೀರ್ಯನಾಗಿದ್ದರೆ, ಆ ಜೋಡಿ ಸಂತಾನವಿಲ್ಲ ಎಂದು ಯೋಚಿಸಬೇಕಾಗಿಲ್ಲ. ವೀರ್ಯಾಣು ಬ್ಯಾಂಕಿಗೆ ಭೇಟಿ ಕೊಟ್ಟು "ನನಗೆ ಇಂತಹ ಮಗು ಬೇಕು, ಅದಕ್ಕೆ ತಕ್ಕ ವೀರ್ಯಾಣುಗಳನ್ನು ಕೊಡಿ" ಎಂದು ಕೇಳಿ ಹಣಕೊಟ್ಟು, ತಮ್ಮದೇ ಆದ ಉತ್ತಮ ಸಂತಾನ ಪಡೆಯಲು ಸಾಧ್ಯವಿದೆ. ಲೈಂಗಿಕ ತೊಂದರೆಗಳಿಂದ ಸ್ತ್ರೀ ಬಂಜೆಯಾಗಿದ್ದರೆ, ಪ್ರನಾಳ ಶಿಶುವಿನ ರೀತಿಯಲ್ಲಿ ತನ್ನದೇ ಗರ್ಭದಲ್ಲಿ ಮಗುವನ್ನು ಹೊತ್ತು ಹಡೆಯ ಬಲ್ಲಳು. ಅಂಗಡಿಗೆ ಹೋಗಿ ಹಣಕೊಟ್ಟು, ಸಿಹಿತಿಂಡಿಯ ಪೊಟ್ಟಣವನ್ನು ಕೊಂಡುತಂದಂತೆ, ಮಗುವಿನ ಭ್ರೂಣವನ್ನು ಅಂಗಡಿಯಿಂದ ಹಣಕೊಟ್ಟು ತರುವ ದಿನ ಬರಬಹುದು.

ಡಯಾಬಿಟೀಸ್, ಹೀಮೋಫೀಲಿಯ, ನೀಲಶಿಶು ಮುಂತಾದ ಆನುವಂಶಿಕ ರೋಗಗಳು ನಿಮ್ಮ ಕುಟುಂಬದಲ್ಲಿ ಯಾರಿಗಾದರೂ ಬರುವ ಸಾಧ್ಯತೆಯಿದ್ದರೆ, ಅದು ಬಾರದಂತೆ ತಡೆಗಟ್ಟಲು ಸಾಧ್ಯವಿದೆ. ಸೂಕ್ಷ್ಮ ಶಸ್ತ್ರಕ್ರಿಯೆಯಿಂದ ಇಂಥ ಜೀನುಗಳನ್ನು ಕತ್ತರಿಸಿ ಉತ್ತಮ ಜೀನುಗಳ ಜೋಡಣೆ ಮಾಡಲು ಸಾಧ್ಯವಿದೆ.


ನಿಮ್ಮ ತೋಟದಲ್ಲಿ ಬೆಳೆಯುವ ತೆಂಗಿನಕಾಯಿ ಚಿಕ್ಕದು ಎಂಬ ಭಾವನೆ ಎಂದಾದರೂ ನಿಮಗೆ ಬಂದಿದೆಯೇ? ಮಾವಿನ ಹಣ್ಣಿನ ಓಟೆ ದಪ್ಪ ಎನಿಸುವುದಿಲ್ಲವೇ? ಹಾಗೆಯೇ ಯಾವುದೇ ದೇಶದಲ್ಲಿ ಆಹಾರ ಧಾನ್ಯಗಳ ಕೊರತೆಯಿದೆಯೇ? ಈ ಎಲ್ಲ ಸಮಸ್ಯೆಗಳಿಗೆ ತಳಿಶಾಸ್ತ್ರಜ್ಞ ಉತ್ತರಿಸಲಿದ್ದಾನೆ. ಅಂದರೆ ಜೀನುಗಳ ಬಗ್ಗೆ ಅಧ್ಯಯನ ಕೇವಲ ಮನುಷ್ಯನಿಗಾಗಲೀ, ಪ್ರಾಣಿಗಾಗಲೀ ಮೀಸಲಾಗಿಲ್ಲ. ಸೂಕ್ಷ್ಮಾತಿಸೂಕ್ಷ್ಮ ಜೀವಿಗಳಿಂದ ಹಿಡಿದು ದೈತ್ಯಪ್ರಾಣಿಗಳು, ದೈತ್ಯ ವೃಕ್ಷಗಳ ತಳಿ ಅಭಿವೃದ್ಧಿಗೆ ಉಪಯೋಗಿಸಿಕೊಳ್ಳಬಹುದು.

ಅಮೆರಿಕಾದ ಕೆಲವು ಕಾರ್ಖಾನೆಗಳು ಜೀನುಗಳನ್ನು ತಯಾರಿಸುತ್ತೇವೆ, ಸೂತ್ರವನ್ನು ಕೊಡಿ ಎಂದು ಕೆಲವು ಜೀವವಿಜ್ಞಾನಿಗಳಿಗೆ ದುಂಬಾಲು ಬಿದ್ದಿವೆಯಂತೆ. ಏಕೆಂದರೆ ಜೀವವಿಜ್ಞಾನಿ ಇಂದು ಜೀನನ್ನು ಪ್ರಯೋಗಶಾಲೆಯಲ್ಲಿ ಪ್ರನಾಳದಲ್ಲಿ ಕಿಣ್ವಗಳ ಸಹಾಯದಿಂದ ತಯಾರಿಸಬಲ್ಲ. ಹಾಗೆ ಕಾರ್ಖಾನೆಗಳು ಜೀನನ್ನು ತಯಾರಿಸುವ ದಿನ ಬಂದರೆ "ಉತ್ತಮ ತಳಿಗಳನ್ನು ಪಡೆಯಲು ABC ಜೀನನ್ನೇ ಉಪಯೋಗಿಸಿ" ಎಂಬ ಜಾಹಿರಾತು ಕೂಡ

ಕೇಳುವಿರಿ.

ಇಷ್ಟೆಲ್ಲ ಬೆಳವಣಿಗೆಗಳಿಗೆ ನಮ್ಮ ಮಡಿವಂತ ಅಥವಾ ಸಂಪ್ರದಾಯಸ್ಥ ಸಮಾಜ ಹೇಗೆ ಪ್ರತಿಕ್ರಿಯೆ ವ್ಯಕ್ತಪಡಿಸಬಹುದು. ಸುಲಭವಾಗಿ ಹೊಂದಿಕೊಳ್ಳುವುದೇ? ಖಂಡಿತವಾಗಿ ಇಲ್ಲ. ಈ ಸಂಶೋಧನೆಗಳು ಪ್ರಪಂಚದಲ್ಲಿ ಇನ್ನೊಮ್ಮೆ ಕ್ರಾಂತಿಯನ್ನೇ ಉಂಟುಮಾಡುತ್ತವೆ ಎನ್ನುವುದರಲ್ಲಿ ಸಂಶಯವಿಲ್ಲ.

ಡಾ|| ಎಸ್. ಎನ್. ಹೆಗಡೆ



ದೇವರ ಪ್ರಪಂಚದಲ್ಲಿ ನಿಷ್ಪ್ರಯೋಜಕವಾದುದು ಯಾವುದೂ ಇಲ್ಲ. ತೃಣವಾದ ಹುಲ್ಲು ಕೂಡಾ ಒಂದಕ್ಕೊಂದು ಹೆಣೆದುಕೊಂಡು ಹಗ್ಗವಾಗಿ ಗಜವನ್ನು ಕೂಡಾ ಬಂಧಿಸಬಲ್ಲ ಶಕ್ತಿಯನ್ನು ಹೊಂದಿರುವದು.

—ಸುಭಾಷಿತ

ಹುಲ್ಲು ಆಹಾರವಾಗಿ ಪಶುಗಳನ್ನು ಪೊರೆಯುವದು. ಉಪಕಾರ ಬುದ್ಧಿಯಿಲ್ಲದ ಮನುಷ್ಯನು ಹುಲ್ಲಿಗಿಂತ ಕೀಳು.

—ಕಾಳಿದಾಸ

ಹಿಂದಿನ ತಪ್ಪು ಮುಂದಿನ ಯಶದ ನಾಂದಿಯಾಗಬಹುದು. ನಮ್ಮ ತಪ್ಪುಗಳಿಂದ ಹಾಗೂ ಅಪಯಶಸ್ಸಿನಿಂದ ನಾವು ಪಾಠ ಕಲಿಯಬೇಕು.

—ಟ್ರೈರನ್ ಎಡ್ವರ್ಡ್

ಸಂಪತ್ತು ಶಾಂತಿ ನೀಡುವದೇ ಇಲ್ಲವೆಂದು ತಿಳಿದವರು ಸಂತೃಪ್ತಿಯಿಂದ ಶಾಂತಿ ಪಡೆಯಬಹುದು. ವಿದ್ಯೆಯಿಂದ ಶಾಂತಿ ಪಡೆಯುವವರು ಕ್ರಿಯೆಯಿಂದ ಶಾಂತಿ ಪಡೆಯಬಹುದು.

—ಫೋರ್ಡ್

ಪ್ರಾಣಿ ಪ್ರಪಂಚದಲ್ಲಿ ವಿಚಿತ್ರಗಳು

ವಿಚಿತ್ರಗಳು ಎಂದರೆ ಆಶ್ಚರ್ಯಕರವಾದಂಥವು, ಬೆರಗುಗೊಳಿಸುವಂಥವು. ಸಾಮಾನ್ಯಕ್ಕಿಂತ ಭಿನ್ನವಾದವು ಎಂದರ್ಥ. ಪ್ರಾಣಿ ಪ್ರಪಂಚದಲ್ಲಿ ಸಾಮಾನ್ಯಕ್ಕಿಂತ ಭಿನ್ನವಾದ, ಅಸಮಾನ್ಯವಾದ, ಅಪರೂಪವಾದ, ವಿಚಿತ್ರ ಪ್ರಾಣಿಗಳು ಅನೇಕವಿವೆ. ಇಂದಿನ ನಿರೂಪಣೆಗೆ ಸಸ್ತನಿ ವರ್ಗಕ್ಕೆ ಸೇರಿದ ಕೆಲವುಗಳನ್ನು ಮಾತ್ರ ಆರಿಸಿಕೊಂಡಿದ್ದೇನೆ.

ದೇಹರಚನೆಯಲ್ಲಿ ಇರುವ ಬೆನ್ನೆಲುಬಿನ ಉಪಸ್ಥಿತಿ ಮತ್ತು ನಿರುಪಸ್ಥಿತಿಯ ಆಧಾರದ ಮೇಲೆ ಪ್ರಾಣಿಗಳನ್ನು ಕಶೇರುಕಗಳು ಮತ್ತು ಅಕಶೇರುಕಗಳೆಂದು ವರ್ಗೀಕರಿಸುತ್ತೇವೆ. ಮೀನುಗಳು ; ಕಪ್ಪೆಗಳ ವರ್ಗವಾದ ಉಭಯಚರಿಗಳು ; ಹಲ್ಲಿ ಹಾವು ಆಮೆ ಮೊಸಳೆಗಳನ್ನೊಳಗೊಂಡ ಸರೀಸೃಪಗಳು ; ಪಕ್ಷಿಗಳು ಮತ್ತು ಸಸ್ತನಿಗಳು ಕಶೇರುಕಗಳ ವಂಶಕ್ಕೆ ಸೇರುತ್ತವೆ. ಮರಿಗಳನ್ನು ಈದು, ತಮ್ಮ ದೇಹದಲ್ಲಿರುವ ಸ್ತನಗಳೆಂಬ ವಿಶೇಷ ಗ್ರಂಥಿಗಳಲ್ಲಿ ಉತ್ಪತ್ತಿಯಾಗುವ ಹಾಲುಣಿಸಿ ಬೆಳೆಸುವ ಮಾನವನೂ ಸೇರಿದಂತೆ ಆಕಳು, ಆಡು, ಹುಲಿ, ಸಿಂಹ, ನಾಯಿ, ಬೆಕ್ಕು, ಕುರಿ, ಕೋತಿ ವಾನರಗಳನ್ನೊಳಗೊಂಡ ಕಶೇರುಕ ವರ್ಗಕ್ಕೆ ಸಸ್ತನಿಗಳೆಂದು ಹೆಸರು. ಸ್ತನಗಳಿರುವುದೊಂದು ವಿಶೇಷ ಲಕ್ಷಣವಾದರೆ ಇದರ ಜೊತೆಗೆ ಇನ್ನೂ ಅನೇಕ ವರ್ಗ ವಿಶಿಷ್ಟವಾದ ಲಕ್ಷಣಗಳಿವೆ. ಉದಾಹರಣೆಗೆ ಈ ಪ್ರಾಣಿಗಳ ದೇಹದ ಮೇಲೆ ಕೂದಲ ಹೊದಿಕೆ ಇರುತ್ತದೆ. ಇವುಗಳ ಚರ್ಮದಲ್ಲಿ ಬೆವರನ್ನು ಉತ್ಪಾದಿಸುವ ಸ್ವೇದಗ್ರಂಥಿಗಳಿವೆ. ಸ್ತನಗ್ರಂಥಿಗಳು ವಾಸ್ತವವಾಗಿ ಮಾರ್ಪಟ್ಟ ಸ್ವೇದಗ್ರಂಥಿಗಳು. ಇವೆಲ್ಲವೂ ಚತುಷ್ಪಾದಿಗಳು, ಕಾಲುಗಳಲ್ಲಿ ಐದೈದು ಬೆರಳುಗಳಿವೆ, ಪುಪ್ಪುಸವಿದ್ದು ಗಾಳಿಯನ್ನು ಉಸಿರಾಡುತ್ತವೆ, ಬಿಸಿರಕ್ತದ ಭೂವಾಸಿಗಳು. ಆದರೂ ಈ ಸಾಮಾನ್ಯ ಚೌಕಟ್ಟಿನಿಂದ ಭಿನ್ನವಾಗಿ ವಿವಿಧ ಪರಿಸರಗಳಿಗೆ ಹೊಂದಿಕೊಂಡು ಅಸಾಮಾನ್ಯವಾದ ಅನೇಕ ಅಪರೂಪದ ವಿಚಿತ್ರ ಸಸ್ತನಿಗಳಿವೆ. ಅವುಗಳನ್ನು ಒಂದೊಂದಾಗಿ ಪರಿಶೀಲಿಸುವ ಪ್ರಯತ್ನ ನಡೆಸೋಣ.

ಉಳಿದೆಲ್ಲ ಸಸ್ತನಿಗಳು ಮರಿಗಳನ್ನು ಈದರೂ ತಮ್ಮ ಪೂರ್ವಜರಾದ ಸರೀಸೃಪಗಳ ಮೊಟ್ಟೆ ಇಡುವ ಲಕ್ಷಣವನ್ನೇ ಇಂದಿಗೂ ಉಳಿಸಿಕೊಂಡು ಬಂದಿರುವ ಎರಡು ಅಪರೂಪದ ಪ್ರಾಣಿಗಳು ಆಸ್ಟ್ರೇಲಿಯ ಖಂಡಕ್ಕೆ ಸೀಮಿತವಾಗಿ ಜೀವಿಸುತ್ತಿವೆ. ಇವೇ ದೇಹದ ಮೇಲೆ ಮುಳ್ಳು ಹೊದಿಕೆ ಇರುವ, ಕೀಟಗಳನ್ನು ತಿನ್ನುವ ಎಕಿಡ್ನ ಮತ್ತು ಬಾತು ಕೊಕ್ಕಿನ ಪ್ಲಾಟಿಪಸ್.

ಟಾಕಿಗ್ಲಾಸಸ್ ಮತ್ತು ಜಗ್ಲಾಸಿಸ್ ಎಂಬ ಎರಡು ಜಾತಿಯ ಎಕಿಡ್ನಗಳು ಆಸ್ಟ್ರೇಲಿಯ ಬಳಿಯ ಟಾಸ್ಮೇನಿಯ ಮತ್ತು ನ್ಯೂಗಿನಿ ಪ್ರದೇಶದಲ್ಲಿ ವಾಸಿಸುತ್ತವೆ. ಇವುಗಳ ದೇಹದ ತುಪ್ಪಳು ಹೊದಿಕೆಯ ನಡುವೆ ಮುಳ್ಳುಗಳಿವೆ. ಆದ್ದರಿಂದಲೇ ಇವಕ್ಕೆ ಮುಳ್ಳು ಕೀಟಾಹಾರಿಗಳೆಂದು ಹೆಸರು ಬಂದಿದೆ. ದೇಹ ಸ್ಥೂಲವಾಗಿ ಮಾಂಸಲವಾಗಿದ್ದರೂ ಮೃದುವಾಗಿದೆ. ಅಗಲವಾದ ಬಲಯುತ ಪಾದಗಳು ತೋಡಲು ಅನುವಾಗಿವೆ. ಕಾಲುಗಳಲ್ಲಿ ೩ ರಿಂದ ೫ ಬಲವಾದ ಬಾಗಿದ ನಖಗಳಿವೆ. ಹಿಂಗಾಲಿನ ಎರಡನೆಯ ಬೆರಳು ಉದ್ದವಾಗಿದ್ದು ತುಪ್ಪಳು, ಚರ್ಮವನ್ನು ಕೆರೆಯಲು, ತುರಿಸಲು ಸ್ವಚ್ಛಗೊಳಿಸಲು ಉಪಯುಕ್ತವಾಗಿದೆ. ಸಣ್ಣ ಕಣ್ಣುಗಳು, ಹಲ್ಲುಗಳಿಲ್ಲದ ಚೊಚ್ಚುಬಾಯಿ, ಕ್ಷಯಿಸಿದ ಬಾಲ, ಗೆದ್ದಲುಗಳಿಕ್ಕೆ ಚುಚ್ಚಿ ತೂರಿಯಲು ಅನುವಾದ ಉದ್ದ ಅಂಟುನಾಲಗೆ ಇವುಗಳ ಜೀವನಕ್ಕೆ ಅನುಕೂಲವಾದ ಲಕ್ಷಣಗಳು. ಅತ್ಯಂತ ವೇಗದಲ್ಲಿ ಬಿಲ ತೋಡಬಲ್ಲವು. ಟೊಳ್ಳುಮರದ ದಿಮ್ಮಿಗಳು, ಬೇರು ಬಂಡೆಗಳ ಸಂದುಗಳು, ಬಿಲಗಳು ವಿಶ್ರಾಂತಿ ಬೀಡುಗಳು. ಹಗಲೆಲ್ಲ ನಿದ್ರೆಯಲ್ಲಿ ಕಳೆದು ಸಂಜೆ ಎದ್ದು ಆಹಾರಾನ್ವೇಷಣೆಗೆ ತೊಡಗುವ ನಿಶಾಚರಿಗಳು. ಶತ್ರುಗಳ ಸುಳಿವು ಸಿಕ್ಕಿದ ಕ್ಷಣ ಬಿಲ ತೋಡಿ ಮುಳ್ಳು ನಖಗಳಿಂದ ಬಿಗಿಯಾಗಿ ಅಪ್ಪಿಕೊಂಡು ಅಡಗಿ ಕುಳಿತುಕೊಳ್ಳುವುದು ಸಾಮಾನ್ಯ. ಹಾಗಿಲ್ಲದೆ ಪರಿಸರ ಗಟ್ಟಿ ನೆಲವಾದರೆ ತೋಡಲು ಅನುಕೂಲವಿಲ್ಲದಿದ್ದರೆ ಚೆಂಡಿನಂತೆ ಮುದುರಿಕೊಂಡು ಮುಳ್ಳುಗಳನ್ನು ಹೊರಚಾಚಿ ಅಭೇದ್ಯವಾಗುವುದೇ ಅಲ್ಲದೆ ಶತ್ರುಗಳಿಗೂ ಹಿಂಸೆ ಹುಟ್ಟಿಸುತ್ತವೆ. ವೇಗವಾಗಿ ಓಡಬಲ್ಲವು ಮತ್ತು ಮರಗಳನ್ನು ಹತ್ತಬಲ್ಲವು. ಋತುಮಾಸದಲ್ಲಿ ಹೆಣ್ಣು ಎಕಿಡ್ನದ ಹೊಟ್ಟೆಭಾಗದಲ್ಲಿ ತಾತ್ಕಾಲಿಕ ಜೋಗುಳಿಯೊಂದು ಬೆಳೆಯುತ್ತದೆ. ಇಡುವ ಒಂದು (ಅಪರೂಪವಾಗಿ ೨ ಅಥವಾ ೩) ಮೊಟ್ಟೆಯನ್ನು ಈ ಜೋಗುಳಿಗೆ ವರ್ಗಾಯಿಸಿ ೭ ರಿಂದ ೧೦ ದಿನಗಳವರೆಗೆ ಕಾವುಕೊಟ್ಟು ಬೆಳೆಸುತ್ತವೆ. ಮೊಟ್ಟೆಯೊಡೆದು ಹೊರಬರುವ ಅಮಾಯಕ ಚಿಕ್ಕ ಮರಿ ಆ ಭಾಗದ ಹಾಲು ಗ್ರಂಥಿಗಳಿಂದ ಒಸರುವ ಹಾಲನ್ನು ನೆಕ್ಕಿ ಬೆಳೆಯುತ್ತದೆ. ಸಾಮಾನ್ಯರಿಗೆ ಅಪರೂಪದ ವಿಚಿತ್ರ ಪ್ರಾಣಿ. ಆದರೆ ಪ್ರಾಣಿಶಾಸ್ತ್ರದ ವಿದ್ಯಾರ್ಥಿಗೆ ಅತಿಶಯದ ಪ್ರಾಣಿ. ಪೂರ್ವಜ ಸರೀಸೃಪಗಳ ಪ್ರಾಚೀನ ಲಕ್ಷಣಗಳನ್ನು ಉಳಿಸಿಕೊಂಡು ಭವಿಷ್ಯದ ಅಂದರೆ ಇಂದಿನ ಸಸ್ತನಿಗಳ ಲಕ್ಷಣಗಳನ್ನು ಮೈಗೂಡಿಸಿಕೊಂಡು ಇಂದಿಗೂ ಉಳಿದಿರುವ ಅತಿ ಮುಖ್ಯ ಪುರಾತನ ಕೊಂಡಿ ಜೀವವಿಕಾಸದಲ್ಲಿ.

ಬಾತು ಕೊಕ್ಕು (ಡಕ್‌ಬಿಲ್) ಮತ್ತು ಪ್ಲಾಟಿಪಸ್ ಎಂದು ಕರೆಯಲ್ಪಡುವ ಆರ್ನಿತೊರಿಂಕಸ್ ಎಂಬುದು ಮತ್ತೊಂದು ತತ್ತಿ ಇಡುವ ಸಸ್ತನಿ. ಪೂರ್ವ ಆಸ್ಟ್ರೇಲಿಯ, ಟಾಸ್ಮೇನಿಯ ದ್ವೀಪಗಳಲ್ಲಿ ಹಳ್ಳ ಕೆರೆಕೊಳಗಳಲ್ಲಿ ವಾಸಿಸುವ ಜಲಚರ. ಎರಡು ಅಡಿ ಉದ್ದ, ಎರಡು ಕೆಜಿ ತೂಕದ ದೊಂಬಣ್ಣ ಅಥವಾ ಕಡು ಕೆಂಪುಬಣ್ಣದ ಪ್ರಾಣಿ. ದೇಹ ದೃಢವಾಗಿದೆ. ಚಪ್ಪಟೆಯಾದ ಬಾಲ ಹುಟ್ಟಿನಂತೆ ಜಲವಾಸಕ್ಕೆ ಅನುಕೂಲವಾಗಿದೆ. ಕಾಲುಗಳು ಮೋಟು ಮತ್ತು ದಪ್ಪ, ಅಗಲವಾದ ಪಾದಗಳು, ಪಾದಗಳಲ್ಲಿ ಇರುವ ಬೆರಳುಗಳಿಗೆ ನಖಗಳಿವೆ. ಮೂತಿ ಉದ್ದವಾಗಿದೆ. ಅದಕ್ಕೆ ಮೃದು ಕೊಂಬಿನ ಹೊದಿಕೆ ಇದ್ದು ಬಾತಿನ ಕೊಕ್ಕಿನಂತೆ ಕಾಣುತ್ತದೆ. ಈ ಮೂತಿಯ ಹೊದಿಕೆಯಲ್ಲಿ ಸಂವೇದನಾ ಶಕ್ತಿ ಇರುವ ಅನೇಕ ರಂಧ್ರಗಳಿವೆ. ಹುಟ್ಟಿದ ಮರಿಗಳಲ್ಲಿ ಹಲ್ಲು ಬೆಳೆದರೂ ಬೆಳೆಯುತ್ತಾ ಹೋದಂತೆ ಅವುಗಳ ಜಾಗದಲ್ಲಿ ಗಟ್ಟಿಯಾದ ಒರಟು ಆಹಾರ ಪ್ರಾಣಿಗಳನ್ನು ಅರೆಯಲು ನೆರವಾಗುವ ಕೊಂಬಿನ ತಟ್ಟೆಗಳು ಬೆಳೆಯುತ್ತವೆ. ಗಂಡು ಪ್ರಾಣಿಯ ಹಿಂಗಾಲಿನಲ್ಲಿ ವಿಷಗ್ರಂಥಿಗಳಿದ್ದು ಶತ್ರು–ಮಿತ್ರರೊಡನೆ ಕಾದಾಟದಲ್ಲಿ ರಕ್ಷಣೆಗೆ ನೆರವಾಗುತ್ತವೆ. ಬೆಳಗು ಮತ್ತು ಸಂಜೆ ಆಹಾರಾನ್ವೇಷಣೆ ನಡೆಸುತ್ತವೆ. ಇವು ಚೆನ್ನಾಗಿ ಈಜಬಲ್ಲವು, ಮುಳುಗಬಲ್ಲವು ಮತ್ತು ನಿಶ್ಚಲವಾಗಿ ತೇಲಬಲ್ಲವು. ಸಾಮಾನ್ಯವಾಗಿ ಒಂದು ನಿಮಿಷದವರೆಗೆ ನೀರಿನಲ್ಲಿ ಮುಳುಗಿರಬಲ್ಲವಾದರೂ ಅಗತ್ಯಬಿದ್ದರೆ ಐದಾರು ನಿಮಿಷಗಳು ನೀರಿನೊಳಗೆ ಇರಬಲ್ಲವು. ಇವು ಎರಡು ಬಗೆಯ ಬಿಲಗಳನ್ನು ನಿರ್ಮಿಸುತ್ತವೆ. ಸ್ವಂತ ವಾಸಕ್ಕೊಂದು. ಸಂತಾನೋತ್ಪತ್ತಿಗೆ ಇನ್ನೊಂದು. ಸೀಗಡಿ, ಶ್ರಿಂಪ್, ಜಲಕೀಟಗಳ ಲಾರ್ವಾಗಳು, ಕಂಬಳಿ ಹುಳು, ಹುಳುಗಳು ಮತ್ತು ಗೊದಮೊಟ್ಟೆಗಳಂತಹ ಜಲಚರ ಪ್ರಾಣಿಗಳನ್ನು ಹಿಡಿದು ತಿನ್ನುತ್ತವೆ. ತಾತ್ಕಾಲಿಕವಾಗಿ ಆಹಾರವನ್ನು ಕೂಡಿಟ್ಟುಕೊಳ್ಳಲು ನೆರವಾಗುವ ಕೆನ್ನೆ ಸಂಚಿಗಳಿವೆ. ಮೊಟ್ಟೆ ಇಟ್ಟ ಹೆಣ್ಣು ಬಾಗಿದ ಬಾಲದ ಕುಣಿಕೆಯಲ್ಲಿ ಒಣ ಎಲೆಗಳನ್ನು ಹೊತ್ತು ತಂದು ಗೂಡುಗಳಲ್ಲಿ ಇಡುತ್ತವೆ. ಇದರಿಂದ ಮೊಟ್ಟೆಗಳು ಒಣಗದಂತೆ ತಡೆಯುತ್ತವೆ. ಒಮ್ಮೆಗೆ ಒಂದರಿಂದ ಮೂರು ಮೊಟ್ಟೆಗಳನ್ನಿಡುತ್ತವೆ. ಕಾವು ಕೊಡುವ ಕಾಲಕ್ಕೆ ಮೊಟ್ಟೆಗಳನ್ನು ಅಪ್ಪಿ ಮಲಗುವುದುಂಟು ಅಥವಾ ಅಂಗಾತ ಮಲಗಿ ಹೊಟ್ಟೆಯಮೇಲಿಟ್ಟುಕೊಂಡು ಕಾಪಾಡುವುದುಂಟು.

ಮೊಟ್ಟೆ ಇಡುವ ಈ ಸಸ್ತನಿಗಳಿಗಿಂತ ವಿಕಾಸದಲ್ಲಿ ಒಂದು ಹೆಜ್ಜೆ ಮುಂದು

ಸಣ್ಣ ಪ್ರಾಣಿಗಳೆಂದರೆ ಮರಿಗಳನ್ನು ಅಪೂರ್ಣ ಬೆಳವಣಿಗೆಯ ಹಂತದಲ್ಲಿ ಹೆತ್ತು, ಹೆಣ್ಣುಪ್ರಾಣಿಯ ಉದರಭಾಗದಲ್ಲಿ ಬೆಳೆದಿರುವ ಜೋಗುಳಿ ಚೀಲದಲ್ಲಿ ಅವುಗಳನ್ನು ಇಟ್ಟು, ರಕ್ಷಿಸಿ, ಪೋಷಿಸಿ ಬೆಳೆಸುವ ಕಾಂಗರೂ ಅಪೋಸಮ್‌ಗಳಂತಹ ಅತಿಶಯದ ಪ್ರಾಣಿಗಳನ್ನೊಳಗೊಂಡ ಮೆಟಥೀರಿಯ ಉಪವರ್ಗ. ಈ ಪ್ರಾಣಿಗಳೂ ಸಹ ಆಸ್ಟ್ರೇಲಿಯ, ಅಮೆರಿಕ ಖಂಡಗಳಿಗೆ ಸೀಮಿತವಾಗಿ ಹರಡಿವೆ. ಕಾಂಗರೂ ನಿಜವಾಗಿ ವಿಚಿತ್ರ ಪ್ರಾಣಿ. ಮುಂಗಾಲುಗಳಿಗಿಂತಲೂ ಉದ್ದವಾದ ಹಿಂಗಾಲುಗಳು ದಪ್ಪನಾಗಿ ಬೆಳೆದು ಕುಳಿತಾಗ ಮೂರನೆಯ ಕಾಲಿನಂತೆ ಆಧಾರ ಒದಗಿಸುವ ಬಾಲ. ನೆಗೆದು ಓಡುವ ಜೀವನಕ್ಕೆ ಹೊಂದಿಕೊಂಡಿದೆ. ನೆಗೆಯುವಾಗ ಬಾಲ ಮತ್ತು ಹಿಂಗಾಲುಗಳನ್ನು ನೆಲಕ್ಕೆ ಒತ್ತಿ ಚಿಮ್ಮಿ ಹಾರುತ್ತದೆ. ಒಂದು ನೆಗೆತ ಸುಮಾರು ಅಡಿಗಳನ್ನು ಹಾಯಬಹುದು. ಹುಲ್ಲು, ಸೊಪ್ಪುಗಳೇ ಇದರ ಆಹಾರ. ಗರ್ಭಾವಸ್ಥೆಯ ೧೩ನೆಯ ದಿನ ಜನಿಸುವ ಇದರ ಶಿಶು ಇನ್ನೂ ಭ್ರೂಣಾವಸ್ಥೆಯಲ್ಲಿರುತ್ತದೆ. ಸ್ಪರ್ಶಜ್ಞಾನ ಮತ್ತು ಘ್ರಾಣೇಂದ್ರಿಯಗಳ ನೆರವಿನಿಂದ ಗರ್ಭದ್ವಾರದಿಂದ ಜೋಗುಳಿ ಚೀಲಕ್ಕೆ ಸ್ವತಃ ತಾನೆ ಸಾಗಿ ಅಲ್ಲಿರುವ ಸ್ತನದ ತೊಟ್ಟನ್ನು ಕಚ್ಚಿಕೊಂಡು ಬೆಳೆಯುತ್ತದೆ. ಬೆಳವಣಿಗೆ ಪೂರ್ಣವಾದ ಮೇಲೂ ತಾಯಿಯೊಡನೆ ಮೇಯುವ ಕಾಲದಲ್ಲಿ ಸಂಚಾರ ಹೊರಟು ಹೊರಬರುವ ಮರಿ ಅಪಾಯದ ಮುನ್ಸೂಚನೆಯೊಡನೆ ತಕ್ಷಣ ಜೋಗುಳಿಯ ರಕ್ಷಣೆಗೆ ಓಡಿಬರುತ್ತದೆ.

ಒಪೋಸಮ್ ಅಮೆರಿಕಕ್ಕೆ ಸೀಮಿತವಾದ ಜೋಗುಳಿಪ್ರಾಣಿ. ಕೂದಲು ವಿರಳವಾದ, ಹುರುಪೆ ಮುಚ್ಚಿದ ಅಪ್ಪುಬಾಲ, ಉದ್ದ ಮೂತಿ. ಬೆನ್ನಾಗಿ ಬೆಳೆದ ಕಿವಿಗಳಿವೆ. ಶತ್ರುಗಳು ಬೆನ್ನಟ್ಟಿ ಬಂದಾಗ ಸತ್ತಂತೆ ಬಿದ್ದು ನಟಿಸುತ್ತದೆ. ಇದರಿಂದಾಗಿ ಒಪೋಸಮ್‌ನಂತೆ ಆಡುವುದು ಎಂಬ ನಾಣ್ನುಡಿಯೇ ರೂಢಿಗೆ ಬಂದಿದೆ. ಇದು ಈ ಪ್ರಾಣಿಯ ರಕ್ಷಣಾಕ್ರಮ. ಕೆಲವು ಮಾಂಸಾಹಾರಿ ಹಿಂಸ್ರಪ್ರಾಣಿಗಳು ನಿರ್ಜೀವ ಪ್ರಾಣಿಗಳನ್ನು ತಿನ್ನುವುದಿಲ್ಲ. ಹಾವು ಕೂಡ ಇದೇ ರೀತಿ ಮಾಡುತ್ತದೆ.

ಪಕ್ಷಿಗಳಷ್ಟೇ ಸಮರ್ಥ ರೀತಿಯಲ್ಲಿ, ಅವುಗಳಿಗೆ ಸರಿಸಾಟಿಯಾಗಿ ಹಾರುವ ಗಾರುಡಿ ವಿದ್ಯೆಯನ್ನು ಮೈಗೂಡಿಸಿಕೊಂಡು ಹಾರುವ ಸಸ್ತನಿಗಳೆಂದರೆ ಬಾವಲಿಗಳು. ಇವನ್ನು ಕಪಟಿಗಳೆಂದು ಕರೆಯುವುದೂ ಉಂಟು. ದೇಹದ ಪಕ್ಕಗಳಲ್ಲಿ ಹರಡುವ ತೆಳು ಪ್ರತ್ಯಾಸ್ತ ಚರ್ಮದ ಪಟಲವು ಉದ್ದವಾಗಿ ಬೆಳೆದ ನಾಲ್ಕು ಕೈಬೆರಳುಗಳ ನಡುವೆ, ಕೈಕಾಲುಗಳ ನಡುವೆ ಮತ್ತು ಕೆಲವರಲ್ಲಿ ಹಿಂಗಾಲುಗಳ

ನಡುವೆ ಬಾಲವನ್ನು ಒಳಗೊಂಡಂತೆ ವಿಸ್ತರಿಸಿ ಬಾವಲಿಗಳ ರೆಕ್ಕೆ ರೂಪುಗೊಂಡಿವೆ. ಇವನ್ನು ಉಪಯೋಗಿಸದಿದ್ದಾಗ ಮಡಿಸಬಹುದು. ಇವುಗಳ ಗಾಳಿಯ ಜೀವನಕ್ಕೆ ನೆರವಾಗುವಂತೆ ಬೆಳೆದ ಮತ್ತೊಂದು ವಿಶೇಷವಿದೆ. ಇವು ನಿಶಾಚರಿಗಳು. ಆದರೂ ತಮ್ಮ ಓಡಾಟಕ್ಕೆ, ಹಾರಾಟಕ್ಕೆ ದೃಷ್ಟಿಜ್ಞಾನವನ್ನು ಅವಲಂಬಿಸುವುದಿಲ್ಲ. ಮೂಗಿನ ತುದಿಯಲ್ಲಿರುವ ಲಾಳಾಕಾರದ ಮತ್ತು ಕಿವಿಯಾಲೆಯ ಬುಡದಲ್ಲಿರುವ ಒಂದು ರೀತಿಯ ವಿಶೇಷ ಸಂವೇದನಾಂಗಗಳ ನೆರವಿನಿಂದ ಈ ಕೊಲೊಕೇಶನ್ ಎಂದು ಕರೆಯುವ ಪ್ರತಿಧ್ವನಿ ನಿರ್ದೇಶನದಂತಹ ಚತುರ ವಿದ್ಯೆಯನ್ನು ಕಂಡುಕೊಂಡು ಹಾರುವ, ಅಭಿ ನಿರ್ದೇಶಿಸಿಕೊಳ್ಳುವ ಹವ್ಯಾಸವನ್ನು ರೂಢಿಸಿಕೊಂಡಿವೆ. ಇದೇ ನಾವು ಇಂದು ಯುದ್ಧಕಾಲದಲ್ಲಿ ವಿಮಾನಯಾನಕ್ಕಾಗಿ ಬಳಕೆಗೆ ತಂದು ಉಪಯೋಗಿಸುತ್ತಿರುವ ೨೦ನೆ ಶತಮಾನದ ವಿಜ್ಞಾನ ಕೊಡುಗೆ ರಾಡಾರ್ ತತ್ವ. ಇದನ್ನು ಈ ಪ್ರಾಣಿಗಳು ಲಕ್ಷಾಂತರ ವರ್ಷಗಳ ಹಿಂದೆಯೇ ಕಂಡುಕೊಂಡಿದ್ದವು, ರೂಢಿಸಿಕೊಂಡಿದ್ದವು. ಹಾರುತ್ತಿರುವಾಗಲೇ ಬಾಯಿ ಅಥವಾ ಮೂಗಿನ ಮೂಲಕ ಮಾನವನ ಶ್ರವಣೇಂದ್ರಿಯಗಳು ಗ್ರಹಿಸಲಾರದ ಅತೀವ ಕಂಪನದ ಅಲೆಗಳನ್ನು ಹೊರಸೂಸುತ್ತವೆ. ಈ ಅಲೆಗಳು ದಾರಿಯಲ್ಲಿ ಅಡ್ಡಬರುವ ವಸ್ತುಗಳಿಗೆ ತಾಗಿ ಪ್ರತಿಫಲಗೊಂಡು ಹಿಂದಿರುಗುತ್ತವೆ. ಈ ಪ್ರತಿಧ್ವನಿಯನ್ನು ಗ್ರಹಿಸಿ, ವಿಶ್ಲೇಷಿಸಿ ಅವುಗಳಿರುವ ದೂರ, ಗಾತ್ರ ಮತ್ತು ಅದರ ರೀತಿಯನ್ನು ತಿಳಿದುಕೊಳ್ಳಬಲ್ಲವು. ಇದೇ ವಿಧಾನದಿಂದ ದೂರದಲ್ಲಿ ಹಾರುತ್ತಿರುವ ಕೀಟಗಳ ಇರುವನ್ನು ಅರಿತು ಅವನ್ನು ಹಿಡಿದು ತಿನ್ನುತ್ತವೆ. ಬಾವಲಿಗಳದು ಸಸ್ತನಿಗಳಲ್ಲಿ ಬಹು ದೊಡ್ಡ ಗುಂಪು. ವೈವಿಧ್ಯ, ಪ್ರಭೇದ ಸಂಖ್ಯೆಗಳಲ್ಲಿ ಮೂಷಿಕ ಗಣಕ್ಕಿಂತ ಸ್ವಲ್ಪ ಚಿಕ್ಕದು. ಅವುಗಳ ಆಹಾರ ನೀತಿಯೂ ಭಿನ್ನ, ಕೆಲವು ಕೀಟಾಹಾರಿಗಳು, ಕೆಲವು ಫಲಾಹಾರಿಗಳು. ಕೆಲವು ಹೂವಿನ ಪರಾಗ ತಿನ್ನುವ, ಮಧುಹೀರುವ ಪುಷ್ಪಾಹಾರಿಗಳು. ಕೆಲವು ರಕ್ತಾಹಾರಿಗಳು. ಕೆಲವು ಪುಟ್ಟ ಸಸ್ತನಿಗಳು, ಪಕ್ಷಿಗಳು, ಹಲ್ಲಿಗಳು ಮತ್ತು ಕಪ್ಪೆಗಳನ್ನು ತಿನ್ನುವ ಮಾಂಸಾಹಾರಿಗಳು. ಮತ್ತೆ ಕೆಲವು ಕಾಲುಗಳ ಸಹಾಯದಿಂದ ಮೀನುಗಳನ್ನು ಹಿಡಿದು ತಿನ್ನುವ ಮತ್ಸ್ಯಾಹಾರಿಗಳು. ರಾತ್ರಿ ಆಹಾರ ಬೇಟೆಯಾಡಿ ಹಗಲು ವಿಶ್ರಮಿಸುವ ಇವುಗಳ ವಿಶ್ರಾಂತಿ ಬಿಡಾರಗಳೂ ಭಿನ್ನ; ಗುಹೆ-ಗಹ್ವರಗಳು, ಗೋಡೆಯ ಸಂದುಗಳು, ಮರದ ಪೊಟರೆಗಳು, ಹಾಳುಬಿದ್ದ ಮನೆ-ಮಂಟಪಗಳು ಅಥವಾ ದೇಗುಲಗಳು. ಮುಂಗಾಲು ತನ್ನ ನೀಳ ಬೆರಳುಗಳಿಂದ ಹಾರುವ ಅಂಗದಲ್ಲಿ

ಸೇರಿಹೋಗಿದೆ. ಹಿಂಗಾಲುಗಳಲ್ಲಿ ಬಾಗಿದ ನಖಗಳಿದ್ದು ವಿಶ್ರಾಂತಿ ಸಮಯದಲ್ಲಿ ದೊರಕುವ ರೆಂಬೆಗಳು, ಸಂದುಗಳು, ಬಿರುಕುಗಳಿಗೆ ನೇತುಬೀಳಲು ನೆರವಾಗುತ್ತವೆ. ತಲೆಕೆಳಗಾಗಿ ನೇತುಬಿದ್ದು ವಿಶ್ರಾಂತಿ ಪಡೆಯುವ ಇವುಗಳ ಈ ಪರಿಪಾಠ ಅವುಗಳ ದೇಹಕ್ರಿಯಾ ವ್ಯಾಪಾರದಲ್ಲಿಯೂ ಅನೇಕ ಬದಲಾವಣೆ ಮತ್ತು ಮಾರ್ಪಾಡುಗಳಿಗೆ ಕಾರಣವಾಗಿದೆ. ಟಿರೋಪಸ್ ಜಾತಿಯ ಬೃಹದಾಕಾರದ ಹಣ್ಣುತಿನ್ನುವ ಬಾವಲಿಗಳಿಗೆ ಹಾರುಬೆಕ್ಕುಗಳೆಂಬ ಹೆಸರಿದೆ. ನೆತ್ತರು ಹೀರುವ ವ್ಯಾಂಪೈರ್ ಬಾವಲಿಗಳು ಹೊಸ ಬಿಸಿರಕ್ತವನ್ನು ಕುಡಿದು ಜೀವಿಸುತ್ತವೆ. ನಿದ್ರೆಯಲ್ಲಿರುವ ಪ್ರಾಣಿಗಳನ್ನು ಹಾರಿಸಿಕೊಂಡು ಅವಕ್ಕೆ ಗೊತ್ತಾಗದ ಹಾಗೆ ಕೂದಲು ಪುಕ್ಕಗಳಿಲ್ಲದ ಚೆತ್ರಲೆ ಭಾಗವನ್ನು ಹುಡುಕಿ ಚೂಪಾದ ಹಲ್ಲುಗಳಿಂದ ಕಚ್ಚಿ ರಕ್ತ ಹೀರುತ್ತವೆ. ಇದರಿಂದಾಗಿ ಸಾಕುಪ್ರಾಣಿಗಳಲ್ಲಿ ರೇಬಿಸ್ ಮುಂತಾದ ಅನೇಕ ರೋಗಗಳನ್ನು ಹರಡುತ್ತವೆ.

ಅತ್ಯಂತ ಅಪರೂಪದ ಮತ್ತು ಅಷ್ಟೇ ಅತಿಶಯದ ಪ್ರಾಣಿಗಳೆಂದರೆ ಕರ್ನಾಟಕದಲ್ಲಿಯೂ ದೊರಕುವ ಚಿಪ್ಪುಹಂದಿಗಳು. ಇವಕ್ಕೂ ಹಂದಿಗಳಿಗೂ ಯಾವ ರೀತಿಯ ಸಂಬಂಧವೂ ಇಲ್ಲ. ಇವು ಆಫ್ರಿಕ–ಏಷ್ಯಾಖಂಡಗಳಲ್ಲಿ ಹರಡಿದ ವಿಜಾತೀಯ ಪ್ರಾಣಿಗಳು. ಇವುಗಳ ದೇಹವು ಅಗಲವಾದ ತಟ್ಟೆಯಂತಿರುವ ಹುರುಪೆಗಳಿಂದ ಆವೃತವಾಗಿದೆ. ಈ ಹುರುಪೆಗಳು ಮುಂದೆ ದೇಹಕ್ಕೆ ಅಂಟಿಕೊಂಡು ಹಿಮ್ಮುಖವಾಗಿ ಬಿಡಿಯಾಗಿ ಮನೆಯ ಹೆಂಚುಗಳನ್ನು ಹೊದಿಸಿದಂತೆ ವ್ಯವಸ್ಥಿತವಾಗಿವೆ. ಹುರುಪೆಗಳನ್ನು ವೈಯಕ್ತಿಕವಾಗಿ ಅಲ್ಲಾಡಿಸಬಹುದು ಮತ್ತು ಅವುಗಳ ಹಿಂದಿನ ತುದಿ ಚಾಕಿನ ಅಲುಗಿನಂತೆ ಚೂಪಾಗಿದೆ. ಹುರುಪೆಗಳ ಬಣ್ಣ ವಾಸಿಸುವ ಪ್ರದೇಶದ ನೆಲದ ಬಣ್ಣವನ್ನನುಸರಿಸಿ ಕಡುಕಂದು ಅಥವಾ ಅರಿಶಿನ ಬಣ್ಣವಾಗಿರಬಹುದು. ಚಿಕ್ಕದಾದ ಚೂಪಾದ ತಲೆ, ದಪ್ಪ ಹುಬ್ಬಿನ ರಕ್ಷಣೆಯಲ್ಲಿ ಅಡಗಿರುವ ಪುಟ್ಟ ಕಣ್ಣುಗಳು, ೧೦ ಅಂಗುಲದವರೆಗೂ ಚಾಚಬಹುದಾದ ಚಾಟಿಯಂತಿರುವ ಅಂಟುನಾಲಗೆ. ಇದು ಕೀಟಾಹಾರಿ. ಗೆದ್ದಲು, ಇರುವೆಗಳನ್ನು ತಿಂದು ಬದುಕುತ್ತದೆ. ಇವು ಭೂವಾಸಿಗಳು ಮತ್ತು ನಿಶಾಚಾರಿಗಳು. ನಿಧಾನವಾಗಿ ತತ್ತರಿಸಿ ನಡೆಯುವ ಅಂಜುಬುರುಕ ಪ್ರಾಣಿಗಳು. ನಿರಾಪದಿಗಳು. ಅಪಾಯ ಎದುರಾದಾಗ, ಶತ್ರುಗಳು ಅಟ್ಟಿಸಿಕೊಂಡು ಬಂದಾಗ ಚೆಂಡಿನಂತೆ ಮುದುರಿಕೊಂಡುಬಿಡುತ್ತವೆ, ಹೊರಗೆ ಹುರುಪಿನ ಚೂಪು ಮೊನೆಗಳು ನಿಮಿರಿ ನಿಲ್ಲುತ್ತವೆ. ಯಾವ ಶತ್ರುವೂ ಇದನ್ನು ಮುಟ್ಟದಂತೆ ಅಭೇದ್ಯವಾಗಿ ಉಳಿಯುತ್ತದೆ. ಹುರುಪೆಗಳು ಶತ್ರುವಿನ ಚೂಪಾದ ಹಲ್ಲು

ನಖಗಳಿಂದ ರಕ್ಷಣೆ ಒದಗಿಸುವುದೇ ಅಲ್ಲದೆ, ಹುರುಪೆಗಳ ಚೂಪು ಅಂಚುಗಳು ಶತ್ರುವನ್ನು ಹೆದರಿಸುತ್ತವೆ. ಇವು ತೋಡುವ ಪ್ರಾಣಿಗಳು. ಇದರಿಂದ ಹುತ್ತ-ಇರುವೆ ಗೂಡುಗಳನ್ನು ತೋಡಿ ಆಹಾರ ಹುಡುಕುತ್ತವೆ. ಬಾಲವು ಬಾಗಬಲ್ಲುದು. ಇದರ ನೆರವಿನಿಂದ ಮರಗಳನ್ನು ಹತ್ತಬಲ್ಲವು. ಬಿಲ-ಪೊಟರೆಗಳಲ್ಲಿ ವಾಸಿಸುತ್ತವೆ.

ಮೂಲದಲ್ಲಿ ಭೂವಾಸಿಗಳಾದರೂ ಜಲವಾಸಕ್ಕೆ ತೆರಳಿ ಯಶಸ್ವಿ ಜಲಚರಗಳಾದ ಸಸ್ತನಿಗಳೆಂದರೆ ತಿಮಿಂಗಿಲಗಳು. ನೂರಾರು ಅಡಿ ಉದ್ದ ಇರುವ ಕಡಲ ದಾನವಗಳು. ಅತ್ಯಂತ ದೊಡ್ಡದಾದ ನೀಲಿ ತಿಮಿಂಗಿಲ ೧೦೦ ಅಡಿಗೂ ಮಿಕ್ಕು ಉದ್ದ, ೧೩೬ ಮೆಟ್ರಿಕ್ ಟನ್ನುಗಳಷ್ಟು ತೂಕ. ಈ ಬೃಹದಾಕಾರದ ಪ್ರಾಣಿಯು ನೆಲದ ಮೇಲೆ ಜೀವಿಸುವುದು ಸಾಧ್ಯವಿಲ್ಲ. ಈ ದೇಹದ ಭಾರ ಹೊತ್ತು ನಡೆಯುವ ಕಾಲುಗಳನ್ನು ಪ್ರಾಣಿಗಳಲ್ಲಿ ರೂಪುಗೊಂಡಿಲ್ಲ. ನೀರಿನ ಜೀವನಕ್ಕೆ ಅನುರೂಪವಾಗಿ ದೇಹ ಮೀನಿನಾಕಾರ ತಾಳಿದೆ. ನೀರಿನ ಜೀವನದಲ್ಲಿ ಅನವಶ್ಯವಾದ ಕೈಕಾಲುಗಳು ಕಳೆದುಹೋಗಿವೆ. ಹಿಂಗಾಲುಗಳು ಸಂಪೂರ್ಣ ಕಳೆದು ಮುಂಗಾಲುಗಳು ಹುಟ್ಟುಗಳಾಗಿ ಮಾರ್ಪಟ್ಟಿವೆ. ಡಾರ್ಸಲ್ ಈಜುರೆಕ್ಕೆ, ಬಾಲದ ಅಡ್ಡ ಹರಡಿದ ಈಜುರೆಕ್ಕೆ ಜೊತೆಗೂಡಿ ನೀರಿನಲ್ಲಿ ಚಲನೆಯನ್ನು ನಿರ್ದೇಶಿಸುತ್ತವೆ. ತಲೆಯ ಮೇಲಿರುವ ಕೆಲವು ಬಿರುಗೂದಲುಗಳು ವಿನಾ ದೇಹವೆಲ್ಲ ರೋಮರಹಿತ, ಚರ್ಮದ ಕೆಳಗೆ ದಪ್ಪ ಎಣ್ಣೆ-ಕೊಬ್ಬುಗಳಿಂದ ಕೂಡಿದ ಬ್ಲಬ್ಬರ್ ಹೊದಿಕೆ. ಇದು ದೇಹದ ತಾಪವನ್ನು ನಿಯಂತ್ರಿಸಲು ನೆರವಾಗುತ್ತದೆ. ನೀರಿನ ಜೀವನದಿಂದಾಗಿ ಹೊರಕಿವಿಗಳು ಕಳೆದುಹೋಗಿವೆ. ಆದರೂ ಅವುಗಳಲ್ಲಿ ಸೂಕ್ಷ್ಮಾತಿಸೂಕ್ಷ್ಮ ಶ್ರವಣಜ್ಞಾನ ಕಂಡುಬರುತ್ತದೆ. ರಾಸಾಯನಿಕ ವಸ್ತುಗಳ ಮೂಲಕ ವಿಚಾರವಿನಿಮಯ ನಡೆಸುತ್ತವೆ ಮತ್ತು ಇವುಗಳಲ್ಲಿಯೂ ಒಂದು ರೀತಿಯ ಸಂಗೀತಭಾಷೆ ಇದೆ ಎಂದು ಇತ್ತೀಚಿನ ಸಂಶೋಧನೆಗಳಿಂದ ತಿಳಿದುಬಂದಿದೆ. ಬಾಯಲ್ಲಿ ಹಲ್ಲುಗಳು ಇರಬಹುದು ಅಥವಾ ಇಲ್ಲದಿರಬಹುದು. ಇದ್ದರೂ ಕುಚ್ಚುಗಳಂತೆ ಮಾರ್ಪಟ್ಟು ನೀರನ್ನು ಶೋಧಿಸಿ ಅದರಲ್ಲಿರುವ ಸಣ್ಣಪುಟ್ಟ ಪ್ರಾಣಿಗಳನ್ನು ಆರಿಸಿ ತಿನ್ನಲು ಸಹಕರಿಸುತ್ತವೆ. ಕಡಲ ಆಕಳುಗಳೆಂದು ಕರೆಯುವ ಡಾಲ್ಫಿನ್‌ಗಳು ಕೆಲವೊಮ್ಮೆ ಭ್ರಮಾನ್ವಿತ ನಾವಿಕರಿಗೆ ಮತ್ಸ್ಯಕನ್ನೆಯರಂತೆ ಕಂಡುಬಂದಿವೆ. ಇವೂ ಕೂಡ ತಿಮಿ ಗಣಕ್ಕೆ ಸೇರಿದ ಜಲವಾಸಿ ಸಸ್ತನಿಗಳು.

ತಲೆಯ ಮೇಲೆ ಕೊಂಬಿರುವುದು ಆಕಳು-ಜಿಂಕೆಗಳಲ್ಲಿ ಸಾಮಾನ್ಯ. ಆದರೆ ಮೂಗಿನ ಮೇಲೆ ಒಂದೋ ಎರಡೋ ಕೊಂಬುಗಳನ್ನು ಪಡೆದ ಖಡ್ಗಮೃಗ

ಅಥವಾ ಘೇಂಡಾಮೃಗ ಅಸಮಾನ್ಯ ಸಸ್ತನಿ. ಏಶ್ಯಾ, ಆಫ್ರಿಕ ಖಂಡಗಳಿಗೆ ಸೀಮಿತವಾಗಿದೆ. ಕಾಲುಗಳಲ್ಲಿ ಮೂರು ಬೆರಳುಗಳಿರುವ ಏಕಖುರ ಗೊರಸು ಸಸ್ತನಿಗಳು. ಜೌಗುಪ್ರದೇಶದಲ್ಲಿ ವಾಸಿಸುವ ಸಸ್ಯಾಹಾರಿ. ದೇಹದ ರೋಮ ಹೊದಿಕೆ ಕಳೆದು ಕಿವಿಯ ಸುತ್ತ ಮತ್ತು ಬಾಲದ ತುದಿಯಲ್ಲಿ ಕುಚ್ಚುಗಳಂತೆ ಮಾತ್ರ ಉಳಿದಿದೆ. ಈ ಪ್ರಾಣಿಯ ಕೊಂಬುಗಳು ಕೂದಲುಗಳು ಕೂಡಿ ನಿರ್ಮಾಣವಾದ ವಿಶಿಷ್ಟ ರಚನೆಗಳು. ತಲೆಬುರುಡೆಯ ಮೂಳೆಗೂ ಇವಕ್ಕೂ ಸಂಬಂಧವಿಲ್ಲ ಮತ್ತು ಇವು ಇತರ ಸಸ್ತನಿಗಳ ಕೊಂಬುಗಳಿಂದ ಭಿನ್ನ. ಕೆಸರಿನಲ್ಲಿ ಹೊರಳಾಡುವ ಸಾಧು ಸ್ವಭಾವದ ಪ್ರಾಣಿ. ಅಪಾಯ ಎದುರಾದಾಗ ಹಿಂದೆ ಸರಿಯುವುದೇ ಸ್ವಭಾವವಾದರೂ ಸಿಟ್ಟು ಬಂದಾಗ, ಜೊತೆಯಲ್ಲಿ ಕರುವಿದ್ದಾಗ ಮೇಲೆ ಬೀಳುತ್ತದೆ ಮತ್ತು ಚೂಪು ಕೋರೆಹಲ್ಲುಗಳಿಂದ ತಿವಿಯುತ್ತದೆ. ಬೆಳಗು ಸಂಜೆಯಲ್ಲಿ ಆಹಾರಾನ್ವೇಷಣೆ. ಮಧ್ಯಾಹ್ನ ನಿದ್ರೆಯ ಜೊಂಪು ಇವುಗಳ ವಾಡಿಕೆ. ಈ ಪ್ರಾಣಿಯ ಕೊಂಬು, ರಕ್ತ, ಮೂತ್ರಗಳಿಗೆ ಮಾಂತ್ರಿಕ ಔಷಧ ಗುಣವಿದೆ ಎಂಬ ವಾಡಿಕೆ. ಜೊತೆಗೆ ಕಾಮೋದ್ದೀಪಕ ಶಕ್ತಿಯುಂಟೆಂಬ ಭ್ರಮೆ. ಒಂದು ಕೊಂಬಿಗೆ ಲಕ್ಷಾಂತರ ಬೆಲೆ. ಹೀಗಾಗಿ ನಿಷ್ಕರುಣೆಯಿಂದ ಲಾಭಕ್ಕಾಗಿ ಈ ಪ್ರಾಣಿಗಳ ಭೇಟೆ. ಪರಿಣಾಮವಾಗಿ ಇಂದು ಅವಸಾನದ ಅಂಚಿನಲ್ಲಿರುವ ಪ್ರಾಣಿ. ಆದರೆ ಮಾನವನ ದುರಾಸೆ, ಮೂಢನಂಬಿಕೆ ಬದಲಾಗದೆ ಬಹಳಷ್ಟು ಪ್ರಾಣಿಗಳಿಗೆ ಉಳಿಗಾಲವಿಲ್ಲ.

ಕೆಲವು ತಿಂಗಳ ಹಿಂದೆ ರಾಮನಗರದ ಬಳಿ ದೊರಕಿ ಅಪರೂಪದ ಪ್ರಾಣಿ ಎಂದು ಪತ್ರಿಕೆಗಳಲ್ಲಿ ಪ್ರಚಾರವಾದ ಪ್ರಾಣಿ ವಾಸ್ತವವಾಗಿ ನೀರುನಾಯಿ. ಕರ್ನಾಟಕದ ನದಿಗಳಲ್ಲೆಲ್ಲ ಕಂಡುಬರುತ್ತದೆ. ಹರಿಯುವ ನೀರಿನ ಜೀವನಕ್ಕೆ ಹೊಂದಿಕೊಂಡ, ಮೀನು ಭೇಟೆಯಲ್ಲಿ ನಿಷ್ಣಾತನಾದ ಅತಿಶಯದ ಸುಂದರ ಸಸ್ತನಿ. ನಯವಾದ ನವಿರು ತುಪ್ಪಳು ಪಡೆದ ನುಣುಪಾದ ದೇಹ ಈಜಲು ನೀರಲ್ಲಿ ಮುಳುಗಲು ಅನುವಾಗಿದೆ. ನದಿಯಲ್ಲಿ ದೊರಕುವ ಮೀನು, ಕಪ್ಪೆ ಮುಂತಾದ ಜಲಜಂತುಗಳನ್ನು ತಿಂದು ಬದುಕುತ್ತಿದ್ದ ಈ ಪ್ರಾಣಿ ಇತ್ತೀಚಿಗೆ ವಿಸ್ಮಯವಾದ ಉದಾಹರಣೆ. ನದಿಗಳಿಗೆ ಕಟ್ಟಿದ ಅಣೆಕಟ್ಟುಗಳ ಬಳಿ ಸರ್ಕಾರದ ಮೀನುಗಾರಿಕೆ ಇಲಾಖೆ ಸ್ಥಾಪಿಸಿದ ಮೀನು ಬೆಳೆಸುವ ಕೇಂದ್ರಗಳಲ್ಲಿ ಸುಲಭವಾಗಿ ದೊರಕುವ ಮೀನು ಮೊಟ್ಟೆ ಮರಿಗಳಿಗೆ ಎರಗಿ ಮಾರಕವಾಗಿ ರೂಪುಗೊಳ್ಳುತ್ತಿದೆ. ಮನುಷ್ಯನ ಕೈವಾಡ ಪ್ರಾಣಿ ಜೀವನವನ್ನು ಮಾರ್ಪಡಿಸಿದ ಒಂದು ಉದಾಹರಣೆ.

ಹೀಗೆ ತಮ್ಮ ಅಸಾಮಾನ್ಯ ದೇಹರಚನೆ, ಅತಿಶಯ ವೈವಿಧ್ಯ ಹೊಂದಾಣಿಕೆಗಳಿಂದ ಅಪರೂಪದ ಪ್ರಾಣಿಗಳಾಗಿ ವಿಕಾಸದಲ್ಲಿ ಭಿನ್ನರೂಪಗಳು ಕಾಣಿಸಿಕೊಳ್ಳಲು ಕಾರಣವಾಗಿ, ಪ್ರಕೃತಿಯ ಅನ್ಯ ಒತ್ತಡವನ್ನು ತಾಳಿಕೊಂಡು ಬದುಕಿದ ಈ ದಾಷ್ಟಿಕ ಪ್ರಾಣಿಗಳ ವಿಷಯದಲ್ಲಿ ಮನುಷ್ಯ ಕರುಣೆ ತೋರಿದರೆ ತಾನೂ ಬದುಕಿ, ಅವೂ ಬದುಕಿ ಪ್ರಕೃತಿಯ ಸಮತೋಲನ ಉಳಿದು ಬದುಕು ಬಂಗಾರವಾದೀತು.

ಡಾ॥ ಎಸ್. ಬಿ. ದೇವರಾಜ ಸರ್ಕಾರ್



ಮಾಗಿದ ಪದರೆಯನ್ನು ಸಹಿಸಿಯೇ ಸುಖದ ಕಿರಣಗಳು ನಮ್ಮ ಬಳಿಗೆ ಬರುತ್ತವೆ. ಕಾಳರಾತ್ರಿಯ ಜವನಿಕೆಯನ್ನು ಸಹಿಸಿಯೇ ಪ್ರಕಾಶದ ಸೂರ್ಯ ಕಿರಣಗಳೂ ಬರಬೇಕಲ್ಲವೇ?

—[illegible]

ಒಳ್ಳೆಯದನ್ನು ಇತರರಿಗೆ ಹೇಳಲು [illegible] ಅಶಕ್ತರು. ಆದರೆ ಕೆಟ್ಟದ್ದನ್ನು ಹೇಳಲು ಜನರು ಹೆಚ್ಚು ಶಕ್ತಿವಂತರಾಗಿದ್ದಾರೆ.

—[illegible]

ಪ್ರಪಂಚದಲ್ಲಿ ಅತ್ಯಂತ ಮಹಾನ ಕಲೆ ಮತ್ತು ಕಲಿಯಲು ಕಠಿಣವಾದ ಕಲೆ ಜೀವನ ಕಲೆಯಾಗಿದೆ.

—ಜೋನ್ [illegible]

ಪ್ರಪಂಚದಲ್ಲಿ ಮನುಷ್ಯನೊಬ್ಬನೇ ಅಳಲು ಮತ್ತು ನಗಲು ಕಲಿತವನು. ಇವನ್ನು ಮಾಡಬೇಕು ಮಾಡಬಾರದು ಎಂಬುದನ್ನು ಮಾತ್ರ ಯೋಗ್ಯ ಸಂದರ್ಭಾನುಸಾರವನ್ನು ಆತ ಕಲಿತಿಲ್ಲ.

—ವಿಲಿಯಂ ಹಜ್ಲಿಟ್

ಕೆಂಗಣ್ಣು ರೋಗ

ನಿಮ್ಮ ಆರೋಗ್ಯ :

ಕೆಂಗಣ್ಣು ರೋಗ ಅಥವಾ 'ಕಣ್ಣಿನ ಅದ್ರ್ರಚರ್ಮದ ಊತ' ಒಂದು ಅತಿ ಬೇಗ ಹರಡುವ ಸಾಂಕ್ರಾಮಿಕ ರೋಗ. ಈ ರೋಗ ಬ್ಯಾಕ್ಟೀರಿಯ, ಫಂಗಸ್ ಅಥವಾ ವೈರಸ್‌ಗಳಿಂದುಂಟಾಗಬಹುದು. ಕಣ್ಣಿನ ಬಿಳಿಯಭಾಗವನ್ನು ಆಚ್ಛಾದಿಸಿರುವ ತೆಳುವಾದ ಪಾರದರ್ಶಕ ಚರ್ಮ ಪೊರೆಯ ಮತ್ತು ಕಣ್ಣಿನ ರೆಪ್ಪೆಗಳ ಒಳಭಾಗಗಳ ಊತವೇ ಈ ರೋಗ. ಕಣ್ಣುರೆಪ್ಪೆಯ ಒಳಮೈಯನ್ನೂ ಕಣ್ಣುಗುಡ್ಡೆಯನ್ನೂ ಆವರಿಸಿರುವ ಅದ್ರ್ರಚರ್ಮಕ್ಕೆ 'ಕಾಂಜಂಕ್ಟೈವಾ' ಎಂದು ಹೆಸರು; ಇದರ ಊತವೇ ಈ ರೋಗ.

ಈ ರೋಗ ಸಾಮಾನ್ಯವಾಗಿ ಅಪಾಯಕಾರಿಯಲ್ಲದಿದ್ದರೂ ಸೂಕ್ತ ಚಿಕಿತ್ಸೆ ನೀಡದಿದ್ದರೆ ಕಣ್‌ದೃಷ್ಟಿಗೆ ಹಾನಿಯುಂಟಾಗಬಹುದು.

ಕಣ್ಣಿನ ಅದ್ರ್ರಚರ್ಮದ ಊತ ಇದ್ದಕ್ಕಿದ್ದಹಾಗೆ ಶುರುವಾಗುತ್ತದೆ. ರೋಗ ಲಕ್ಷಣಗಳು ಕಾಣಿಸಿಕೊಂಡ ನಂತರದ ನಾಲ್ಕಾರು ಗಂಟೆಗಳಲ್ಲೇ ಅದು ತೀವ್ರವಾಗಬಹುದು.

ಕಣ್ಣಿನ ಅದ್ರ್ರಚರ್ಮದ ಊತ ಎಲ್ಲರಿಗೂ ಬರಬಹುದು. ಆದರೆ ಐದುವರ್ಷಗಳ ಒಳಗಿನ ಮಕ್ಕಳಲ್ಲಿ ಈ ರೋಗದ ಸೋಂಕಿನ ಸಂಭವ ಹೆಚ್ಚು.

ರೋಗ ಲಕ್ಷಣಗಳು :

* ಈ ರೋಗ ಒಂದು ಕಣ್ಣೋ ಅಥವಾ ಎರಡು ಕಣ್ಣುಗಳಲ್ಲೋ ಉರಿಯುಂಟಾಗುವುದರಿಂದ ಶುರುವಾಗುತ್ತದೆ.
* ಕಣ್ಣುಗಳು ಕೆಂಪಗಾಗುತ್ತವೆ.
* ಕಣ್ರೆಪ್ಪೆಗಳು ಊದಿಕೊಳ್ಳುತ್ತವೆ.
* ಮೊದಲಿಗೆ ನೀರಿನಂಥದೋ ಅಥವಾ ಲೋಳೆಯಂಥದೋ ಪದಾರ್ಥ ಕಣ್ಣಿನಿಂದ ಒಸರುತ್ತಿರುತ್ತದೆ.
* ನಂತರ ಮಂದವಾದ ಬಿಳಿಯ ಅಥವಾ ತೆಳು ಹಳದಿ ಬಣ್ಣದ ವಸ್ತು ಕಣ್ಣಿನಿಂದ ಒಸರಿ ಕಣ್ಣುಗಳಲ್ಲಿ ಸಂಗ್ರಹಗೊಳ್ಳುತ್ತಿರುತ್ತದೆ.
* ಮುಂದೆ ಕಣ್ಣು ತೆರೆಯುವುದು ಕಷ್ಟವಾಗುತ್ತದೆ.

'ಸ್ವಸ್ಥ ಹಿಂದ್' ಆಂಗ್ಲ ಮಾಸಿಕದ ಕೃಪೆ. ಸೆಪ್ಟೆಂಬರ್ ೮೦ರ ಸಂಚಿಕೆ.

* ರೋಗಿ ಪ್ರಕಾಶಮಾನವಾದ ಬೆಳಕನ್ನು ನೋಡಲು ಹಿಂದೆಗೆಯುತ್ತಾನೆ.
* ಚಿಕಿತ್ಸೆ ನೀಡದಿದ್ದರೆ ಕಣ್ಣುಗುಡ್ಡೆಯ ಪಾರದರ್ಶಕ ಪಟಲದಲ್ಲಿ ಹುಣ್ಣುಗಳುಂಟಾಗುತ್ತವೆ. ಹಾಗಾಗಿ ಶಾಶ್ವತವಾಗಿ ಕಣ್ಣುಗುಡ್ಡೆಯ ಪಾರದರ್ಶಕ ಪಟಲ ನಿಷ್ಪಾರದರ್ಶಕವಾಗಬಹುದು. (ತನ್ನಲ್ಲಿ ಬೆಳಕನ್ನು ಹಾಯಿಸದ) ಕಣ್ದೃಷ್ಟಿ ಶಾಶ್ವತವಾಗಿ ಹಾನಿಗೊಳಗಾಗಬಹುದು.

ರೋಗ ಹರಡುವ ಬಗೆ:

* ರೋಗಾಣುಗಳನ್ನೊಳಗೊಂಡ ರೋಗಿಯ ಟವೆಲ್ಲು, ಕರವಸ್ತ್ರಗಳು ಮತ್ತು ಇನ್ನಿತರೆ ಅಂಥಹ ಬಟ್ಟೆಗಳ ಬಳಕೆ ಮತ್ತು ಕಲುಷಿತ ಬೆರಳುಗಳಿಂದ ಈ ರೋಗ ಹರಡುತ್ತದೆ.
* ರೋಗಿ ಬಳಸುವ ಇನ್ನಿತರೆ ಪದಾರ್ಥಗಳ ಸ್ಪರ್ಶದಿಂದಲೂ ಈ ರೋಗ ಹರಡಬಹುದು.
* ನೊಣಗಳೂ ಮತ್ತು ನುಸಿಗಳೂ ರೋಗಿಯಿಂದ ಬೇರೆಯವರಿಗೆ ಈ ರೋಗವನ್ನು ಹರಡುತ್ತಿರುತ್ತವೆ.
* ಧೂಳು, ಕಸ, ಹೊಗೆ ಮತ್ತು ಮಲಿನಗೊಂಡ ನೀರನ್ನು ಸ್ನಾನಕ್ಕಾಗಿ ಬಳಸುವುದರಿಂದ ಮತ್ತು ಈ ರೋಗದಿಂದ ನರಳುತ್ತಿರುವವರು ಬಳಸುವ ಕಣ್ಕಪ್ಪು ಮುಂತಾದ ಪ್ರಸಾಧನ ಪದಾರ್ಥಗಳನ್ನು ಬೇರೆಯವರು ಬಳಸುವುದರಿಂದ ಈ ರೋಗ ಬರಬಹುದು.

ಸೂಕ್ತ ಚಿಕಿತ್ಸೆಯನ್ನು ನೀಡಿದರೆ ಈ ರೋಗವನ್ನು ನಾಲ್ಕರಿಂದ ಆರುದಿನಗಳಲ್ಲೇ ವಾಸಿಮಾಡಬಹುದು. ರೋಗಿಗಳು ಆಸ್ಪತ್ರೆ ಸೇರುವ ಅವಶ್ಯಕತೆಯಿಲ್ಲ.

ರೋಗ ಬರದಂತೆ ತಡೆಗಟ್ಟುವ ಬಗೆ:

ಸ್ವಚ್ಛವಾಗಿರುವುದರಿಂದ ಮತ್ತು ಸಾಮಾನ್ಯ ಆರೋಗ್ಯ ನಿಯಮಗಳನ್ನು ಪಾಲಿಸುತ್ತಾ, ಮನೆ ಸುತ್ತಮುತ್ತಲಿನ ಜಾಗಗಳಲ್ಲಿ ಕಸಕಡ್ಡಿ ಇರದಂತೆ ಸ್ವಚ್ಛವಾಗಿಡುವುದರಿಂದ ಈ ರೋಗ ಬರದಂತೆ ತಡೆಗಟ್ಟಬಹುದು. ರೋಗಿ ಬಳಸುವ ಟವೆಲ್ಲುಗಳು, ಕರವಸ್ತ್ರಗಳು ಮತ್ತು ಇನ್ನಿತರೆ ದಿನಬಳಕೆ ಬಟ್ಟೆಬರೆಗಳನ್ನು ಬೇರೆಯವರು ಸ್ವಚ್ಛಮಾಡದೆ ಬಳಸಬಾರದು. ಹೆಚ್ಚು ಜನ ಒಂದೇ ಕಡೆ ಸಾಂದ್ರವಾಗಿ ಸೇರದಂತೆ ನೋಡಿಕೊಳ್ಳಬೇಕು. ರೋಗಿ ಬಳಸಿದ ಟವೆಲ್ಲುಗಳು,

ಕರವಸ್ತ್ರಗಳನ್ನು ಮತ್ತೆ ಬಳಸುವುದಕ್ಕೆ ಮೊದಲು ಸಾಧ್ಯವಾದರೆ ಬಿಸಿನೀರಿನಿಂದ ಅದನ್ನು ಸ್ವಚ್ಛಮಾಡಬೇಕು.

ಈ ರೋಗದಿಂದ ನರಳುವ ಮಕ್ಕಳು ಕಾಹಿಲೆ ವಾಸಿಯಾಗುವವರೆಗೆ ಶಾಲೆಗೆ ಹೋಗಬಾರದು.

ಹೆಚ್ಚು ಬೆಳಕು ಕಣ್ಣಿಗೆ ಬೀಳದಂತೆ ಕಣ್ಣುಗಳನ್ನು ಕಪ್ಪು ಕನ್ನಡಕಗಳನ್ನು ಧರಿಸಿ ರಕ್ಷಿಸಬೇಕು. ಛತ್ರಿಗಳನ್ನು ಬಳಸುತ್ತಲೋ ಅಥವಾ ಸ್ವಚ್ಛವಾದ ಬಟ್ಟೆ ತುಂಡನ್ನು ತಲೆಯ ಮೇಲೆ ಧರಿಸಿಯೋ ಕಣ್ಣುಗಳನ್ನು ತೀಕ್ಷ್ಣವಾದ ಬೆಳಕಿನಿಂದ ರಕ್ಷಿಸಿಕೊಳ್ಳಬೇಕು. ರೋಗಿ ಬಳಸುವ ಕಪ್ಪು ಕನ್ನಡಕವನ್ನು ಬೇರೆಯವರು ಧರಿಸಬಾರದು.

ಇಂಥ ರೋಗಿಗಳು ಹೆಚ್ಚಿರುವ ಸ್ಥಳಗಳಲ್ಲಿನ ಕೊಳಗಳು ಮತ್ತು ಈಜುಕೊಳಗಳಲ್ಲಿ ಸ್ನಾನಮಾಡಬಾರದು.

ಪ್ರತಿದಿನ ಮೂರ್ನಾಲ್ಕು ಬಾರಿ ಸ್ವಚ್ಛವಾದ ನೀರಿನಿಂದ ಕಣ್ಣುಗಳನ್ನು ಸ್ವಚ್ಛಮಾಡಿಕೊಳ್ಳಬೇಕು. 'ಕೆಂಗಣ್ಣು' ರೋಗಿ ಮನೆಯಲ್ಲೇ ಉಳಿದುಕೊಂಡು ಮೂರ್ನಾಲ್ಕು ದಿವಸಗಳು ವಿಶ್ರಾಂತಿ ತೆಗೆದುಕೊಳ್ಳಬೇಕು. ಡಾಕ್ಟರನ್ನು ತಕ್ಷಣ ಕಾಣಬೇಕು. ಹೀಗೆ ಮಾಡುವುದರಿಂದ ರೋಗ ಬೇಗ ವಾಸಿಯಾಗಲು ಸಾಧ್ಯವಾಗಿ, ಬೇರೆಯವರಿಗೆ ರೋಗ ಹರಡುವುದನ್ನು ತಡೆಗಟ್ಟಿದಂತಾಗುತ್ತದೆ.

ಇಡೀ ಕುಟುಂಬದಲ್ಲಿ ಸಾಮಾನ್ಯವಾಗಿ ಬಳಸುವ ಕಣ್ಕಪ್ಪು ಮುಂತಾದ ಸೌಂದರ್ಯಸಾಧನಗಳನ್ನು ಬಳಸಬೇಡಿ. ಕಣ್ಕಪ್ಪಿನ ಬಳಕೆ ನಿಷಿದ್ಧ.


ಚಿಕ್ಕ ಪಟದಲ್ಲಿದೆ:

* ಕಣ್ಣಿನ ಅಕ್ಷಿಚರ್ಮದ ಊತ ಬಹುಬೇಗ ಹರಡುವ ಸಾಂಕ್ರಾಮಿಕ ರೋಗ.
* ತತ್‌ಕ್ಷಣ ಅಥವಾ ಸಾಮಯಿಕ ಚಿಕಿತ್ಸೆ ನೀಡಿದರೆ ಈ ರೋಗ ಅಪಾಯಕಾರಿಯಲ್ಲ.
* ಕಣ್ಣು ಉರಿಯುವುದು, ಕಣ್ಣಿನಲ್ಲಿ ನೀರು ಸೋರುವುದು, ಕಣ್ಣಿನ ರೆಪ್ಪೆಗಳು ಊದಿಕೊಳ್ಳುವುದು, ಕಣ್ಣು ಕೆಂಪಾಗುವುದು ಮತ್ತು ಕಣ್ಣುಗಳಿಂದ ಸ್ರಾವ- ಇವು ಈ ರೋಗದ ಲಕ್ಷಣಗಳು.
* ಕಲುಷಿತಗೊಂಡ ಕೈಬೆರಳುಗಳು ಮತ್ತು ರೋಗಿ ಬಳಸಿದ ಬಟ್ಟೆಬರೆಗಳನ್ನು ಬಳಸುವುದರಿಂದ ಈ ರೋಗ ಹರಡುತ್ತದೆ.

* ವ್ಯವಸ್ಥಿತ ಚಿಕಿತ್ಸೆಯಿಂದ ಈ ರೋಗವನ್ನು ೪ ರಿಂದ ೭ ದಿನಗಳೊಳಗೆ ವಾಸಿಮಾಡಬಹುದು.
* ವೈಯಕ್ತಿಕ ಸ್ವಚ್ಛತೆ ಮತ್ತು ಸಾಮಾನ್ಯ ನೈರ್ಮಲ್ಯ ನಿಯಮಗಳನ್ನು ಪರಿಪಾಲಿಸುವುದರಿಂದ ಈ ರೋಗ ಬರದಂತೆ ತಡೆಗಟ್ಟಬಹುದು. ನೊಣಗಳು ಮುತ್ತದಂತೆ ಮನೆಯ ಸುತ್ತಮುತ್ತಲ ಜಾಗವನ್ನು ಸ್ವಚ್ಛವಾಗಿರಿಸಿಕೊಳ್ಳಬೇಕು.

ನಿಮ್ಮ ಕಣ್ಣುಗಳನ್ನು ನೀವು ರಕ್ಷಿಸಿ;
ಅವು ನಿಮ್ಮನ್ನು ರಕ್ಷಿಸುತ್ತವೆ!

ಎಸ್. ವಿಶ್ವನಾಥ



ಇತರರ ಹಿತಚಿಂತನೆಯನ್ನು ಮಾಡುವುದಕ್ಕಿಂತ ಹೆಚ್ಚಿನ ಧರ್ಮವಿಲ್ಲ. ಎಲ್ಲ ಧರ್ಮಗಳೂ ಇದನ್ನು ಸಾರಿವೆ. ಆದರೆ ಮಾನವನು ಒಂದಲ್ಲ ಒಂದು ಧರ್ಮಾವಲಂಬಿಯಾಗಿದ್ದೂ ಇತರರಿಗೆ ಕೇಡನ್ನು ಚಿಂತಿಸುವುದರಲ್ಲಿ ಬೇಗ ನಿರ್ಧಾರವನ್ನು ಕೈಗೊಳ್ಳುತ್ತಾನೆ.

—ಪರಮಹಂಸ

ನೀವೂ ಬದುಕಿರಿ ಇತರರನ್ನೂ ಬದುಕಲು ಕೊಡಿರಿ. ನಾನೊಬ್ಬನೇ ಬದುಕುತ್ತೇನೆ, ಸುಖವಾಗಿರುತ್ತೇನೆ ಎನ್ನುವ ಪ್ರವೃತ್ತಿ ಯಾವಾಗಲೂ ತುಳಿಯಲ್ಪಡುತ್ತದೆ.

—ವಿವೇಕಾನಂದ

ಒಳ್ಳೆಯ ವಸ್ತುಗಳ ಲಾಭವನ್ನು ಪಡೆದುಕೊಳ್ಳಬೇಕಾದರೆ ನೀನೂ ಒಳ್ಳೆಯ ವಸ್ತುಗಳನ್ನು ಜೀವನದಲ್ಲಿ ಸಾಧಿಸಿಕೊಳ್ಳಲು ಕಲಿ.

—ಕೆನ್ ಸೋಸ

ಕನ್ನಂಬಾಡಿ ಅಣೆಕಟ್ಟು ನಿರ್ಮಾಣದ ಮೂಲ ಬಲ್ಲಿರಾ ?

ಹಳೇ ಮೈಸೂರು ರಾಜ್ಯಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಅರಸರಾಗಿದ್ದ ಕಾಲ. ಸರಿ ಸುಮಾರು ೧೯೧೬–೧೭ ರಲ್ಲೊಂದು ದಿನ ಸರ್. ಎಂ. ವಿಶ್ವೇಶ್ವರಯ್ಯ ಜಟಿಲ ಸಮಸ್ಯೆಯೊಂದರ ಬಗ್ಗೆ ಗಾಢಾಲೋಚನೆಯಲ್ಲಿದ್ದಾಗ ಮಂಡ್ಯದಿಂದ ಬಂದ ಎಂಜನಿಯರ್ ಕಛೇರಿಯಲ್ಲಿ ಕಾಮಗಾರಿ ಉಸ್ತುವಾರಿ ಕಾರ್ಯದ ಕೇಶವಯ್ಯ ಬಂದು ತಾನೇ ಬಿಡಿಸಿದ ನಕ್ಷೆಯನ್ನು ಮುಂದಿಟ್ಟು, ಕನ್ನಂಬಾಡಿಯಲ್ಲಿ ಕಾವೇರಿ ನದಿಗೆ ಅಡ್ಡಲಾಗಿ "Dam" (ಅಣೆಕಟ್ಟು) ನಿರ್ಮಿಸುವುದರಿಂದಾಗುವ ಪ್ರಯೋಜನ ವಿವರಿಸಿದ. ಸಿಟ್ಟುಗೊಂಡ ಎಂ. ವಿ. ಅವರು ಆಂಗ್ಲಭಾಷೆಯಲ್ಲಿ "Damn It" (ಖಂಡನಾತ್ಮಕ) ಎಂದು ಹೇಳಿ ಹೊರ ಹೋದರು. ಅರೆಬರೆ ಇಂಗ್ಲೀಷ್ ಬಲ್ಲ ಕೇಶವಯ್ಯ ತನ್ನ ನಕ್ಷೆಗೆ ಒಪ್ಪಿಗೆ ಸಿಕ್ಕಿತೆಂದು ಭಾವಿಸಿ, ಎರಡು ವಾರಗಳಲ್ಲಿ ಪುನಃ ವ್ಯಾಪಕ ಸಮೀಕ್ಷೆ ನಡೆಸಿ, ಪ್ರಸಂಗಾವಧಾನ ನೋಡಿ ಎಂ. ವಿ. ಮತ್ತು ಅರಸರಿದ್ದಾಗ ಪುನರ್ವಿಮರ್ಶಿತ ನಕ್ಷೆ ಹಾಗೂ ನೀರಾವರಿ ಸೌಲಭ್ಯದ ವಿವರ ಮುಂದಿಟ್ಟ. ಪ್ರಸನ್ನಚಿತ್ತರಾದ ಅರಸರು, "ವಿಶ್ವೇಶ್ವರಯ್ಯನವರೆ, ಒಮ್ಮೆ ಸ್ಥಳ ಅಜಮಾಯಿಷಿಮಾಡಿ ಬನ್ನಿ ಆಗುವುದಾದರೆ, ಕಂಪ್ನಿ ಸರ್ಕಾರಕ್ಕೆ ತಿಳಿಸಿ ಜನೋಪಯೋಗಿ ಕಾರ್ಯ ಮಾಡಿ ನೋಡಿ" ಎಂದರು.

ಅರಸರ ಅಣತಿಯಂತೆ ವಿಶ್ವೇಶ್ವರಯ್ಯನವರು ಸ್ಥಳ ಅಜಮಾಯಿಷಿ ಮಾಡಿದ್ದಲ್ಲದೆ, ೧೭೯೪–೯೫ರಲ್ಲಿ ಟಿಪ್ಪುಸುಲ್ತಾನ್ ಕೂಡ ಇಲ್ಲೊಂದು ಪುಟ್ಟ ಅಣೆ ನಿರ್ಮಿಸಲು ಯೋಚಿಸಿದ್ದ ವಿಷಯ ಕಲೆಹಾಕಿ, ಅರಸರಿಗೆ ತಮ್ಮ ಶಿಫಾರಸಿನೊಡನೆ ಯೋಜನೆ ಕೊಟ್ಟರು.

೧೯೩೨ರಲ್ಲಿ ಅಣೆಕಟ್ಟು ಆದ ಬಳಿಕ ಅದಕ್ಕೆ ಕೃಷ್ಣರಾಜ ಸಾಗರ ಅಣೆಕಟ್ಟು ಎಂದು ನಾಮಕರಣವಾಯಿತು.

ಸರ್. ಎಂ. ವಿಶ್ವೇಶ್ವರಯ್ಯನವರು ಇದಾದ ಬಳಿಕ ತಮಗೆ ಅಣೆಕಟ್ಟೆಗಾಗಿ ಪ್ರಥಮ ಮಾಹಿತಿ ನೀಡಿದ ಕೇಶವಯ್ಯನಿಗೆ "ಸಬ್ ಓವರ್‌ಸಿಯರ್" (ಸಾಮಾನ್ಯ ಮಿತಿದಾಟಿ ತಿಳಿಯುವವ) ಎಂದು ಕರೆದು, ಅದೇ ಹೆಸರಿನ ಹುದ್ದೆ ಮುಂದುವರಿಯಲು ನಾಂದಿ ಹಾಡಿದರು.

(ಬಲ್ಲವರಿಂದ ಕೇಳಿ ತಿಳಿದುದು)

ಸ. ಬ. ಶ್ರೀಕಂಠಮೂರ್ತಿ

ಔತಣ ರಾಮಾಯಣ

ಭಾನುವಾರ ಹಾಗೇ ಒಂದು ಮಾರ್ನಿಂಗ್ ಶೋ ನೋಡಿಬಿಟ್ಟು. ಅವರನ್ನ-ಇವರನ್ನ ಮಾತಾಡಿಸಿ ಕೊನೆಗೆ ಹೋಟೆಲಿಗೆ ಊಟಕ್ಕೆ ಹೋದಾಗ ಮೂರು ಗಂಟೆ ಸಮೀಪಿಸಿತ್ತು.

ಹೋಟೆಲಿನಲ್ಲಿ ಮಾಣಿ, "ಇನ್ನು ಹತ್ತು ನಿಮಿಷ ಸಾರ್ ಅನ್ನ ಬೇಯ್ತಾ ಇದೆ" ಅಂದ.

ಇದ್ದ ಹಸಿವನ್ನು ತಡಕೊಂಡು....ಹೋಟೆಲಿನಲ್ಲಿ ತೂಗುಹಾಕಿದ್ದ ದೇವರ ಪಟಗಳನ್ನ, "ದಯವಿಟ್ಟು ಸಾಲ ಕೇಳಬೇಡಿ" ಅಂತ ಮೂಲೆಮೂಲೆಗೂ ಹಾಕಿದ್ದ ತೂಗು ಹಲಗೆಗಳನ್ನ ನೋಡುತ್ತಾ ಕೂತೆ.

ಗಂಟೆ ಮೂರು ಆಯಿತು. ಮೂರು ಕಾಲು ಆಯಿತು. ಊಟ ಬರೋ ಸೂಚನೆಯೇ ಇಲ್ಲ!

"ಏನಪ್ಪ"? ಅಂತ ದೀನ ಸ್ವರದಲ್ಲಿ ಮಾಣೀನ ಕರೆದೆ.

"ಏನು ಸಾರ್?"

"ಏನಪ್ಪ ಅನ್ನ ಬೇಯ್ತೋ? ಅಥವಾ ಇನ್ನೂ ಇಲ್ವೋ?"

"ಗೊತ್ತಿಲ್ಲ ಸಾರ್! ಅಡಿಗೆ ಮನೆಗೆ ಹೋದ್ರೆ ಹೆಡ್ ಕುಕ್ ಜಾಲರಿ ಮುಟ್ಟಿನಿಂದ ಬಡಿಯೋಕೆ ಬರ್ತಾರೆ. ಅನ್ನ ಆದ್ರೆ ನಾನೇ ಕರೀತೀನಿ, ಅಂತಾರೆ!"

ಇನ್ನೂ ಹತ್ತು ನಿಮಿಷ ಆದಮೇಲೆ, ಒಂದು ತಟ್ಟೆಯಲ್ಲಿ ಪ್ಲೇಟ್ ಮೀಲ್ಸ್ ತಂದಿಟ್ಟ ಮಾಣಿ.

ಪಲ್ಯ ಕೂಟು ನಾಪತ್ತೆಯಾಗಿತ್ತು!

"ಏನಪ್ಪ? ಪ್ಲೇಟ್ ಮೀಲ್ಸ್ ಅಂತ ಹೇಳಿ ಅರ್ಧ ಪ್ಲೇಟ್ ಊಟ ಕೊಡೋದೆ!"

ಆ ಮಾತು ಕೇಳಿದ್ದೇ ತಡ ಮ್ಯಾನೇಜರ್ ಎದ್ದು ಬಂದುಬಿಟ್ಟ, ಗಲ್ಲಾಪೆಟ್ಟಿಗೆಯಿಂದ!

"ಏನೋ ಮೂರುವರೆ ಗಂಟೆಗೆ ಅಷ್ಟು ಅನ್ನಾನಾದ್ರು ಕೊಡ್ತಾರಲ್ಲ ಅಂತ ಸಂತೋಷ ಪಡಬೇಕೊ? ಇಲ್ಲಾ ಪಲ್ಯ ಇಲ್ಲ-ಕೂಟು ಇಲ್ಲ-ಚಟ್ನಿ ಇಲ್ಲ-ಅಂತ ಜಗಳ ಕಾಯಬೇಕೋ? ಇಷ್ಟ ಇದ್ರೆ ಊಟ ಮಾಡಿ ಇಲ್ದಿದ್ರೆ ನಿಮ್ಮ ಹಣ ವಾಪಸು ಬಿಸಾಕ್ತೀನಿ ಧಾರಾಳವಾಗಿ ಎದ್ದು ಹೋಗಬಹುದು." ಅಂದ ಗರಂ ಆಗಿ!

ಸಹಾಯಕ ಕೇಂದ್ರ ನಿರ್ದೇಶಕರು, ಆಕಾಶವಾಣಿ, ಮೈಸೂರು ೫೭೦ ೦೨೦

“ಬಿಟ್ಟು ಹೋಗಲ್ಲಪ್ಪ, ನಾನೂ ಊಟ ಮಾಡ್ತೀನಿ ಅವರೂ ಊಟ ಮಾಡ್ತಾರೆ.” ಅಂತು ನನ್ನ ಪಕ್ಕದ ಧ್ವನಿಯೊಂದು.

ಆಶ್ಚರ್ಯದಿಂದ ತಿರುಗಿನೋಡಿದ್ರೆ, ನನ್ನ ಫ್ರೆಂಡ್ ಕಿಟ್ಟು ಪಕ್ಕನೆ ಫಕ್ಕನೆ ನನ್ನ ಪಕ್ಕದಲ್ಲಿ ಕುಳಿತುಕೊಂಡು ಪ್ಲೇಟ್ ಅನ್ನಕ್ಕೆ ಹುಳಿನ ಸುರಿದು ಅವಸರ ಅವಸರವಾಗಿ ಕಲಿಸಿ ಗಬಗಬನೆ ಮುಕ್ಕೋಕೆ ಶುರು ಮಾಡಿದ!

ಅವನು ಮುಕ್ಕುತಾ ಇದ್ದ ರಭಸಕ್ಕೆ ತೆರವು ಸಿಕ್ಕೊಂಡು ಕಣ್ಣಲ್ಲಿ ನೀರು ಬಂತು. ಅವಸರವಾಗಿ ಒಂದು ಗ್ಲಾಸ್ ನೀರು ಕುಡಿದ.

ನಾನು ಊಟ ಮಾಡೋದಕ್ಕೆ ಶುರು ಮಾಡಿದೆ.

“ಅಲ್ಲಯ್ಯಾ ಕಿಟ್ಟು, ನೀನೇನೋ ಯಾವ್ದೋ ಮದುವೇಗೆ ಹೋಗಬೇಕು. ಭಾರಿ ಊಟ ಇದೆ ಅಂತ ಕೊಚ್ಚಿಕೊಳ್ತಾ ಇದ್ದೆ. ಈಗ ನೋಡಿದ್ರೆ ಪ್ಲೇಟ್ ಮೀಲ್ಸ್ ಮುಕ್ಕುತ್ತಾ ಇದೀಯಲ್ಲೋ?!” ಅಂದೆ.

ಇನ್ನೊಂದು ಲೋಟ ನೀರು ಕುಡಿದು, “ಅದೊಂದು ದೊಡ್ಡ ಕಥೆ” ಅಂದ.

ನನಗೆ ಕಥೆ ಅಂದ್ರೆ ಬಹಳ ಇಷ್ಟ. ಅದರಲ್ಲೂ ಕಿಟ್ಟು ಅಂತಹವರಿಂದ ಆತ್ಮ ಕಥೆ ಕೇಳೋದು ಅಂದ್ಮೇಲೆ ಕೇಳಬೇಕೆ!

“ವಿಷಾದ ಕಥೆಯನ್ನು ವಿಶದೀಕರಿಸು. ಕೇಳಿ ನಾನು ಕಣ್ಣೀರು ಸುರಿಸಲು ಸಿದ್ಧನಾಗಿದ್ದೇನೆ, ಆರ್ಯಪುತ್ರ!” ಅಂದೆ.

“ಏನು ಹೇಳಲಿ ಬಿಡು. ಬೆಳಿಗ್ಗೆ ಎಂಟು ಘಂಟೆಗೆ ಯಥಾಪ್ರಕಾರ ಎದ್ದೆ. ಹಲ್ಲುಜ್ಜಿದೆ. ಸ್ನಾನ ಮಾಡಿದೆ. ಹೋಟೆಲಿಗೆ ಹೋಗಿ ಕಾಫಿ ಕುಡಿದೆ, ತಿಂಡಿ ತಿನ್ನಲಿಲ್ಲ. ಹೇಗೂ ಮದುವೆ ಮನೇಗೆ ಹೋಗ್ತೀವಲ್ಲ ಟಿಫನ್ ಸಿಗದೇ ಇರುತ್ತಾ ಅಲ್ಲೇ ಒಂದು ಕೈ ನೋಡೋಣ ಅಂತ.

ಅಂಗಡೀಗೆ ಹೋಗಿ ನನ್ನ ಕೈಯೂ ಕಚ್ಚಬಾರದು ನೋಡೋಕೆ ದೊಡದಾಗಿರಬೇಕು ಅಂಥಾದ್ದೊಂದು ಪ್ರೆಸೆಂಟೇಷನ್ ತೆಗೆದುಕೊಂಡೆ, ಮದುವೆ ಛತ್ರಕ್ಕೆ ಹೋದೆ.

ಆದ್ರೆ ನೋಡು ಇಲ್ಲೇ ಒಂದು ಪ್ರಾಬ್ಲಮ್. ನನಗೆ ರಾಮನಾಥನ್ ಬಿಟ್ರೆ ಆ ಮದುವೇಲಿ ಯಾರೂ ಗೊತ್ತಿಲ್ಲ, ಅಲ್ಲಿ ಬಾ ಅಂತ ಕರೆಯೋಕೆ ಒಂದು ಬಡ ಪ್ರಾಣಿ ಇಲ್ಲ!

ಆದ್ರೂ ಒಳಗೆ ಹೋದೆ. ಕುಳಿತೇ ಬಿಟ್ಟೆ; ಒಂದು ಖಾಲಿ ಇದ್ದ ಕುರ್ಚಿಯಲ್ಲಿ! ಹತ್ತು ನಿಮಿಷ ಆಯ್ತು; ಇಪ್ಪತ್ತು ನಿಮಿಷ ಆಯ್ತು! ಜೊತೇಗೆ ತಂದ ಪುಸ್ತಕಾನು ಮುಗಿಸಿಬಿಟ್ಟೆ, ಎಲ್ಲಿ ನೋಡಿದ್ರೂ ರಾಮನಾಥನ್ ಸುಳಿವೇ ಇಲ್ಲ!

ಆಕಡೆ ಈಕಡೆ ನೋಡಿದ್ರೆ ಜರತಾರಿ ಸೀರೆಗಳ ಸಂಭ್ರಮ! ಜರಿ ಅಂಚಿನ ಪಂಚೆಗಳೇನು; ಬೇಸಿಗೆ ಆದ್ರೂ ವುಲನ್ ಸೂಟ್‌ಗಳ ಮೆರೆದಾಟ ಏನು; ಮದುವೆ ಜನರ ಗದ್ದಲ ಪೀಪಿಸೋ ಆರ್ಭಟದಲ್ಲಿ, ಪುರೋಹಿತರು ಮಂತ್ರ ಹೇಳ್ತಾ ಇದ್ದರು, ತಮ್ಮ ಕಂಚಿನ ಕಂಠದಲ್ಲಿ!

ಹುಡುಗ ಮಂತ್ರ ಕೇಳಿಸ್ಕೊಳ್ತಾ ಇದ್ದನೋ ಇಲ್ವೋ ಗೊತ್ತಿಲ್ಲ. ಹುಡುಗಿನಂತೂ ಓರೆಗಣ್ಣಲ್ಲಿ ನೋಡ್ತಾ ಇದ್ದ. ಹುಡುಗೀನು ಉತ್ತರಿಸ್ತಾ ಇದ್ಲು!

ನನಗೆ ಹೊಟ್ಟೆ ಹಸ್ವು ಆಗ್ತಿತ್ತು. ಬೆಳಿಗ್ಗೆಯಿಂದ ತಿಂಡಿ ಇಲ್ಲದೆ ಹೊಟ್ಟೆ ತಾಳ ಹಾಕ್ತಾ ಇದ್ದದ್ದೊಂದು; ರಾಮನಾಥನ್ ಕಣ್ಣಿಗೆ ಬೀಳ್ದೆ ಇದ್ದದ್ದೊಂದು.

ಹೇಗೋ ಸಾಹಸ ಮಾಡಿ ಅವರಿಗೆ ಮುಖ ತೋರಿಸಿಕೊಂಡು ಬಿಟ್ಟೆ. ನನ್ನ ಅದೃಷ್ಟ ನಯ್ಯಾ: ಮಾಡಿದ ಉಪ್ಪಿಟ್ಟು-ಇಡ್ಲಿ, ಎಲ್ಲಾ ಖಾಲಿ! ಕಾಫಿ ಸಹಾ ಇಲ್ಲ!!

"ಹಾಲು ಬರಬೇಕು ಸಾರ್." ಅಂದ ಬಾಣಸಿಗ ಮಹಾಶಯ.

"ಅಯ್ಯೋ ನನ್ನ ವಿಧಿಯೇ!" ಅಂತ ನಾನು ಮಂಟಪದ ಹತ್ತಿರ ಬಂದೆ. ಇನ್ನೂ ಹತ್ತು ನಿಮಿಷ ಕಾತ್ರೆ. ಅಲ್ಲಾ-ಅಷ್ಟೆಲ್ಲಾ ಒತ್ತಾಯ ಮಾಡಿ ಕರೆದು ಈಗ ಅನಾಥನಂತೇ ನೋಡ್ತಾರೆಯಲ್ಲ! ಅಂತ ಒಂದು ಸಾರಿ ಸಿಟ್ಟು ಬಂತು.

ಅಷ್ಟು ಹೊತ್ತಿಗೆ ರಾಮನಾಥನ್ ಕಣ್ಣಿಗೆ ಬಿದ್ದೆ!!

"ಓಹೋ ಹೋ, ಚಿಟ್ಟು! ಯಾವಾಗ ಬಂದೆ?" ಅಂದ್ರು ಬಾಯಿತುಂಬ.

"ಬಂದು ಒಂದು ಗಂಟೆ ಮೇಲಾಯ್ತು. ತಮ್ಮ ದರ್ಶನಾನೆ ಆಗಲಿಲ್ಲ. ಮದುವೆ ಹೇಗೆ ನಡೀತಿದೆ?" ಅಂದೆ ನಮ್ರದಾಯಕನಾಗಿ.

"ಹೋಗಲಿ ಬಿಡು ಟಿಫನ್‌ಗಲ್ಲದ್ರೂ-ಊಟಕ್ಕಾದ್ರೂ ಬಂದು ಸೇರಿದೆಯಲ್ಲ ಮಹರಾಯ! ಕೂತ್ಕೋ ಒಂದ್ನಿಮಿಷ ಬಂದೆ ಅಂತ ಹೊರಟ."

ಮದುವೆ ಹುಡುಗಿಯ ಅಪ್ಪ ನನ್ನೊಬ್ಬನ್ನೇ ಉಪಚಾರ ಮಾಡ್ತಾ ಇರೋಕೆ ಆಗುತ್ಯೇ? ರಾಮನಾಥನ್ ಬೇರೆ ಕಡೆ ಹೋದ್ರು. ಅಷ್ಟು ಹೊತ್ತಿಗೆ ನನ್ನ ಕಣ್ಣು ಕತ್ತಲೆ ಬಂದಿತ್ತು. ಊಟಕ್ಕೆ ಯಾವಾಗ ಕರೀತಾರೆ? ಅಂತ ನಾನು ತಾಳಿ ಕಟ್ಟೋ ವೈಭವಾನು ನೋಡಲಿಲ್ಲ!

"ಮಾಂಗಲ್ಯಂ ತಂತು ನಾನೇನ...."

ಅಂತ ಹೇಳ್ತ ತಾಳಿ ಕಟ್ಟಿದ. ಓಲಗ ಊದಿದ್ರು.

ಅಯ್ಯಪ್ಪ ಅಂತೂ ಮುಗೀತಲ್ಲ ಅಂತ ನಿಟ್ಟುಸಿರು ಬಿಟ್ಟೆ....ರಾಮನಾಥನ್ ವಧೂವರರ ಜೊತೆಯಲ್ಲಿ ಕೂತಿದ್ರು.

ಅವರಿಲ್ಲದೇ ಹೋದರೆ ಏನು? ಟಿಫಿನ್‌ಗೆ ಅಡುಗೆ ಮನೆಗೆ ಹೋದಾಗ ಯಾರು ಜೊತೇಲಿ ಇದ್ದರು! ಇನ್‌ಫ್ಯಾಕ್ಟ್, ನಮ್ಮ ತತ್ವಶಾಸ್ತ್ರ ಏನಯ್ಯಾ ಹೇಳುತ್ತೆ—

'ಬರುವಾಗ ಒಂಟಿಯಾಗಿ ಬರ್ತೀಯಾ ಹೋಗುವಾಗ ಒಂಟಿಯಾಗೇ ಹೋಗ್ತೀಯಾ ಯಾರೂ ಜೊತೆಯಲ್ಲಿ ಬರೋಲ್ಲ' ಎಂದು ಅಲ್ಲವೆ?....

ಅಡುಗೆ ಮನೆಗೆ ಹೋದಾಗ ನನ್ನ ಜೊತೆಗೇನು ರಾಮನಾಥನ್ ಇದ್ರಾ? ಅದೇ ರೀತಿ ಊಟಕ್ಕೆ ಹೋದೆ. ಅಲ್ಲಿ ನನ್ನ ಅದೃಷ್ಟ ನೋಡು, ಎಲೆ ಹಾಕಿದ ಡೈನಿಂಗ್ ಹಾಲ್‌ಗೆ ಹೋಗುವಾಗ ರೇಷ್ಮೆ ಸೀರೆ ಉಟ್ಟ ಯುವತಿ ಒಂದು ಮಗು ಎತ್ತಿಕೊಂಡು ಬಂದು, "ಅಂಕಲ್....ಅಂಕಲ್, ಈ ಮಗೂನ ಒಂದು ನಿಮಿಷ ಹಿಡಿದುಕೊಳ್ಳಿ, ಈಗ ಬಂದುಬಿಟ್ಟೆ" ಎಂದು ಅಂತರ್ಧಾನವಾದಳು.

ಈ ಮಗೂನ ಹೊತ್ಕೊಂಡು ಊಟಕ್ಕೆ ಎಲ್ಲಿ ಹೋಗಲಿ!? ಆದ್ರೂನೂ ಇನ್ನೊಂದು ಹೆಜ್ಜೆ ಇಟ್ಟೆ.

ಅಷ್ಟು ಹೊತ್ತಿಗೆ ರಾಮನಾಥನ್ ನನ್ನ ಕೈಲಿದ್ದ ಪ್ರೆಸೆಂಟೇಷನ್ ನೋಡಿದ್ರು.

"ಏನು ಯಾರಯ್ಯಾ ಕಿಟ್ಟು, ಕೈಯಲ್ಲಿ ಮಗು? ಇರಲಿ ಬಾ ನಮ್ಮ ಅಳಿಯಂದಿರನ್ನ ಪರಿಚಯ ಮಾಡಿಸ್ತೀನಿ" ಅಂದರು. ಹೋದೆ!

"ಇವರು ನನ್ನ ಫ್ರೆಂಡ್ ಕಿಟ್ಟು, ಇಲ್ಲೇ ರೈಲ್ವೇಸ್‌ನಲ್ಲಿ ಇದಾರೆ....ಇವರು ನನ್ನ ಅಳಿಯಂದಿರು."

"ಕಂಗ್ರಾಜುಲೇಷನ್ಸ್—ವಿಷ್ ಯು ಬೋತ್ ಎ ಹ್ಯಾಪಿ ಮ್ಯಾರೀಡ್ ಲೈಫ್" ಅಂತ ಕೈ ಚಾಚಿದೆ.

"ಚಂದ್ರಶೇಖರ್, ನನ್ನ ಪೂರ್ವಾಶ್ರಮದ ಹೆಸರು ಸಾರ್. ಅಂದ್ರೆ ಬ್ರಹ್ಮಚಾರಿಯಾದಾಗಿನ ಹೆಸರು. ಈಗ ನನ್ನ ಹೆಸರು ಚಂದ್ರನಾಥ್. ಅಂದ್ರೆ ನನ್ನ ಮಿಸೆಸ್ ಹೆಸರು ಚಂದ್ರ, ಅವಳಿಗೆ ನಾನು ನಾಥ. ಅದಕ್ಕೆ ಚಂದ್ರನಾಥ್...."

"ನಾನು ರಾಮನಾಥ ನನ್ನ ಅಳಿಯ ಚಂದ್ರನಾಥ." ಬ್ಬಿಬ್ಬಿಬ್ಬಿ ಅಂತ ಹಲ್ಲು ಕಿಸಿದ್ರು, ರಾಮನಾಥನ್.

"ಏನು ಕಿಟ್ಟು ಬಾರಪ್ಪ, ಇನ್ನೊಂದು ಹದಿನೈದು ನಿಮಿಷ ನಾನು ಕರೆದುಕೊಂಡು ಹೋಗಿ ಊಟ ಹಾಕಿಸ್ತೀನಿ. ಆಗಬಹುದಾ?" ಅಂದ್ರು ರಾಮನಾಥನ್.

"ಇಲ್ಲಾ, ಸ್ವಲ್ಪ ಬೇಗ ಹೋಗಬೇಕು ಕೆಲಸ ಇದೆ" ಅಂದೆ.

"ನನಗೆ ಗೊತ್ತಯ್ಯಾ ನಿನ್ನ ಕೆಲಸ, ಮ್ಯಾಟಿನಿ ಷೋ ತಾನೆ! ಕೊಡ್ತೀಯಾ, ಹೋದರಾಯ್ತು" ಅಂತ ನನ್ನ ಕೈಯಲ್ಲಿದ್ದ ಉಡುಗೊರೇನ ಕಿತ್ಕೊಂಡರು ರಾಮನಾಥನ್.

ನಾನು "ಶಿವಾ" ಅಂತ ಅಲ್ಲೇ ಒಂದು ಕುರ್ಚಿಯಲ್ಲಿ ಕೂತೆ. ನನ್ನ ಕೈಲಿದ್ದ ಮಗು ರೋದನಕ್ಕೆ ಶುರುಮಾಡಿತು!

"ಪಾಪು ಪಾಪು ಅಳಬೇಡ" ಅಂತ ಸುಮ್ಮನಿಸಿಕೊಳ್ಳೋಕೆ ಪ್ರಯತ್ನ ಪಟ್ಟೆ. ಅಳು ಇನ್ನೂ ಜೋರಾಯ್ತು!

"ಪಕ್ಕದಲ್ಲಿದ್ದ ಮಹನೀಯರು ಮಗೂಗೆ ಹಸಿವಾಗಿರಬೇಕು. ಅಮ್ಮನ ಹತ್ತಿರ ಬಿಡಿ" ಅಂತ ಸಲಹೆ ಕೊಟ್ಟ್ರು.

ಅಮ್ಮನ್ನ ನಾ ಎಲ್ಲಿ ಹುಡುಕಲಿ?!

"ಇದರ ಅಮ್ಮ ಯಾರು ಅಂತ ನನಗೆ ಗೊತ್ತಿಲ್ಲ" ಅಂದೆ.

"ಪರವಾಗಿಲ್ಲ, ಏನಾದ್ರೂ ಅದಕ್ಕೆ ಹೋಟೆಲಿಂದ ತಂದುಕೊಡಿ."

"ಮಗೂಗೆ ಅನ್ನ, ತಿಂಡಿ ಕೊಟ್ಟು ಅಭ್ಯಾಸ ಇಲ್ಲ ನನಗೆ!" ಅಂತ ಬೆಪ್ಪಾಗಿ ನಿಂತೆ!

"ಹೋಗಲಿ, ಒಂದು ಪ್ಯಾಕೆಟ್ ಬಿಸ್ಕತ್ತಾದ್ರೂ ತರಿಸಿಕೊಡಿ" ಅಂತ ಸಲಹೆ ಮುಂದುವರೀತು.

ಅಲ್ಲೇ ಇದ್ದ ಹುಡುಗ ಒಬ್ಬ "ಬಿಸ್ಕತ್ ತರ್ಲೇನಾ ಸಾರ್?" ಅಂತ ವಾಲಂಟೀರ್ ಮಾಡಿದ.

ಅವನಿಗೆ ಎರಡು ರೂಪಾಯಿ ತೆತ್ತೆ!

ಐದು ನಿಮಿಷದಲ್ಲಿ ಒಂದು ಪ್ಯಾಕೆಟ್ ಬಿಸ್ಕತ್ ತಂದ ಆ ಹುಡುಗ ಬಿಸ್ಕತ್ ಪ್ಯಾಕೆಟ್ ಬಿಚ್ಚಿ ಮಗು ಕೈಯಲ್ಲಿ ಎರಡು ಬಾಯಲ್ಲಿ ಒಂದು ಇಟ್ಟ.

ಆ ಹುಡುಗನ ಕೈಯಲ್ಲಿ ನಾಲ್ಕು ಕೊಟ್ಟೆ!

ಬಿಸ್ಕತ್ತು ಕೈಯಲ್ಲಿ ತೆಗೆದುಕೊಂಡು ಹುಡುಗ ಮತ್ತೆ ಚಿಲ್ಲರೆ ವಾಪಸ್ಸು ಕೊಡದೇನೆ ಓಡಿಹೋದ!

ಬಿಸ್ಕತ್ತು ತಿಂದ ಮಗು ಅಳೋದನ್ನ ನಿಲ್ಲಿಸಿತು.

ನನ್ನ ಹಸಿವನ್ನು ತಣಿಸೋದಕ್ಕೆ ನಾನೂ ಒಂದು ಬಿಸ್ಕತ್ತು ಬಾಯಲ್ಲಿ ಹಾಕೋಕೆ ತಗೆದೆ.

ಮಗುವಿನ ತಾಯಿ ಅಷ್ಟು ಹೊತ್ತಿಗೆ ಎಲ್ಲಿಂದಲೋ ಹಾಜರ್. "ಅಂಕಲ್ ಇಲ್ಲಿದೀರಾ ನೀವು," ಅಂತ ಮಗೂನ ತೆಗೆದುಕೊಂಡಳು.

"ಮಗು ಬರೀ ಅಳ್ತಿತ್ತು, ಬಿಸ್ಕತ್ ತಿನಿಸಿಕೊಟ್ಟೆ, ತೊಗೊಳ್ಳಿ" ಅಂತ ಉಳಿದ ಬಿಸ್ಕತ್ತನ್ನು ಅವಳ ಕೈಯಲ್ಲಿ ಇಟ್ಟೆ.

ಅಷ್ಟು ಹೊತ್ತಿಗೆ ಎರಡನೇ ಪಂಕ್ತೀನೂ ಪ್ರಾರಂಭವಾಗಿತ್ತು.

ಅಲ್ಲಿ ಹೋಗೋಣ ಅಂತ ನೋಡಿದಾಗ ಮಗೂನ ಕರಕೊಂಡ ಆ ಹುಡುಗಿ "ಬನ್ನಿ ಅಂಕಲ್, ನನ್ನ ಜೊತೇಲಿ ಕೂತ್ಕೊಳ್ಳಿ" ಅಂತ ಕರೆದಳು.

ಅಬ್ಬಾ ಒಟ್ಟಿನಲ್ಲಿ ಊಟ ಸಿಗುತ್ತಲ್ಲ ಅಂತ ಅಂದುಕೊಂಡು ಅವಳನ್ನ ಹಿಂಬಾಲಿಸಿದೆ.

ಆವರೆ ಎಲ್ಲಾ ಎಲೇನೂ ಫಿಲ್ ಅಪ್ ಆಗಿಹೋಗಿ ಒಂದೇ ಒಂದು ಖಾಲಿ ಇತ್ತು.

"ತಾವು ಕೂತ್ಕೊಳ್ಳಿ ಅಂಕಲ್" ಅಂದಳು.

"ಇಲ್ಲಾ ನೀವು ಕೂತ್ಕೊಳ್ಳಿ" ಅಂದೆ ನಾನು.

"ಇಲ್ಲಾ ಅಂಕಲ್ ನೀವು."

"ಇಲ್ಲಮ್ಮ ನೀವು."

ನಮ್ಮಿಬ್ಬರ ಪರಸ್ಪರ ಈ ಉಪಚಾರದಲ್ಲಿ, ಆ ಜಾಗದಲ್ಲಿ ಇನ್ಯಾರೋ ಬಂದು ಕುಳಿತೇ ಬಿಟ್ಟರು!

ಇಬ್ಬರೂ ಮುಖ ಮುಖ ನೋಡಿಕೊಂಡು ಪೆಚ್ಚಾದವು!

ಅಷ್ಟರಲ್ಲಿ ನನಗೂ ಬೇಸತ್ತು ಹೋಯ್ತು.

ನಾನು ಅಲ್ಲಿಂದ ಹೊರಟೆ!

"ಅಂಕಲ್ ಅಂಕಲ್ ಊಟ ಮಾಡದೆ ಹೊರಟೇ ಬಿಟ್ರಲ್ಲಾ?" ಅಂದಳು.

"ಪರವಾಗಿಲ್ಲಮ್ಮ, ನಾನು ಅರ್ಜೆಂಟಾಗಿ ಹೋಗಬೇಕು." ಅಂತ ಬಂದೇ ಬಿಟ್ಟೆ. ಹೋಗಲಿ ಬಿಡಯ್ಯ ಹೊಟ್ಟೆ ಹಸಿವೆಗೆ ಏನು ಮಾಡಲಿ ಸೀದಾ ಇಲ್ಲಿಗೆ ಬಂದೆ. 'ಪ್ಲೇಟ್ ಊಟ ಇಸ್ ಬೆಟರ್ ದ್ಯಾನ್ ನೋ ಊಟ' ಅಂತ ಮಾಡ್ರನ್ ಗಾದೆ ಇಲ್ಲವೆ?

* * *

"ಒಳ್ಳೆ ತಮಾಷೆಯಯ್ಯಾ ನಿನ್ನ ಕಥೆ, ಸಾಧಾರಣ ಮದುವೆಗಳಲ್ಲೂ ಇಷ್ಟು ಅಡ್ವೆಂಚರ್ ಇದೆ ಅನ್ನೋದು ನನಗೆ ಗೊತ್ತಿರಲಿಲ್ಲ" ಅಂದೆ.

"ಇದೇನು ಅಡ್ವೆಂಚರ್, ಗುರು! ಎರಡು ವರ್ಷಕ್ಕೆ ಮುಂಚೆ ಇನ್ನೊಂದು ಮದುವೇಲಿ ಇನ್ನೊಂದು ಅನುಭವ ಇದೆ ಕೇಳು" ಅಂದ ಕಿಟ್ಟು.

ಕಿಟ್ಟು ಆಗಾಗ ಸ್ವಲ್ಪ ಜೋರು ಹೊಡೆದ್ರೂನೂ ಒಮ್ಮೊಮ್ಮೆ ಸ್ವಾರಸ್ಯವಾಗಿ ಮಾತಾಡ್ತಾನೆ, "ಹೂಂ ಹೇಳು" ಅಂದೆ.

* * *

ಅದೂ ಊಟದ್ದೇ. ಸಂಜೆ ರಿಸೆಪ್ಷನ್‌ಗೆ ಹೋಗಿದ್ದೆ. ಸ್ವಲ್ಪ ಮೈಗೆ ಹುಷಾರ್

ಲಿಲ್ಲ. "ತಿಂಡಿ ಏನೂ ಬೇಡ" ಅಂದೆ. ಪ್ರಸೆಂಟೇಷನ್ ಕೊಟ್ಟೆ. ಅಲ್ಲೂ ಮದುವೆ ಹುಡುಗ ಅಪ್ಪನೇ ನನ್ನ ಫ್ರೆಂಡ್.

"ಕಿಟ್ಟು ನಾನೂ ನೀನೂ ಒಟ್ಟಿಗೆ ಊಟ ಮಾಡೋಣ" ಅಂದ್ರು.

"ಸರಿ" ಅಂದೆ.

ಸಂಗೀತ ಕಚೇರಿ ಸೊಗಸಾಗಿ ನಡೀತಾ ಇತ್ತು!

ಹಿಂದೋಳದಲ್ಲಿ ಕಾಂಬೋಧಿಯನ್ನು ಸೇರಿಸಿ ರೂಪಕತಾಳದಲ್ಲಿ ಆದಿತಾಳ ಬೆರಸಿ ವರ್ಣಸ್ವರಗಳನ್ನು ವಿಚಿತ್ರ ಸ್ವರಗಳ ಜೊತೆ ಸೇರಿಸಿ ಹಾಡುತ್ತಾ ಇದ್ರು ಸಂಗೀತ ವಿದ್ವಾಂಸರು!

"ಮದುವೆ ಸಂಗೀತ ಕಚೇರಿಗಳ ಸ್ವಾರಸ್ಯ ಏನು ಗೊತ್ತಾ?" ಅಂತ ಕಿಟ್ಟು ನನ್ನ ಕೇಳಿದ.

"ಏನೂ" ಅಂದೆ ನಾನು.

ಸಂಗೀತ ವಿದ್ವಾಂಸರು ಹಾಡ್ತಾನೆ ಇರ್ತಾರೆ. ಆದರೆ ಕೇಳೋ ಪ್ರಾಣೀನ ನಾನು ನೋಡೇ ಇಲ್ಲ! ತಮ್ಮ ತಮ್ಮ ಸಂಸಾರ ತಾಪತ್ರಯಗಳನ್ನ ಮಾತಾಡೋರು; ಇನ್ನು ಪ್ರೀತಿ ವಿಶ್ವಾಸದ ಮಾತಾಡಿಕೊಳ್ಳೋ ಹೊಸ ಹುಡುಗ ಹುಡುಗಿಯರು; ಮದುಮಕ್ಕಳನ್ನ ಮಾತಾಡಿಸೋ ಗೆಳೆಯರು; ಇವರೆಲ್ಲರ ಗಲಾಟೇಲಿ ಸಂಗೀತಗಾರರಿಗೆ ತಾವು ಏನು ಹಾಡ್ತಾ ಇದೇವೆ ಅನ್ನೋದೇ ಮರೆತು ಹೋಗುತ್ತೆ! 'ಚಿಂತಯಾಮಿ ಜಗದಂಬಾಂ' ಅನ್ನೋದರ ಬದಲು 'ಚಿಂತಾನಹಿ ಜಗದಂಬಾಂ' ಅಂತ ಹಾಡಿ ಬಿಡ್ತಾರೆ!

ನಾನು ಅಂದಿನ, ಈ ರೀತಿ ಕಚೇರಿ ಕೇಳ್ತಾ ಕೂತಿದ್ದೆ. ಕಚೇರಿ ಮುಗೀತಾ ಬಂತು.

ಇನ್ನೇನು ಊಟಕ್ಕೆ ಹೊರಡಬೇಕು. ಆ ವೇಳೆಗೆ ಬೆಳಿಗ್ಗೆಯಿಂದ ಒಂದೇ ಸಮನೆ ಸ್ಟ್ರೈನ್ ಅವರಿಗೆ. ತಲೆ ಸುತ್ತು ಬಂತು, ಕೆಳಗೆ ಬಿದ್ರು. ನಾನು ಪಕ್ಕದಲ್ಲಿದ್ದೆ ನೀರು ತಂದು ಮುಖಕ್ಕೆ ಸಿಂಪಡಿಸಿದೆ. ಮೆಲ್ಲಗೆ ಕಣ್ಣು ತೆರೆದರು.

"ಈಗ ಹೇಗಿದೆ ಸಾರ್?" ಅಂದೆ.

"ಪರವಾಗಿಲ್ಲ. ಸ್ವಲ್ಪ ಡಾಕ್ಟರ್ ಹತ್ರ ಹೋದ್ರೆ ಒಳ್ಳೇದು" ಅಂದರು.

"ನೀವೇ ಕರೆದುಕೊಂಡು ಹೋಗಿಬಿಡಿ ಅಂಕಲ್" ಅಂದರು ಹುಡುಗ.

"ಸರಿ ಅಣ್ಣ" ಅಂತಾ ಒಂದು ಟ್ಯಾಕ್ಸಿ ತಂದು ಡಾಕ್ಟರ್ ಮನೇಗೆ ಹೋದೆ. ನನ್ನ ಅದೃಷ್ಟ. ಡಾಕ್ಟರ್ ಮನೇಲಿ ಇರಲಿಲ್ಲ.

ಇನ್ನೊಂದು ಡಾಕ್ಟರ್ ಮನೇಗೆ ಹೋದೆ: ಅವರಿದ್ದರು. ಪೇಷಂಟನ್ನ,

ಅಡಿಯಿಂದ-ಮುಡಿವರೆಗೆ ಪರೀಕ್ಷೆ ಮಾಡಿದರು.

"ಒಂದು ಇಂಜೆಕ್ಷನ್ ಕೊಡ್ತೀನಿ ಒಂದು ಹಾಫ್ ಅನ್ ಅವರ್ ಇಲ್ಲೀ ರೆಸ್ಟ್ ತೊಗೋಳ್ಳಿ" ಅಂತ ಇಂಜಕ್ಷನ್ ಕೊಟ್ರು.

ಅಲ್ಲಿಂದ ಅರ್ಧ ಘಂಟೆ ಬಿಟ್ಟು ಹೊರಟಾಗ, ಇಪ್ಪತ್ತೈದು ರೂಪಾಯಿಗೆ ಬಿಲ್ಲು ಕೊಟ್ಟರು.

ದೇವರೇ ಅಂತ ನನ್ನ ಜೇಬಿನಿಂದಲೇ ಕೊಟ್ಟು—ಇಬ್ಬರೂ ಹೊರಟು ಬಂದೆವು.

ಟ್ಯಾಕ್ಸಿ ಡ್ರೈವರ್, ವೈಟಿಂಗ್ ಚಾರ್ಜ್ ಸೇರಿ—ಐವತ್ತು ರೂಪಾಯಿ ನನ್ನಿಂದ ಕಿತ್ತು ಬಿಟ್ಟ!

ಇಲ್ಲಿ ಎಲ್ಲಾರ ಊಟ ಮುಗಿದಿತ್ತು!

"ಏಳಿ ಸಾರ್, ಊಟಕ್ಕೆ" ಅಂದ್ರು.

"ಕಿಟ್ಟು ವೈ ಹುಷಾರಿಲ್ಲ, ನಾನು ಹಾಗೇ ಮಲಗ್ತೀನಿ, ನೀ ಊಟ ಮಾಡಿಬಿಡು ಪಾಪ" ಅಂತ ಅಂದರು.

"ಅಡುಗೆಯವರನ್ನ ಕರೆದು ನಮ್ಮ ಕಿಟ್ಟೂಗೆ ಬಡಿಸಿ ಬಿಡಪ್ಪ" ಅಂದರು. ಅಡುಗೆಯವನು ತಲೆ ಕೆರೆದುಕೊಳ್ತಾ, "ಎಲ್ಲಾ ಯಜಮಾನ್ರೆ ಎಲ್ಲರ ಊಟಾನು ಮುಗೀತು" ಅಂದ.

"ಅವಕ್ಕೇ ಪಾತ್ರೆ ತೊಳೆಯೋಕೆ ಹಾಕಿದ್ದೀನಲ್ಲ—ಉಳಿದ ಪದಾರ್ಥನೆಲ್ಲಾ ಎಸೆದುಬಿಟ್ಟು...."

"ನನ್ನ ಮುಖ ಅವರು ನೋಡಿದ್ರು. ಅವರ ಮುಖ ನಾನು ನೋಡಿದೆ" ಅಂದ ಕಿಟ್ಟು.

* * *

ಹೋಟೆಲ್‌ನಲ್ಲಿ ನನ್ನ ತಟ್ಟೆ ನಾ ನೋಡಿದೆ.

"ನನಗೂ ಕಿಟ್ಟೂಗೂ ಮಜ್ಜಿಗೆ ಹಾಕಪ್ಪ" ಅಂದೆ.

"ಮಜ್ಜಿಗೆ ಎಲ್ಲಿದೆ ಸಾರ್? ಮೂರುವರೆ ಘಂಟೆ ಇಷ್ಟು ಇಕ್ಕಿದ್ದೆ ದೊಡ್ಡ ವಿಷಯ" ಅಂದ ಮಾಣಿ!

"ಕೃಷ್ಣಾ" ಅಂತ ಶಿವರನ್ನ ಕರೆದೆ.

"ಶಿವಾ" ಅಂತ ಅನುಮೋದಿಸಿದ ಕಿಟ್ಟು!

ಪಿ. ಎಸ್. ರಂಗಾಚಾರ್

ದಣಿವೋ ದಣಿವು !

ಹಿಂದಾನೊಂದು ಕಾಲದಲ್ಲಿ ಮಾಡಬೇಕಾಗಿದ್ದಂತೆ, ಇಂದು ನಾವು ಎಲ್ಲ ಕೆಲಸ ಕಾರ್ಯಗಳನ್ನು ಮೈಬಗ್ಗಿಸಿ, ಕೈಗಳಿಂದಲೇ ಮಾಡಬೇಕಾಗಿಲ್ಲ. ನಮ್ಮ ಶ್ರಮ-ಸಮಯಗಳನ್ನು ಕಡಿಮೆಗೊಳಿಸುವ ಅನೇಕ ಯಂತ್ರ ಸೌಲಭ್ಯಗಳನ್ನೂ ಸಂಚಾರ ಸಾಗಣೆ ಸೌಕರ್ಯಗಳನ್ನೂ ನಾವು ಹೊಂದಿದ್ದೇವೆ. ಆದರೂ ಹಿಂದಿಗಿಂತ ಇಂದು ಹೆಚ್ಚು ಹೆಚ್ಚು ದೂರು ಆಗಾಗ "ಪ್ರತಿದಿನ ಸಂಜೆ ಕಚೇರಿಯಿಂದ ಮನೆಗೆ ಬರುವಾಗ ವಿಪರೀತ ಸುಸ್ತಾಗಿ ಹಾಗೆಯೇ ಮಲಗಿಬಿಡೋಣವೆನಿಸುತ್ತದೆ....ನನಗೆಷ್ಟು ದಣಿವಾಗುತ್ತದೆಂದರೆ ಎಷ್ಟೋ ದಿನಗಳಿಂದ ಮಕ್ಕಳಿಗೆ ಎಣ್ಣೆಸ್ನಾನವನ್ನೇ ಮಾಡಿಸಿಲ್ಲ: ಅದೇಕೆ? ರುಚಿಯಾದ ಅಡಿಗೆ ಕಾಣದೆ ಅದೆಷ್ಟೋ ದಿನಗಳೇ ಆದವು....ಒಂದೇ ಒಂದು ಕ್ಷಣ ಮಲಗಿ ಕಣ್ಣುಮುಚ್ಚಿಕೊಂಡು ವಿಶ್ರಾಂತಿ ಪಡೆದರೂ ಸಾಕು ಅನಿಸುವಷ್ಟು ಬಳಲಿಕೆ...." ಎಂದು ಮುಂತಾಗಿ ಗೊಣಗುವುದನ್ನು ಕೇಳುತ್ತೇವೆ. ಹೀಗೆ ಇಷ್ಟೊಂದು ಜನರಿಗೆ ಇಷ್ಟೊಂದು ದಣಿವಾಗಲು ಕಾರಣವಾದರೂ ಏನು?

ದಣಿವಿನಲ್ಲಿ ಮುಖ್ಯವಾಗಿ ಮೂರು ಬಗೆಗಳಿವೆ :

ದೈಹಿಕ : ಶಕ್ತಿಮೀರಿ ಕೆಲಸ ಮಾಡುವುದರಿಂದ ಉಂಟಾಗುವ ದಣಿವು. ಇದನ್ನು ಹೋಗಲಾಡಿಸುವುದು ಅಷ್ಟೇನೂ ಕಷ್ಟವಲ್ಲ. ಸ್ವಲ್ಪ ಮೈಸಡಿಲಬಿಟ್ಟು ವಿಶ್ರಾಂತಿ ತೆಗೆದುಕೊಂಡರೆ ಸಾಕು: ದಣಿವು ಮಾಯವಾಗುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಉದಾಹರಣೆಗೆ ತುಂಬ ಹೊತ್ತು ಟೆನ್ನಿಸ್ಸನ್ನೋ ಫುಟ್‌ಬಾಲನ್ನೋ ಆಡಿ ಬಂದಾಗ ಅಥವಾ ಮೈಲಿಗಟ್ಟಲೆ ದೂರ ವಾಕ್ ಹೋಗಿ ಬಂದ ಅನಂತರ-ಉಂಟಾಗುವ ಸುಸ್ತು ನಮಗೆ ಒಂದು ತರಹದ ಹಿತಕರವಾದ ಅನುಭವವೇ ಆಗಿರುವುದೂ ಉಂಟು. ಆದರೆ ಹೆಚ್ಚುಹೆಚ್ಚಾದ ದೈಹಿಕ ಶ್ರಮ, ಶಾರೀರಿಕ ಚಟುವಟಿಕೆಗಳು, ನಮ್ಮ ಶಕ್ತಿಯನ್ನು ಕುಂದಿಸಿ ಬಳಲಿಕೆಯನ್ನು ಉಂಟುಮಾಡುತ್ತವೆ ಎಂಬುದರಲ್ಲಿ ಸಂದೇಹವಿಲ್ಲ.

ರೋಗಸಂಬಂಧಿ : ಇಲ್ಲಿ ದಣಿವು ಯಾವುದಾದರೂ ಅನಾರೋಗ್ಯದ ಚಿಹ್ನೆಯಾಗಿರುತ್ತದೆ. ಬಳಲಿಕೆಗೆ ಚಳಿಯಂತಹ ಸಾಮಾನ್ಯ ಕಾರಣವೇ ಇರಬಹುದು

೧೯೮೧ನೆ ಅಕ್ಟೋಬರ್ ತಿಂಗಳ 'ರೀಡರ್ಸ್ ಡೈಜೆಸ್ಟ್' ಪತ್ರಿಕೆಯಲ್ಲಿ ಅಚ್ಚಾದ 'ವೈ ಆರ್ ಸೋ ಮೆನಿ ಪೀಪಲ್ ಸೋ ಟಯರ್ಡ್' ಎಂಬ ಲೇಖನದ ಅನುವಾದ.

ಅಥವಾ ಡಯಬಿಟಿಸ್–ಕ್ಯಾನ್ಸರ್‌ಗಳಂತಹ ಗಂಭೀರ ಕಾರಣಗಳೇ ಇರಬಹುದು. ರೋಗಕ್ಕೆ ಸಂಬಂಧಿಸಿದಂತೆ, ಬಳಲಿಕೆಯೊಡನೆ ಇನ್ನಿತರ ಪ್ರತ್ಯೇಕ ಚಿಹ್ನೆಗಳೂ ತಲೆದೋರುತ್ತವೆ. ಅದೇನೇ ಇದ್ದರೂ ದಣಿವಿನ ಅನುಭವ ದೀರ್ಘಕಾಲ ಮುಂದುವರಿದರೆ, ಒಮ್ಮೆ ಸಂಪೂರ್ಣ ವೈದ್ಯಕೀಯ ಪರೀಕ್ಷೆ ಮಾಡಿಸಿಕೊಳ್ಳುವುದು ಅತ್ಯಗತ್ಯ.

ಮಾನಸಿಕ: ಭಾವನಾತ್ಮಕ ಸಮಸ್ಯೆ-ಒಳತೋಟಿಗಳಿಂದ, ಮುಖ್ಯವಾಗಿ ಕೊರಗು ಕಾತರತೆಗಳಿಂದ, ದೀರ್ಘಾವಧಿಯ ದಣಿವು ಕಾಣಿಸಿಕೊಳ್ಳುತ್ತದೆ. ಔದ್ಯೋಗಿಕ ಅತೃಪ್ತಿ, ಇಷ್ಟವಿಲ್ಲದ ವಿವಾಹ ಮೊದಲಾದುವುಗಳನ್ನು ಮರೆಯಲು ಮಾಡುವ ವ್ಯರ್ಥ ಪ್ರಯತ್ನ ದೇಹಮನಸ್ಸುಗಳ ದಣಿವಿಗೆ ಕಾರಣವಾಗುತ್ತದೆ. ಮನಸ್ಸಿನ ಚಿಂತೆಯನ್ನು ಅಭಿವ್ಯಕ್ತಗೊಳಿಸಲು ಸಾಧ್ಯವಾಗದೆ, ಅದನ್ನು ಮರೆಯಲೂ ಸಾಧ್ಯವಾಗದೆ ವ್ಯಕ್ತಿ ತೊಳಲಾಡುತ್ತಾನೆ. ಮನಸ್ಸಿನ ಹೊಯ್ದಾಟ ದೇಹದ ಮೇಲೂ ಪರಿಣಾಮಬೀರಿ ಬಳಲಿಕೆ ಕಾಣಿಸಿಕೊಳ್ಳುತ್ತದೆ. ಆದರೆ ದುರದೃಷ್ಟವಶಾತ್, ಯಾವಾಗಲೂ ಸುಸ್ತುಸುಸ್ತು ಎಂದು ಒದ್ದಾಡುವ ಅನೇಕ ಮಂದಿ ಅದರ ಕಾರಣ ತಿಳಿಯುವ ಗೋಜಿಗೇ ಹೋಗುವುದಿಲ್ಲ.

ನಿದರ್ಶನಕ್ಕೆ ಗೃಹಿಣಿಯರ ದಣಿವನ್ನೇ ತೆಗೆದುಕೊಳ್ಳಬಹುದು. ಕಿರಿಯ ವಯಸ್ಸಿನ ಅನೇಕ ತಾಯಂದಿರು ದೈಹಿಕ-ಮಾನಸಿಕ ಬಳಲಿಕೆಗೆ ತುತ್ತಾಗುವುದು ಸರ್ವಸಾಮಾನ್ಯ. ಸ್ವಲ್ಪವೂ ವಿಶ್ರಾಂತಿಯೇ ಇಲ್ಲದೆ, ಮಕ್ಕಳ ಆರೈಕೆ-ಮನೆಗೆಲಸಗಳಲ್ಲಿ, ಮುಂಜಾವಿನಿಂದ ಸಂಜೆಯವರೆಗೆ ಕಳೆಯುವ ಅನೇಕ ಗೃಹಿಣಿಯರಿಗೆ ಮಾತನಾಡಲೂ ಬಿಡುವಿಲ್ಲದಿರುವಾಗ, ಮನೋರಂಜನೆ ಪಡೆಯುವ ಅವಕಾಶವಾದರೂ ಎಲ್ಲಿ? ಪ್ರತಿಫಲಕ್ಕಾಗಲಿ, ಮೆಚ್ಚುಗೆಗಾಗಲಿ ಪಾತ್ರರಾಗದ ಇವರು ಬೇಸರದ ಬದುಕಿನಲ್ಲಿ ತೀವ್ರ ಅತೃಪ್ತಿ ತಾಳುವುದು ಸಹಜ. ಈ ಅತೃಪ್ತಿಯ ಪರಿಣಾಮವೇ ದಣಿವು.

ಇಂದಂತೂ ಚಿಕ್ಕಮಕ್ಕಳ ತಾಯಂದಿರಲ್ಲಿ ಬಹುಮಟ್ಟಿಗೆ ಅರ್ಧದಷ್ಟು ಮಂದಿ ಉದ್ಯೋಗಕ್ಕೆ ಸೇರಿ ಮನೆಯ ಹೊರಗೂ–ಕಾಲೇಜು, ಕಛೇರಿಕಾರ್ಖಾನೆಗಳಲ್ಲಿ–ದುಡಿಯುತ್ತಿದ್ದಾರೆ. ಉದ್ಯೋಗಸ್ಥ ಗೃಹಿಣಿಯರ ದಣಿವಿಗೆ ತನ್ನದೇ ಆದ ವಿಶಿಷ್ಟ ಲಕ್ಷಣವುಂಟು. ಮನೆ ಹಾಗೂ ಕಛೇರಿಗಳಲ್ಲಿ ಪರಸ್ಪರ ವಿರುದ್ಧವಾದ ಪಾತ್ರಗಳನ್ನು ನಿರ್ವಹಿಸಬೇಕಾದ, ವಿಭಿನ್ನ ಜವಾಬ್ದಾರಿಗಳನ್ನು ಹೊರಬೇಕಾದ ಇವರಲ್ಲಿ ಮಕ್ಕಳು ಮತ್ತು ಮನೆಗೆಲಸದತ್ತ ಸರಿಯಾದ ಗಮನ ಹರಿಸಲಾಗುತ್ತಿಲ್ಲವೆಂಬ ಅಪರಾಧಿ ಮನೋಭಾವ ಬೆಳೆದು ಇವರು ಸದಾ ಸಿಡಿಮಿಡಿಗೊಳ್ಳು

ತ್ತಾರೆ; ನಿದ್ರೆಯ ತೊಂದರೆಗಳಿಗೆ ಬಲಿಯಾಗುತ್ತಾರೆ.

ಭಾವನಾತ್ಮಕ ಸಮಸ್ಯೆಗಳ ಕಾರಣವನ್ನು ಅರಿಯುವುದೊಂದೇ ಮನೋವೈಜ್ಞಾನಿಕ ದಣಿವನ್ನು ಪರಿಹರಿಸಿಕೊಳ್ಳಲು ಇರುವ ಪರಿಣಾಮಕಾರೀ ಮಾರ್ಗ. ಇದರಲ್ಲಿ ನೀವು ಸಾಫಲ್ಯ ಪಡೆದಿರೋ, ನಿಮ್ಮ ದಣಿವು ಅರ್ಧದಷ್ಟು ಮಾಯವಾಗುತ್ತದೆ. ಈ ವಿಚಾರದಲ್ಲಿ ವೃತ್ತಿಪರ ಮನೋವಿಜ್ಞಾನಿಗಳು ಅಥವಾ ಸಲಹೆಗಾರರು ನಿಮಗೆ ನೆರವಾಗಬಲ್ಲರಾದರೂ ನಿಮ್ಮ ಪಾತ್ರವೇ ಮಹತ್ವದ್ದು.

ವಿಟಾಮಿನ್ ಅಥವಾ ಔಷಧಗಳೂ ನಿಮಗೆ ನೆರವಾಗಲಾರವು. ನಿದ್ರೆಗುಳಿಗೆಗಳ ಸೇವನೆ ಅಥವಾ ಮದ್ಯಪಾನಗಳಿಂದ ಸಿಗುವ ಪರಿಹಾರವೂ ಕೇವಲ ತಾತ್ಕಾಲಿಕ. ಇಂಥ ವಿಧಾನಗಳಿಂದ ಪ್ರಯೋಜನಗಳಿಗಿಂತ ಅಪಾಯವೇ ಅಧಿಕ. ಹಾಗಾದರೆ ನೀವೇನು ಮಾಡಬಹುದು? ಇದೋ ಗಮನಿಸಿ:

ಆಹಾರ: ಬೆಳಿಗ್ಗೆ ಉಪವಾಸವಿದ್ದರೆ ಅಥವಾ ತಿನ್ನುವುದರಲ್ಲಿ ಜಿಪುಣತನ ತೋರಿಸಿದರೆ, ನಿಮಗೆ ಹತ್ತು-ಹನ್ನೊಂದು ಗಂಟೆಯ ವೇಳೆಗೆ ವಿಪರೀತ ಸುಸ್ತಾಗುತ್ತದೆ. ಆದ್ದರಿಂದ ಬೆಳಿಗ್ಗೆ ಪ್ರೊಟೀನ್‌ಯುಕ್ತ ಆಹಾರವನ್ನು ಹೊಟ್ಟೆ ತುಂಬ ಸೇವಿಸುವುದು ಅವಶ್ಯಕ. ಆಗಾಗ ಟೀಯನ್ನೋ ಕಾಫಿಯನ್ನೋ ಕುಡಿಯುವುದರಿಂದ ಅಥವಾ ಸಿಗರೇಟು ಸುಡುವುದರಿಂದ ಶಕ್ತಿ ಬರುತ್ತದೆಂದು ನಂಬಿದ್ದರೆ ಅದು ಕೇವಲ ಭ್ರಮೆ. ಆಗಾಗ ಏನನ್ನಾದರೂ ಅಲ್ಪಸ್ವಲ್ಪ ತಿನ್ನುವ ಬದಲು ದಿನಕ್ಕೆ ಮೂರೋ, ನಾಲ್ಕೋ ಸಲ ಚೆನ್ನಾಗಿ ಆಹಾರ ಸೇವಿಸಿ. ದೇಹದ ತೂಕ ಹೆಚ್ಚಾದಷ್ಟೂ ದಣಿವಾಗುವುದು ಹೆಚ್ಚು ಎಂಬುದನ್ನು ಮರೆಯಬೇಡಿ.

ವ್ಯಾಯಾಮ: ವ್ಯಾಯಾಮ ನಿಮ್ಮ ಶಕ್ತಿಯನ್ನು ಹೀರುವುದಿಲ್ಲ; ಹೆಚ್ಚಿಸುತ್ತದೆ. ನಿಧಾನವಾಗಿ ತುಂಬ ದೂರ ನಡೆಯುವುದು, ಸೈಕಲ್ ಸವಾರಿ, ಈಜುವಿಕೆ-ಹೀಗೆ ವ್ಯಾಯಾಮ ಯಾವ ಬಗೆಯದೇ ಇರಲಿ, ಅದನ್ನು ನಿಯಮಿತವಾಗಿ ಮಾಡಿ. ದಿನದ ದುಡಿಮೆ ಮುಗಿದ ತರುವಾಯ ಮಾಡುವ ವ್ಯಾಯಾಮದಿಂದ ರಾತ್ರಿ ಚೆನ್ನಾಗಿ ನಿದ್ರೆ ಮಾಡಲೂ ನೀವು ಶಕ್ತರಾಗುತ್ತೀರಿ.

ನಿದ್ರೆ: ನಿದ್ರೆ ಕಡಿಮೆಯಾದುದೇ ನಿಮ್ಮ ದಣಿವಿಗೆ ಕಾರಣವೆನ್ನುತ್ತೀರಾ? ಹಾಗಿದ್ದರೆ ಪರಿಹಾರ ತೀರ ಸುಲಭ: ರಾತ್ರಿ ಬೇಗ ಮಲಗಿಕೊಳ್ಳಿ. ಆದರೆ ಮೊದಲೇ ಹೇಳಿದಂತೆ, ನಿದ್ರೆಗುಳಿಗೆಗಳಂತಹ ಔಷಧಗಳ ಗುಲಾಮರು ಮಾತ್ರ ಖಂಡಿತ ಆಗಬೇಡಿ.

ಸ್ವಸಮಾಯೋಜನೆ: ನೀವು ಹೆಚ್ಚು ಉತ್ಸಾಹದಲ್ಲಿರುವಾಗಲೇ-ಬಳಲಿಕೆಯಿಂದ ದೂರವಿರುವಾಗಲೇ-ಕೆಲಸ ಮಾಡುವಂತಹ ನಿಮ್ಮ ದೇಹದ ವೇಳಾಪಟ್ಟಿ

ತಯಾರಿಸಿಕೊಳ್ಳಿ. ಉದಾಹರಣೆಗೆ, ಕೆಲವು 'ಮುಂಜಾನಿನ ಮನುಷ್ಯ' ರಿರುತ್ತಾರೆ. ಅವರಿಗೆ ಮಧ್ಯಾಹ್ನಾನಂತರ ಯಾವ ಕೆಲಸ ಮಾಡಲೂ ಸಾಧ್ಯವಾಗುವುದಿಲ್ಲ. ಇನ್ನು ಕೆಲವರು ಮಧ್ಯಾಹ್ನ ಮಾತ್ರ ಕೆಲಸ ಮಾಡಬಲ್ಲರು. ಆದರೆ ಬೆಳಗ್ಗೆ ಗಂಟೆ ಎಂಟಾದರೂ ಏಳಲು ಸೋಮಾರಿತನ. ಆದ್ದರಿಂದ ನಿಮ್ಮ ದೇಹ ಶಕ್ತಿ-ಉತ್ಸಾಹಗಳಿಂದ ಕೂಡಿರುವ ಸಮಯಕ್ಕೆ ಸರಿಯಾಗಿ ನಿಮ್ಮ ಕೆಲಸ ಹೊಂದಿಸಿಕೊಳ್ಳಿ.

ವಿರಾಮ: ಒಂದೇ ಸಮನೆ ಕೆಲಸ ಮಾಡುತ್ತಿರುವ ಬದಲು. ಆಗಾಗ ಕೊಂಚ ವಿಶ್ರಾಂತಿ ಪಡೆದುಕೊಳ್ಳಿ; ಅಥವಾ ಕೆಲಸದ ಬಗೆಯನ್ನು ಬದಲಾಯಿಸಿಕೊಳ್ಳಿ. ಅಷ್ಟೇ ಅಲ್ಲ: ಕಾಫಿಯನ್ನೋ ಟೀಯನ್ನೋ ಕುಡಿಯುವ ಸಾಂಪ್ರದಾಯಿಕ ವಿಧಾನವನ್ನೂ ಬಿಟ್ಟು, ಬಿಡುವಿನ ಅವಧಿಯಲ್ಲಿ ಶತಪಥ ಸುತ್ತಾಡಿ ಅಥವಾ ಧ್ಯಾನ-ಯೋಗಗಳ ಅಭ್ಯಾಸಮಾಡಿ.

ಶಂಸ ಐತಾಳ



ಐಶ್ವರ್ಯದಿಂದ ಅಮೃತತ್ವದ ದಿವ್ಯಾನುಭವ ಹೊಂದುವೆನೆಂಬ ಆಸೆ ನಿರಾಶೆಯುಕ್ತವಾದುದು. ಅಂಥ ಆಶೆಗೆ ಅವಕಾಶವೇ ಇಲ್ಲ.

—ಶ್ರುತಿ

ಶ್ರೀಮಂತಿಕೆಯಿಂದ ದೇವಸಾನ್ನಿಧ್ಯವನ್ನು ಪಡೆಯಬಹುದೆಂಬುದು ಸೂಜಿಯ ತೂತಿನಲ್ಲಿ ಒಂಟೆ ಹೊಕ್ಕು ಹೋಗಬಹುದೆಂಬಷ್ಟು ಅಸಾಧ್ಯವಾದುದು.

—ಯೇಸುಸ್ವಾಮಿ

ಮೃತ್ಯು ನಿಮ್ಮ ನಿಮ್ಮ ತಲೆಗೂದಲುಗಳನ್ನು ಹಿಡಿದು ಜಗ್ಗುವದೆಂಬುದನ್ನು ಗಮನದಲ್ಲಿಟ್ಟುಕೊಂಡು ಕಾರ್ಯಕ್ರಮ ಧರ್ಮಗಳನ್ನಾಚರಿಸಿರಿ.

—ನೀತಿಶಾಸ್ತ್ರ

ಸಂತ ನಾಮದೇವ

ಮಹಾರಾಷ್ಟ್ರದಲ್ಲಿ ಐದು ಶತಮಾನಗಳ ಕಾಲ ಎಡೆಬಿಡದೆ ಅನೇಕ ಮಂದಿ ಸಂತಪುರುಷರು ಜನ್ಮ ತಳೆದರು. ಹದಿಮೂರು ಮತ್ತು ಹದಿನಾಲ್ಕನೆಯ ಶತಮಾನಗಳಲ್ಲಿ ಮಹಾರಾಷ್ಟ್ರದ ನೆಲದಲ್ಲಿ ಹುಟ್ಟಿದ ಸಂತರೆಲ್ಲರೂ ಚಂದ್ರಭಾಗಾ ನದಿಯ ದಡದಲ್ಲಿದ್ದ ಪವಿತ್ರನಗರ ಪಂಢರಪುರದ ದೇವಾಲಯದಲ್ಲಿ ಪ್ರತಿಷ್ಠಿತನಾಗಿರುವ ಪಾಂಡುರಂಗ ವಿಟ್ಠಲನ ಭಕ್ತರಾಗಿದ್ದರು. ಅವರೆಲ್ಲರೂ ಕವಿಗಳಾಗಿದ್ದರು. ಗಾಯಕರಾಗಿದ್ದರು. ಅವರ ಹರಿನಾಮ ಕೀರ್ತನೆ ಮತ್ತು ಹರಿಕಥೆಯ ಸಂಪ್ರದಾಯ ಇಂದೂ ಮಹಾರಾಷ್ಟ್ರದಲ್ಲೆಲ್ಲಾ ಹರಿಯುತ್ತಿದೆ.

ಹರಿಕಥೆ ಮತ್ತು ಹರಿನಾಮ ಕೀರ್ತನೆಯ ಪಂಥವನ್ನು ಹುಟ್ಟುಹಾಕಿದವರೆಂದರೆ ಸಂತಜ್ಞಾನೇಶ್ವರರು ಹಾಗೂ ಸಂತ ನಾಮದೇವರಂಥವರು. ನಾಮದೇವರು ಸಂತಜ್ಞಾನೇಶ್ವರರಿಗಿಂತ ಐದುವರ್ಷ ಮೊದಲು ಕ್ರಿ. ಶ. ೧೨೭೦ರ ಕಾರ್ತಿಕ ಶುಕ್ಲ ಏಕಾದಶಿಯಂದು ಭಾನುವಾರ ಹುಟ್ಟಿದ್ದರು. ಈ ಹುಡುಗ ದೊಡ್ಡವನಾಗಿ ನೂರುಕೋಟಿ ಅಭಂಗಗಳನ್ನು ರಚಿಸುತ್ತಾನೆಂದು ಒಬ್ಬ ಜ್ಯೋತಿಷಿ ಆಗಲೇ ಭವಿಷ್ಯ ನುಡಿದಿದ್ದ. ನಾಮದೇವರ ತಂದೆ ದಾಮಾಶೇಟಿ ನರಸಿಂಹಪುರದಲ್ಲಿ ದರ್ಜಿಯಾಗಿದ್ದರು. ತಾಯಿಯ ಹೆಸರು ಗೋಣಾಯಿಬಾಯಿ.

ನಾಮದೇವನಿಗೆ ಐದುವರ್ಷ ವಯಸ್ಸಾಗಿದ್ದಾಗ ಅವನ ತಾಯಿ ಒಮ್ಮೆ ಒಂದು ಲೋಟ ಹಾಲನ್ನು ಕೈಯಲ್ಲಿ ಕೊಟ್ಟು ದೇವಸ್ಥಾನಕ್ಕೆ ಹೋಗಿ ನೈವೇದ್ಯಕ್ಕೆ ಇಟ್ಟು ಬರುವಂತೆ ಹೇಳಿದಳು. ಹುಡುಗ ನಾಮದೇವ ದೇವಸ್ಥಾನಕ್ಕೆ ಹೋಗಿ ಲೋಟವನ್ನು ವಿಟ್ಠಲನ ಮೂರ್ತಿಯ ಮುಂದೆ ಇಟ್ಟು ಹಾಲನ್ನು ಕುಡಿಯುವಂತೆ ಮೂರ್ತಿಯನ್ನು ಬಲವಂತ ಮಾಡತೊಡಗಿದ. ಏನುಮಾಡಿದರೂ ಮೂರ್ತಿ ಹಾಲನ್ನು ಕುಡಿಯಲಿಲ್ಲ. ಹುಡುಗ ಅಳುತ್ತಾ ಹೇಳಿದ 'ಒಂದು ವೇಳೆ ನೀನು ಹಾಲು ಕುಡಿಯದಿದ್ದರೆ ನಾನು ತನ್ನ ತಲೆಯನ್ನು ಕಲ್ಲಿಗೆ ಚಚ್ಚಿಕೊಳ್ಳುತ್ತೇನೆ.'

ತಕ್ಷಣವೆ... ಒಂದು ಚಮತ್ಕಾರ ನಡೆಯಿತು....ಹಾಲಿನ ಲೋಟ ಬರಿದಾಯಿತು. ನಾಮದೇವನಿಗೆ ಜಗ ಹಿಡಿಸಲಾರದಷ್ಟು ಸಂತೋಷ. ಖಾಲಿ ಲೋಟವನ್ನು ನೋಡಿ ತಾಯಿ ಹಾಲು ಏನಾಯಿತೆಂದು ಕೇಳಿದಳು. "ಹಾಲು

೧೯೮೧ರ ಇಸವಿ ಅಕ್ಟೋಬರ್ ತಿಂಗಳ 'ನವನೀತ್'ನಲ್ಲಿ ಪ್ರಕಟವಾದ ಶ್ರೀಮತಿ ಸಾವಿತ್ರಿಬಾಯಿ ಖಾನೋಲ್‌ಕರ್‌ರವರ 'ಸಂತ ನಾಮದೇವ' ಲೇಖನದ ಕನ್ನಡಾನುವಾದ,

ವಿಟ್ಠಲ ಕುಡಿದುಬಿಟ್ಟ" ಎಂದು ಹುಡುಗ ಸರಾಗವಾಗಿ ಹೇಳಿದ.

"ಸುಳ್ಳು ಹೇಳಬೇಡ. ಹಾಲು ವಿಟ್ಠಲ ಹೇಗೆ ಕುಡಿಯುತ್ತಾನೆ? ನೀನೇ ಕುಡಿದಿರಬೇಕು."

"ಇಲ್ಲ ಅಮ್ಮ, ನಾನು ಕುಡಿಯಲಿಲ್ಲ. ವಿಟ್ಠಲನೇ ಕುಡಿದ."

ಹೀಗೆಯೇ ಮಾತು ನಡೆಯುತ್ತಿದ್ದಾಗ ತಂದೆ ದಾಮಾಶೇಟಿ ಅಲ್ಲಿಗೆ ಬಂದರು. ಎಲ್ಲವನ್ನೂ ಕೇಳಿದ ಅವರು ಹೇಳಿದರು. 'ನಾಳೆಯೂ ವಿಟ್ಠಲ ನೀನು ತೆಗೆದುಕೊಂಡು ಹೋದ ಹಾಲನ್ನು ಕುಡಿದರೆ ನಿನ್ನ ಮೇಲೆ ನಂಬಿಕೆ ಬರುತ್ತೆ.'

ಮಾರನೇ ದಿನ ಹುಡುಗ ನಾಮದೇವ ದೇವಸ್ಥಾನಕ್ಕೆ ತಂದೆಯ ಜೊತೆ ಹೋಗಿ ಹಿಂದಿನ ದಿನದಂತೆಯೇ ದೇವರ ವಿಗ್ರಹದ ಮುಂದೆ ಬೇಡಿಕೆ ಹಾಕಿದ. ವಿಟ್ಠಲದೇವರು ಹಾಲನ್ನು ಕುಡಿದುದಲ್ಲದೆ ತಂದೆಮಕ್ಕಳಿಗೆ ಆಶೀರ್ವಾದ ಮಾಡಿ ಕಳುಹಿಸಿದ. ಅಂದಿನಿಂದ ನಾಮದೇವನ ಪಾಲಿಗೆ ವಿಟ್ಠಲ ಪರಮಾಪ್ತ ಸಖನಾದ. ಅವನ ಸಮಯವೆಲ್ಲ ವಿಟ್ಠಲನ ಭಜನೆಯನ್ನು ಕೇಳುವುದರಲ್ಲೇ ಕಳೆಯತೊಡಗಿತು. ತಂದೆಯಿಂದ ದರ್ಜಿಯ ಕೆಲಸ ಕಲಿಯುವುದಕ್ಕೇ ಆಗಲಿ, ಸಾಂಸಾರಿಕ ವಿಷಯಗಳನ್ನು ತಿಳಿದುಕೊಳ್ಳುವುದಕ್ಕೇ ಆಗಲಿ ಅವನು ಮನಸ್ಸು ಕೊಡಲಿಲ್ಲ. ಮಗನ ಗಮನವನ್ನು ಐಹಿಕ ವಿಷಯಗಳತ್ತ ಸೆಳೆಯುವ ಉದ್ದೇಶದಿಂದ ತಾಯಿ ಬಹಳ ಕಡಿಮೆ ವಯಸ್ಸಿನಲ್ಲೇ ರಜಾಯಿಬಾಯಿ ಎಂಬ ಹುಡುಗಿಯೊಡನೆ ಮದುವೆ ಮಾಡಿದಳು. ಆದರೆ ರಜಾಯಿಬಾಯಿಗೆ ತನ್ನ ಗಂಡನ ಗಮನವನ್ನು ವಿಟ್ಠಲನಿಂದ ಆಚೆ ಈಚೆ ಸೆಳೆಯಲಾಗಲಿಲ್ಲ. ಬದಲಾಗಿ ನಾಮದೇವನೇ ತನ್ನ ಹರೆಯದ ಮಡದಿಯನ್ನು ವಿಟ್ಠಲನ ಭಕ್ತಳನ್ನಾಗಿ ಮಾಡಿದ.

* * *

ನಾಮದೇವರ ಮನಸ್ಸಿನಲ್ಲಿದ್ದ ಅತ್ಯಂತ ಆಳವಾದ ವಿಟ್ಠಲಭಕ್ತಿಯ ದೆಸೆಯಿಂದಾಗಿ ಜ್ಞಾನೇಶ್ವರರೂ ಅವರತ್ತ ಸಾಗಿ ಬಂದರು. ಇಬ್ಬರೂ ಒಳ್ಳೆಯ ಮಿತ್ರರಾದರು. ಜೊತೆಯಾಗಿಯೇ ವಿಟ್ಠಲನನ್ನು ಆರಾಧಿಸತೊಡಗಿದರು. ಇಬ್ಬರೂ ಒಟ್ಟಿಗೆ ಪಂಢರಪುರದಲ್ಲಿ ಸಂಕೀರ್ತನೆಯನ್ನು ಮಾಡತೊಡಗಿದರು.

ಒಂದು ದಿನ ಮಧ್ಯಾಹ್ನ ನಾಮದೇವರು ಮಧ್ಯಾಹ್ನದ ಊಟವನ್ನು ಮಾಡುತ್ತಿದ್ದರು. ಒಂದು ನಾಯಿ ಸದ್ದಿಲ್ಲದೆ ಬಂದು ಅವರ ತಟ್ಟೆಯಲ್ಲಿದ್ದ ರೊಟ್ಟಿಯನ್ನು ತೆಗೆದುಕೊಂಡು ಓಡತೊಡಗಿತು. ನಾಮದೇವರು ತುಪ್ಪದ ಬಟ್ಟಲನ್ನು ಕೈಯಲ್ಲಿ ಹಿಡಿದು ಅದರ ಹಿಂದೆ ಓಡಲಾರಂಭಿಸಿದರು. ಓಡುತ್ತಲೇ ಹೀಗೆ ಕೂಗಿಕೊಳ್ಳುತ್ತಿದ್ದರು: "ಹೇ ಭಗವಂತ, ಈ ತುಪ್ಪವನ್ನು ತೆಗೆದು

ಕೊಂಡು ಹೋಗು, ಇಲ್ಲವಿದ್ದರೆ ಒಣಗಿದ ರೊಟ್ಟಿ ನಿನಗೆ ಸೇರುವುದಿಲ್ಲ". ಅವರು ಎಲ್ಲಾ ಪ್ರಾಣಿಗಳಲ್ಲೂ ಭಗವಂತನ ಸಾಕ್ಷಾತ್ಕಾರವನ್ನು ಕಂಡುಕೊಳ್ಳುತ್ತಿದ್ದರು.

ನಾಮದೇವರ ಪಾಲಿಗೆ ವಿಟ್ಠಲ ಸಜೀವನಾದ ದೇವರಾಗಿದ್ದ. ಅವನೊಡನೆ ಅವರು ಮಾತನಾಡುತ್ತಿದ್ದರು. ಹಾಡಿ ಕುಣಿಯುವವರಾಗಿದ್ದರು. ದೇವರ ಹೆಸರು ಯಾವಾಗಲೂ ಅವರ ನಾಲಿಗೆಯ ತುದಿಯಲ್ಲಿರುತ್ತಿತ್ತು, ಮನಸ್ಸಿನಲ್ಲಿ ತುಂಬಿರುತ್ತಿತ್ತು. ದೇವರ ನಾಮ ಸಂಕೀರ್ತನೆಯಿಂದ ಸಿಗುತ್ತಿದ್ದ ಸುಖವನ್ನು ಜೀವಿಗಳೊಡನೆ ಹಂಚಿಕೊಳ್ಳಲು ಅವರು ಯಾವಾಗಲೂ ಸಿದ್ಧರಾಗಿರುತ್ತಿದ್ದರು.

ಅವರ ವಿಟ್ಠಲನನ್ನು ಬಿಟ್ಟಿರಲು ಅವರು ಎಂದಿಗೂ ಒಪ್ಪುತ್ತಿರಲಿಲ್ಲ. ಹಾಗಾಗಿ ಜ್ಞಾನೇಶ್ವರರು ಹರಿಸಂಕೀರ್ತನೆಗಾಗಿ ಉತ್ತರ ಭಾರತಕ್ಕೆ ಪ್ರವಾಸ ಹೋಗುವ ಪ್ರಸ್ತಾಪವನ್ನು ನಾಮದೇವರ ಮುಂದಿಟ್ಟಾಗ ಅವರು ಸುಲಭವಾಗಿ ಅದಕ್ಕೆ ಒಪ್ಪಲಿಲ್ಲ. ಕಡೆಗೆ ವಿಟ್ಠಲನೇ ಅನುಮತಿ ನೀಡಿ ಅವರನ್ನು ಯಾತ್ರೆಗೆ ಒಪ್ಪಿಸಿ ಕಳುಹಿಸಿದ. ಅಲ್ಲದೆ ಯಾತ್ರೆಯ ಕಾಲದಲ್ಲಿ ಅವರು ಯಾವಾಗಲೂ ಜ್ಞಾನೇಶ್ವರರ ಜೊತೆಯಲ್ಲಿರಬೇಕೆಂದೂ ಅವರು ಹೇಳಿದಂತೆ ಕೇಳಬೇಕೆಂದೂ ವಿಟ್ಠಲ ನಾಮದೇವರಿಗೆ ಹೇಳಿ ಕಳುಹಿಸಿದ. ಯಾತ್ರೆಯಲ್ಲಿ ಈ ಇಬ್ಬರು ಮಹಾಸಂತರಲ್ಲದೆ ಗೋರೋಬಾ ಕುಂಬಾರ, ಸಾವತಾಮಾಲಿ, ಬಂಕಾ, ಚೋಖಾಮೇಳಾ ಮತ್ತು ವಿಸೋಬಾಖೇಚರಾ ಮೊದಲಾದ ಸಂತರೂ ಇದ್ದರು.

ಒಮ್ಮೆ ಅವರ ಗುಂಪು ರಾಜಸ್ಥಾನದ ಮರುಭೂಮಿಯಲ್ಲಿ ಹೋಗುತ್ತಿದ್ದಾಗ ದಾರಿ ತಪ್ಪಿಹೋಯಿತು. ಎಲ್ಲಿ ನೋಡಿದರೂ ಒಂದು ಹನಿ ನೀರಿನ ಸುಳಿವೂ ಇರಲಿಲ್ಲ. ತುಂಬ ಪ್ರಯತ್ನಪಟ್ಟು ಹುಡುಕಿದ ಮೇಲೆ ಒಂದು ಬಾವಿ ಸಿಕ್ಕಿತು. ಅದು ಎಷ್ಟು ಆಳವಾಗಿತ್ತೆಂದರೆ ಅದರಿಂದ ನೀರನ್ನು ಸೇದಿಕೊಳ್ಳುವುದು ಸಾಧ್ಯವಿರಲಿಲ್ಲ. ಜ್ಞಾನದೇವರು ಸೂಕ್ಷ್ಮರೂಪವನ್ನು ಧರಿಸಿ ಬಾವಿಯಲ್ಲಿ ಪ್ರವೇಶಿಸಿ ತಮ್ಮ ಬಾಯಾರಿಕೆ ತಣಿಸಿಕೊಂಡು ಬಂದರು. ಹಾಗೆಯೇ ಯೌಗಿಕ ಶಕ್ತಿಯ ಮೂಲಕ ಬಾಯಾರಿಕೆಯನ್ನು ಇಂಗಿಸಿಕೊಳ್ಳಲು ನಾಮದೇವ ಮತ್ತಿತರ ಸಂತರಿಗೆ ಹೇಳಿದರು. ಆದರೆ ನಾಮದೇವರು ಅದಕ್ಕೆ ಒಪ್ಪಲಿಲ್ಲ. ಯೋಗಶಕ್ತಿಗಿಂತ ವಿಟ್ಠಲನ ಭಕ್ತಿ ಲಕ್ಷಪಟ್ಟು ಮೇಲೆಂದರು. ಬಾಯಾರಿಕೆ ಇಂಗಿಸಿಕೊಳ್ಳಲು ವಿಟ್ಠಲನ ಶಕ್ತಿಯ ಮೇಲೆಯೇ ಅವರಿಗೆ ಹೆಚ್ಚು ಭರವಸೆ. ಅವರು ಪ್ರಾರ್ಥನೆ ಮಾಡತೊಡಗಿದರು. "ಹೇ ಪಾಂಡುರಂಗ! ನಿನ್ನ ಭಕ್ತ ಬಾಯಾರಿಕೆಯಿಂದಾಗಿ ಸಾಯುತ್ತಿದ್ದಾನೆ. ನೀನು ಅವನಿಗೆ ನೆರವಾಗಲಾರೆಯಾ?"

ಅವರ ಪ್ರಾರ್ಥನೆ ಮುಗಿಯುತ್ತಿದ್ದಂತೆಯೇ ಬಾವಿಯಲ್ಲಿ ನೀರು ಮೇಲೇರ ತೊಡಗಿತು. ನಾಮದೇವ ಮತ್ತು ಜೊತೆಯಲ್ಲಿದ್ದ ಸಂತರು ಉಕ್ಕೇರಿದ ನೀರನ್ನು ಕುಡಿದು ದಣಿವಾರಿಸಿಕೊಂಡರು. ನಾಮದೇವರನ್ನು ಅಲಂಗಿಸಿಕೊಂಡು ಜ್ಞಾನದೇವರು ಹೇಳಿದರು "ಗೆಳೆಯಾ, ಪಾಂಡುರಂಗನಿಗೆ ಅತ್ಯಂತ ಪ್ರಿಯನಾದ ಭಕ್ತನೆಂದರೆ ನೀನೇ".

ಉತ್ತರಭಾರತದ ಯಾತ್ರೆಯನ್ನು ಮುಗಿಸಿದ ಮೇಲೆ ಈ ತಂಡ ದಕ್ಷಿಣದ ತೀರ್ಥಕ್ಷೇತ್ರಗಳೆಡೆಗೆ ಸಾಗಿತು. ಅಲ್ಲಿ ಶಿವರಾತ್ರಿಯಂದು ತಂಡದವರೆಲ್ಲರೂ ಒಂದು ಈಶ್ವರನ ದೇವಸ್ಥಾನದಲ್ಲಿ ಉಳಿದುಕೊಂಡರು. ನಾಮದೇವರು ಭಕ್ತರ ಎದುರಿನಲ್ಲಿ ವಿಟ್ಠಲನಾಮವನ್ನು ಭಜಿಸತೊಡಗಿದರು. ಭಕ್ತಿಭಾವದಿಂದ ತುಂಬಿದ ವಿಟ್ಠಲನ ಭಜನೆ ಭಕ್ತರ ಮನಸ್ಸಿಗೆ ಇಷ್ಟವಾಗಿ ಅವರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಅಲ್ಲಿ ನೆರೆದಿದ್ದರೂ ದೇವಸ್ಥಾನದ ಪೂಜಾರಿಗಳಿಗೆ ಇದು ಇಷ್ಟವಾಗಲಿಲ್ಲ. ಕುಪಿತರಾದ ಪೂಜಾರಿಗಳು ದೇವಸ್ಥಾನದಿಂದ ಹೊರಗೆ ಹೋಗಿ ಹಾಡೆಂದು ಹೇಳಿದರು. ಆಗ ನಾಮದೇವರು ದೇವಸ್ಥಾನದಿಂದ ಹೊರಗೆ ಬಂದು ಅಲ್ಲಿ ದೇವರನ್ನು ಭಜಿಸತೊಡಗಿದರು. ದೇವಸ್ಥಾನದಲ್ಲಿದ್ದ ಶಿವನಿಗೆ ಪೂಜಾರಿಗಳ ಈ ವರ್ತನೆಯಿಂದ ತಡೆಯಲಾರದಷ್ಟು ಕೋಪ ಉಂಟಾಗಿ ಅವನು ಇಡೀ ದೇವಸ್ಥಾನವನ್ನೇ ನಾಮದೇವರು ಭಜಿಸುತ್ತಿದ್ದ ಜಾಗಕ್ಕೆ ಕರೆತಂದನೆಂಬ ವದಂತಿ ಇದೆ. ಭಗವಂತನ ಕೋಪದ ಅರಿವಾಗಿ ಪೂಜಾರಿಗಳು ನಾಮದೇವರ ಕಾಲಿಗೆ ಬಿದ್ದು ಕ್ಷಮೆ ಬೇಡಿದರು ಮತ್ತು ತಾವೂ ನಾಮದೇವರೊಡನೆ ಬೆರೆತು ಭಜಿಸ ತೊಡಗಿದರು.

ಯೋಗಿ ಜ್ಞಾನೇಶ್ವರರು ಕೇವಲ ತಮ್ಮ ಇಪ್ಪತ್ತೊಂದನೆಯ ವಯಸ್ಸಿನಲ್ಲೇ ಸಮಾಧಿಸ್ಥರಾದಾಗ ನಾಮದೇವರ ದುಃಖ ಹೇಳತೀರದು. ಅವರು ವಿಟ್ಠಲನೆದುರು ಅಳುತ್ತಾ ಹೇಳಿದರು–"ನನ್ನ ಸ್ಥಿತಿ ಬತ್ತಿದ ಕೆರೆಯಂತಾಗಿದೆ. ನನ್ನ ಜೀವನದಲ್ಲಿ ದಿವ್ಯಜ್ಞಾನದ ಬೆಳಕನ್ನು ಬೆಳಗಿಸಿದ, ಸುಖದುಃಖಗಳಲ್ಲಿ ಜೊತೆಯಾಗಿದ್ದ ಜ್ಞಾನೇಶ್ವರರಿಲ್ಲದೆ ನಾನು ಬದುಕಿರಲಾರೆ."

ಇವರ ದುಃಖವನ್ನು ನೋಡಲಾರದೆ "ನಾಮದೇವ, ಅಳಬೇಡ, ನಾನೇ ಜ್ಞಾನೇಶ್ವರ. ನಾನೆಲ್ಲಿಗೆ ಹೋಗಿಲ್ಲ. ನಿನ್ನ ಹತ್ತಿರದಲ್ಲಿಯೇ ಇದ್ದೇನೆ" ಎಂದು ವಿಟ್ಠಲ ಹೇಳಿದ.

ಆದರೆ ನಾಮದೇವರಿಗೆ ಈ ಉತ್ತರದಿಂದ ತೃಪ್ತಿ ಸಿಗಲಿಲ್ಲ. ಹಾಗೂ ಅವರು ಅಳುತ್ತಲೇ ಇದ್ದರು. ಆಗ ವಿಟ್ಠಲ ಸ್ವತಃ ತಾನೇ ಜ್ಞಾನೇಶ್ವರರ ರೂಪವನ್ನು

ಧರಿಸಿ ನಾಮದೇವರ ಮುಂದೆ ಕಾಣಿಸಿಕೊಂಡನೆಂಬ ಜನಶ್ರುತಿಯಿದೆ.

* * *

ನಾಮದೇವರು ಜ್ಞಾನೇಶ್ವರರ ಹಾಗೆ ಪ್ರಪಂಚವನ್ನು ತೊರೆಯದೆ ವಿಟ್ಠಲನ ಧ್ಯಾನದಲ್ಲಿ ಮಗ್ನರಾಗಿದ್ದು ತಮ್ಮ ಸಂಸಾರವನ್ನು ನಡೆಸತೊಡಗಿದರು. ಅವರಿಗೆ ಪತ್ನಿಯಲ್ಲದೆ ಒಬ್ಬ ಮಗ ಮತ್ತು ಒಬ್ಬ ಮಗಳು ಇದ್ದರು. ಆದರೆ ಐಹಿಕ ವಸ್ತುಗಳಲ್ಲಿ ಅವರಿಗೆ ಯಾವ ಆಕಾಂಕ್ಷೆಯೂ ಇರಲಿಲ್ಲ. ಅವರು ಹೇಳುತ್ತಿದ್ದರು "ನನಗೆ ಚಿನ್ನ ಮತ್ತು ಕಲ್ಲು ಎರಡೂ ಒಂದೇ ಸಮಾನ."

ನಾಮದೇವರ ಮನೆಯ ಹತ್ತಿರದಲ್ಲೇ ಭಗವಾನ್ ಎಂಬ ಬ್ರಾಹ್ಮಣನೊಬ್ಬ ವಾಸವಾಗಿದ್ದ. ಅವನು ತಪಸ್ಸುಮಾಡಿ ರುಕ್ಮಿಣಿದೇವಿಯ ವರದಿಂದ ಸ್ಪರ್ಶ ಮಣಿಯನ್ನು ಪಡೆದಿದ್ದ. ಈ ಮಣಿಯನ್ನು ಕಬ್ಬಿಣಕ್ಕೆ ತಗುಲಿಸಿದರೆ ಅದು ಚಿನ್ನವಾಗುತ್ತಿತ್ತು. ಆ ಬ್ರಾಹ್ಮಣ ಯಾವಾಗಲೂ ಅದನ್ನು ಬಚ್ಚಿಟ್ಟಿರಬೇಕೆಂದು ತನ್ನ ಹೆಂಡತಿ ಕಮಲಜೆಗೆ ಹೇಳುತ್ತಿದ್ದ. ಆದರೆ ಕಮಲಜಾ ಒಂದು ದಿನ ಈ ಮಣಿಯನ್ನು ನಾಮದೇವರ ಹೆಂಡತಿ ರಜಾಯಿಗೆ ತೋರಿಸಿದಳು. ಅಷ್ಟೇ ಅಲ್ಲ, ತಮ್ಮ ಸುಖದ ಜೀವನದ ರಹಸ್ಯ ಅಡಗಿರುವುದು ಈ ಮಣಿಯಲ್ಲೇ ಎಂದು ಕೂಡ ಹೇಳಿದಳು. ತನಗೆ ಯಾವಾಗಲಾದರೂ ವಸ್ತುವಿನ ಅಗತ್ಯ ಬಿದ್ದರೆ ಕಬ್ಬಿಣವನ್ನು ಚಿನ್ನವಾಗಿ ಮಾಡುತ್ತಿದ್ದೇನೆಂದು ಸಹ ಅವಳು ತಿಳಿಸಿದಳು.

ರಜಾಯಿ ಇದೇ ಕಲ್ಲಿನ ಸಹಾಯದಿಂದ ಒಂದು ವಸ್ತುವನ್ನು ಚಿನ್ನವನ್ನಾಗಿ ಮಾಡಿಸಿ ಅದನ್ನು ಮಾರಿ ಅದರಿಂದ ಅನೇಕ ಬೆಲೆಬಾಳುವ ವಸ್ತುಗಳನ್ನು ಕೊಂಡಳು. ಮನೆಯಲ್ಲಿ ರುಚಿಕರವಾದ ಅಡಿಗೆಯನ್ನು ತಯಾರಿಸಿದಳು.

ಈ ಅಡಿಗೆಯನ್ನು ನೋಡಿದ ನಾಮದೇವರು ಅವಳನ್ನು ಕೇಳಿದರು—"ಇಷ್ಟು ದುಬಾರಿ ಅಡಿಗೆ ಮಾಡುವುದಕ್ಕೆ ನಿನ್ನ ಬಳಿ ದುಡ್ಡು ಎಲ್ಲಿಂದ ಬಂದಿತು? ನೀನು ನಿಜವಾದ ವಿಷಯವನ್ನು ವಿವರವಾಗಿ ಹೇಳುವವರೆಗೆ ನಾನು ಊಟ ಮಾಡುವುದಿಲ್ಲ."

ರಜಾಯಿ ಸ್ಪರ್ಶಮಣಿಯ ವಿಷಯವನ್ನು ತನ್ನ ಗಂಡನಿಗೆ ತಿಳಿಸಿದಳು ಮತ್ತು ಆತ ಬಲವಂತ ಮಾಡಿದಾಗ ಅದನ್ನು ತೋರಿಸಿಬಿಟ್ಟಳು. ನಾಮದೇವರು ಸ್ಪರ್ಶ ಮಣಿಯನ್ನು ಕೈಯಲ್ಲಿ ಹಿಡಿದುಕೊಂಡು ಚೆನ್ನಾಗಿ ಪರೀಕ್ಷಿಸಿ ನದಿಯಲ್ಲಿ ಎಸೆದು ಬಿಟ್ಟರು.

ರಜಾಯಿ ಇದನ್ನು ನೋಡಿ ಅಳಲು ಶುರುಮಾಡಿದಳು. ಬ್ರಾಹ್ಮಣ ಮತ್ತು

ಅವನ ಮಡದಿಗೆ ಸ್ಪರ್ಶಮಣಿಯನ್ನು ನದಿಯಲ್ಲಿ ಎಸೆದ ವಿಷಯ ತಿಳಿದಾಗ ಅವರು ಅದನ್ನು ವಾಪಸ್ಸು ಕೊಡಬೇಕೆಂದು ನಾಮದೇವರನ್ನು ಕೇಳತೊಡಗಿದರು. ಭಗವತನು ನಾಮದೇವನನ್ನು 'ಪಾಖಂಡ' ಮತ್ತು 'ವಿಶ್ವಾಸಘಾತುಕ' ಎಂದು ಹೇಳತೊಡಗಿದನು.

ನಾಮದೇವರು ಬ್ರಾಹ್ಮಣನನ್ನು ಕುರಿತು ಹೇಳಿದರು–"ನಿನಗೆ ಸ್ಪರ್ಶಮಣಿಯು ನಿಜವಾಗಿಯೂ ಅಷ್ಟು ಮಹತ್ವಪೂರ್ಣ ವಸ್ತುವಾದರೆ ನಡಿ, ನದಿಯಿಂದ ಅದನ್ನು ತೆಗೆದು ಕೊಡುವೆ."

ಹೀಗೆ ಹೇಳಿ ನಾಮದೇವರು ನದಿಯಲ್ಲಿ ಪ್ರವೇಶಿಸಿ ಕೆಲವು ಕಲ್ಲುಗಳನ್ನು ತಮ್ಮೊಡನೆ ತೆಗೆದುಕೊಂಡು ಹಿಂತಿರುಗಿದರು. ಎಲ್ಲವನ್ನೂ ಬ್ರಾಹ್ಮಣನ ಎದುರಿನಲ್ಲಿ ಸುರಿದು ಹೇಳಿದರು–'ಇವುಗಳಲ್ಲಿ ನಿನ್ನ ಸ್ಪರ್ಶಮಣಿಯನ್ನು ಹುಡುಕಿಕೊ.'

ಬ್ರಾಹ್ಮಣನ ಪಾಲಿಗೆ ಪ್ರತಿಯೊಂದು ಕಲ್ಲೂ ಸ್ಪರ್ಶಮಣಿಯಾಗಿಯೇ ಕಂಡಿತು. ವಾಸ್ತವವಾಗಿ ನಾಮದೇವರು ತಂದಿದ್ದ ಎಲ್ಲಾ ಕಲ್ಲುಗಳಲ್ಲೂ ಸ್ಪರ್ಶಮಣಿಯ ಗುಣವಿದ್ದಿತು. ಎಲ್ಲವೂ ಕಬ್ಬಿಣವನ್ನು ಚಿನ್ನವನ್ನಾಗಿ ಬದಲಿಸುತ್ತಿದ್ದವು.

ಈ ಚಮತ್ಕಾರವನ್ನು ನೋಡಿ ಬ್ರಾಹ್ಮಣನ ಕಣ್ಣು ತೆರೆಯಿತು. ಆಗ ಅವನಿಗೆ ಸತ್ಯಾಸತ್ಯಗಳ ವ್ಯತ್ಯಾಸ ತಿಳಿಯಿತು. ಅವನು ನಾಮದೇವರ ಪಾದಗಳಿಗೆ ನಮಸ್ಕರಿಸಿ ಹೇಳಿದ–"ಭಕ್ತಶ್ರೇಷ್ಠರೇ, ನಾನು ಇಂದಿನಿಂದ ತಮ್ಮ ಮತ್ತು ವಿಟ್ಠಲನ ಭಕ್ತನಾಗಿದ್ದೇನೆ–ನನ್ನನ್ನು ಆಶೀರ್ವದಿಸಿ ಅನುಗ್ರಹಿಸಿ."

ಭಗವತ ಕಾಲಾನುಕ್ರಮದಲ್ಲಿ ಒಬ್ಬ ಸಂತನೆಂದು ಪ್ರಸಿದ್ಧನಾದ ಮತ್ತು ಅವನು ರಚಿಸಿದ 'ಅಭಂಗ'ಗಳನ್ನು ಜನ ಇಂದಿಗೂ ಮಹಾರಾಷ್ಟ್ರದಲ್ಲಿ ಬಹಳ ಪ್ರೀತಿ ಮತ್ತು ಗೌರವದೊಂದಿಗೆ ಹಾಡುತ್ತಾರೆ.

* * *

ನಾಮದೇವರು ಭಕ್ತಿಮಾರ್ಗದ ಪ್ರತಿಪಾದಕರಾಗಿದ್ದರು. ಜ್ಞಾನಮಾರ್ಗದಲ್ಲಿ ಹೋಗುವುದು ಅವರಿಗೆ ಇಷ್ಟವಿರಲಿಲ್ಲ. ತಮ್ಮ ಒಂದು ಪದದಲ್ಲಿ ಅವರು ಹೇಳುತ್ತಾರೆ–"ಹೇ ವಿಠ್ಠಲ, ನೀನು ನಿನ್ನ ಜ್ಞಾನವನ್ನು ನೀನು ನಿನ್ನ ಹತ್ತಿರವೇ ಇಟ್ಟುಕೋ. ನನಗೆ ಕೇವಲ ನಿನ್ನ ಪ್ರೀತಿ ಬೇಕು."

ಹೀಗೆ ಭಕ್ತಿಮಾರ್ಗದಲ್ಲಿ ನಡೆಯುತ್ತಿರುವಂತೆಯೇ ಅವರಿಗೆ ಪರಮಜ್ಞಾನ ಉಂಟಾಗುತ್ತು. ಅವರು ತಾವು ಭಗವಂತನಿಂದ ಬೇರೆ ಅಲ್ಲ ಎಂಬ ಅತ್ಯಂತ ಶ್ರೇಷ್ಠ ಭಾವನೆಯನ್ನು ಹೊಂದಿದ್ದರು. ಮತ್ತೊಂದು ಪದದಲ್ಲಿ ಅವರು

ಹೇಳುತ್ತಾರೆ–"ಭಗವಂತ ಪ್ರೇಮವೆಂಬ ಬಂಧನದಲ್ಲಿ ಬಂಧಿತನಾಗಿದ್ದಾನೆ. ನಾನೇ ಭಗವಂತ, ಭಗವಂತನೇ ನಾನು. ಭಗವಂತ ಭಕ್ತರ ಹೃದಯದಲ್ಲಿ ವಾಸಿಸುತ್ತಾನೆ."

ಜ್ಞಾನದೇವರ ಮರಣಾನಂತರ ನಾಮದೇವರು ಅನೇಕಬಾರಿ ಉತ್ತರ ಭಾರತದ ಯಾತ್ರೆಯನ್ನು ಕೈಗೊಂಡಿದ್ದರು. ಅವರ ಅನೇಕ ಪದಗಳು ಹಿಂದಿಯಲ್ಲಿಯೂ ಇವೆ. 'ಗುರು ಗ್ರಂಥ ಸಾಹೇಬ' ಪುಸ್ತಕದಲ್ಲಿ ಅವರ ಎಂಬತ್ತು ಪದಗಳನ್ನು ಸಂಗ್ರಹಿಸಿ ಇಡಲಾಗಿದೆ. ಪಂಜಾಬಿನ ಹೋಶಿಯಾರ್‌ಪುರ್ ಎಂಬ ಸ್ಥಳದಲ್ಲಿ ನಾಮದೇವರಿಗಾಗಿ ಕಟ್ಟಿಸಿರುವ ಒಂದು ದೇವಸ್ಥಾನದಲ್ಲಿ ಇಂದಿಗೂ ಭಕ್ತರು ಬಹಳ ಶ್ರದ್ಧೆ ಮತ್ತು ಭಕ್ತಿಯಿಂದ ಹಾಡುತ್ತಾರೆ.

ಮರಾಠಿಯಲ್ಲಿ ನಾಮದೇವರು ಬರೆದಿರುವ 'ಅಭಂಗ'ಗಳ ಸಂಖ್ಯೆ ಸಾವಿರಾರು. ಇಂದಿಗೂ ಅವುಗಳನ್ನು ಹಾಡಿ ಮಹಾರಾಷ್ಟ್ರದ ಜನ ವಿಟ್ಠಲನ ಧ್ಯಾನದಲ್ಲಿ ಮುಳುಗಿಹೋಗುತ್ತಾರೆ. ಅವರ 'ಅಭಂಗ'ಗಳು ಸರಳಭಾಷೆಯಲ್ಲಿದ್ದರೂ ನಿಜವಾದ ಭಕ್ತಿಯಿಂದ ಕೂಡಿದೆ.

ನಾಮದೇವರು ತಮ್ಮ ಎಂಬತ್ತನೆಯ ವಯಸ್ಸಿನಲ್ಲಿ ಸಮಾಧಿಸ್ಥರಾಗಲು ನಿಶ್ಚಯಿಸಿದರು. 'ಭಕ್ತರ ಪವಿತ್ರ ಪಾದಧೂಳಿನಿಂದ ನನ್ನ ಆತ್ಮನಿಗೆ ಆಶೀರ್ವಾದ ಲಭಿಸಲಿ' ಎಂಬ ಅವರ ಬಯಕೆಯಂತೆಯೇ ಅವರನ್ನು ಪಾಂಡುರಂಗನ ದೇವಸ್ಥಾನದ ಮೆಟ್ಟಿಲಿನ ಕೆಳಗೆ ಹೂಳಲಾಯಿತು.

ನಾಮದೇವರ ಮಕ್ಕಳು, ತಂಗಿ ಮತ್ತು ತಂದೆ-ಎಲ್ಲರೂ ವಿಟ್ಠಲನನ್ನು ಸ್ತುತಿಸಿ ಬರೆದಿರುವ ಅನೇಕ 'ಅಭಂಗ'ಗಳು ಇಂದಿಗೂ ಜನಪ್ರಿಯವಾಗಿವೆ.

ಶ್ರೀಮತಿ ಉಮಾಅರೋರಾ



ಬೇರೆ ಭಾಷೆಗಳನ್ನು ತಿಳಿಯದವನು ತನ್ನ ಭಾಷೆಯ ಬಗೆಗೂ ಅಜ್ಞಾನಿಯಾಗಿರುತ್ತಾನೆ.

—ಗಯಟೆ

ರಾಬರ್ಟ್‌ಕಾಕ್ (೧೮೪೩ - ೧೯೧೦)

ರಾಬರ್ಟ್‌ಕಾಕ್ ೧೮೪೩ ನೇ ಇಸವಿ ಡಿಸೆಂಬರ್ ೧೧ ನೇ ತಾರೀಖು ಜರ್ಮನಿಯ ಹಾನೋವರ್ ಸ್ಟೇಟ್‌ನಲ್ಲಿ ಹಾರ್ಜ್ ಬೆಟ್ಟದ ತಪ್ಪಲಿನಲ್ಲಿ ಇದ್ದ ಕ್ಲಾಸ್‌ಥಾಲ್ ಎಂಬ ಹಳ್ಳಿಯಲ್ಲಿ ಹುಟ್ಟಿದರು. ಇವರ ತಂದೆಯವರು ಸಾಮಾನ್ಯ ವ್ಯಕ್ತಿಯಾಗಿ ಒಂದು ಸಣ್ಣ ಮನೆಯಲ್ಲಿ ಜೀವಿಸುತ್ತ ಸೀಸದ ಗಣಿಯಲ್ಲಿ ಇಂಜಿನಿಯರ್ ಆಗಿದ್ದರು. ರಾಬರ್ಟ್‌ಕಾಕರು ಹನ್ನೊಂದು ಮಕ್ಕಳ ಪೈಕಿ ಮೂರನೆಯವರು. ತುಂಬು ಕುಟುಂಬದಲ್ಲಿ ಜನಿಸಿದರೂ ಬಹಳ ಸರಳ ಜೀವಿ. ಇವರ ಅಣ್ಣತಮ್ಮಂದಿರು ಅಮೇರಿಕಾಕ್ಕೆ ಹೋದರು. ತಾವು ಬೆಳೆದಂತೆಲ್ಲಾ ರಾಷ್ಟ್ರಪ್ರೇಮಿಯಾಗಿ ಸರಳ ಜೀವನವನ್ನು ಸಾಗಿಸುವುದರಲ್ಲಿ ಬಹಳ ಆಸಕ್ತಿ. ಅವರಿಗೆ ಸಸ್ಯ, ಕ್ರಿಮಿಕೀಟಗಳ ಮತ್ತು ಖನಿಜಸಂಪತ್ತುಗಳ ಬಗ್ಗೆ ತುಂಬಾ ಆಸಕ್ತಿಯಿತ್ತು. ಹಾಗೂ ಚಿಕ್ಕವಯಸ್ಸಿನಲ್ಲೆ ಸತ್ತ ಪ್ರಾಣಿಗಳನ್ನು ಶಸ್ತ್ರಗಳಿಂದ ಬಿಡಿಸುವುದರಲ್ಲಿ ಅವರಿಗೆ ತುಂಬಾ ಅಭಿರುಚಿಯಿತ್ತು.

ಅವರ ಕುಟುಂಬದಲ್ಲಿ ಹಣದ ಕೊರತೆಯಿದ್ದರೂ ಅವರು ೧೮೬೨ ರಲ್ಲಿ ಗೋಟಿಂಜೆನ್ ವಿಶ್ವವಿದ್ಯಾನಿಲಯದಲ್ಲಿ ಪ್ರಕೃತಿ ವಿಜ್ಞಾನದಲ್ಲಿ ಹೆಚ್ಚಿನ ವ್ಯಾಸಂಗ ಮಾಡಲು ತಮ್ಮ ಹೆಸರನ್ನು ನೋಂದಾಯಿಸಿಕೊಂಡರು. ಆಗ ಇವರಿಗೆ ಸ್ಕಾಲರ್‌ಷಿಪ್ ದೊರಕಿತು ಮತ್ತು ಇವರ ತಂದೆಯವರು? ಮಗನಿಗೆ ಸಹಾಯ ಮಾಡಿದರು. ಇದಾದನಂತರ ವೈದ್ಯಕೀಯದಲ್ಲಿ ಅವರಿಗೆ ತುಂಬಾ ಆಸಕ್ತಿ ಹುಟ್ಟಿತು. ತಮ್ಮ ೨೩ನೇ ವಯಸ್ಸಿನಲ್ಲಿ ಎಂ.ಡಿ. ಪದವಿಯನ್ನು ಪಡೆದರು. ತಮಗೆ ಸಹಾಯಕಳಾಗಿದ್ದ ಅತಿ ಸುಂದರಳಾದ ಎಮಿಲ್ ಫ್ರಾಡ್ಸ್ ಎಂಬಾಕೆಯನ್ನು ೧೮೬೭ ರಲ್ಲಿ ಹ್ಯಾಂಬರ್ಗ್‌ನಲ್ಲಿ ಮದುವೆಯಾದರು. ಭೊಸನ್ ಡಿಸ್ಟ್ರಿಕ್ಟ್‌ನಲ್ಲಿರುವ ನಾಲ್ಕು ಸಾವಿರ ಜನಸಂಖ್ಯೆಯುಳ್ಳ ರಾಕ್‌ವಿಡ್ಸ್ ಎಂಬ ಪಟ್ಟಣದಲ್ಲಿ ವೈದ್ಯಕೀಯ ವೃತ್ತಿಯನ್ನು ಆರಂಭಿಸಿದರು. ೧೮೬೮ ರಲ್ಲಿ ಗರ್ಟ್ರೂಡ್ ಎಂಬ ಒಂದು ಹೆಣ್ಣು ಮಗು ಹುಟ್ಟಿತು.

೧೮೭೦-೭೧ ರಲ್ಲಿ ನಡೆದ ಫ್ರಾಂಕೋ ಪರ್ಷಿಯನ್ ಯುದ್ಧದಲ್ಲಿ ಸೈನಿಕ ವೈದ್ಯರಾಗಿ ಸೇವೆ ಸಲ್ಲಿಸಿದರು. ಸಾರ್ವಜನಿಕ ಆರೋಗ್ಯ ವೈದ್ಯಾಧಿಕಾರಿ ಹುದ್ದೆಯಲ್ಲಿ ಉತ್ತೀರ್ಣರಾಗಿ ತಮ್ಮ ೨೮ ನೇ ವಯಸ್ಸಿನಲ್ಲಿ ವೋಲ್‌ಸ್ಟೈನ್ ಎಂಬ ಊರಿನಲ್ಲಿ ವೈದ್ಯಾಧಿಕಾರಿಯಾದರು. ಆಗ ಅವರಿಗೆ ವರ್ಷಕ್ಕೆ ೯೦೦ ರೂಬಲ್ಸ್ (ಸುಮಾರು ೧೯ ಸಾವಿರ ರೂ.) ಹಣ ಬರುತ್ತಿತ್ತು. ಆ ಸಮಯದಲ್ಲಿ ಇವರು

ಎರಡು ಆಸ್ಪತ್ರೆಯ ಉಸ್ತುವಾರಿಯನ್ನು ಮಾಡುತ್ತಿದ್ದರು ಮತ್ತು ನ್ಯಾಯಾಲಯದಲ್ಲಿ ತಮ್ಮ ವೃತ್ತಿಯಲ್ಲಿ ಪ್ರವೀಣರಾಗಿಯೂ ಸಾರ್ವಜನಿಕ ಆರೋಗ್ಯ ಸೇವೆಯಲ್ಲಿಯೂ ಆಸಕ್ತಿ ವಹಿಸಿ ತಿಳುವಳಿಕೆಗಳನ್ನು ನೀಡುತ್ತಿದ್ದರು ಮತ್ತು ಪ್ರಾಣಿಗಳಿಗೇನಾದರೂ ಖಾಯಿಲೆ ಬಂದರೆ ಅವುಗಳನ್ನು ಪರೀಕ್ಷಿಸಿ ಔಷಧೋಪಚಾರ ಮಾಡುತ್ತಿದ್ದರು. ಇದೇ ರೀತಿ ತಮ್ಮ ಇಡೀ ಜೀವನವನ್ನು ಕಳೆಯಬಹುದಿತ್ತು. ಆದರೆ ಅವರ ೨೮ನೇ ಹುಟ್ಟುಹಬ್ಬಕ್ಕೆ ಅವರ ಪ್ರೀತಿಪಾತ್ರಳಾದ ಹೆಂಡತಿ ಎಮಿಲ್ ಫ್ರಾಡ್ಜ್ ಒಂದು ಅತಿ ಸೂಕ್ಷ್ಮವಾದ ಸೂಕ್ಷ್ಮದರ್ಶಕವನ್ನು ಕೊಂಡು ಉಡುಗೊರೆಯಾಗಿ ಕೊಟ್ಟರು. ಆಕೆ ಇನ್ನು ಬೇಕಾಗಿರುವ ವಸ್ತುವನ್ನು ತನ್ನ ಗಂಡನ ಹುಟ್ಟುಹಬ್ಬಕ್ಕೆ ಕೊಡಬಹುದಿತ್ತು. ಆದರೆ ಆಕೆಯ ಮನಸ್ಸಿಗೆ ಬಂದದ್ದು ಈ ಅತಿ ಸೂಕ್ಷ್ಮವಾದ ಸೂಕ್ಷ್ಮದರ್ಶಕವೊಂದೇ! ಅಷ್ಟು ಹೊತ್ತಿಗೆ ಸುಮಾರು ೧೮೪೦ಕ್ಕಿಂತ ಮುಂಚಿತವಾಗಿ ರಾಬರ್ಟ್ ಕಾಕ್ ಅಜ್ಯುನ್ಯಿಸ ಉಪಾಧ್ಯಾಯರಲ್ಲಿ ಒಬ್ಬರಾದ ಜಾಕೆಬ್ ಹೆನ್ಲಿ (ಅನಾಟೊಮಿಸ್ಟ್ ಮತ್ತು ಪೆಥಾಲಜಿಸ್ಟ್)ರವರ ಸಿದ್ಧಾಂತದ ಪ್ರಕಾರ ಸಾಂಕ್ರಾಮಿಕ ರೋಗಗಳು ಸೂಕ್ಷ್ಮ ಕ್ರಿಮಿಗಳಿಂದ ಹರಡಿ ಖಾಯಿಲೆಯನ್ನುಂಟು ಮಾಡುತ್ತವೆ ಎಂದು ತಿಳಿದಿದ್ದರು. ಈ ಒಂದು ಸಿದ್ಧಾಂತವು ತರ್ಕಬದ್ಧವಾಗಿದ್ದುದರಿಂದ ಹಾಗೆಯೇ ಉಳಿಯಬೇಕಾಯಿತು.

ಆ ಸಿದ್ಧಾಂತವನ್ನು ಸರಿಯಾಗಿ ಯಾರೂ ಕಂಡು ಹಿಡಿದಿರಲಿಲ್ಲ. ಗ್ರೀಸ್ ಮತ್ತು ರೋಮ್‌ನ ಖ್ಯಾತ ವೈದ್ಯರುಗಳು ರೋಗವು ಕೆಲವು ವಿಷಪೂರಿತವಾದ ಗಾಳಿಯಿಂದಲೂ ಉಂಟಾಗುವುದೆಂದು ತಿಳಿದಿದ್ದರು.

೧೮೭೬ ರಲ್ಲಿ ರಾಬರ್ಟ್ ಕಾಕ್‌ರು ದನಕರುಗಳಲ್ಲಿ, ಕುರಿಗಳಲ್ಲಿ ಮತ್ತು ಕುದುರೆಗಳಲ್ಲಿ ಅಂಥ್ರಾಕ್ಸ್ ಎಂಬ ರೋಗವನ್ನುಂಟುಮಾಡುವ ಕ್ರಿಮಿಗಳನ್ನು ಸೂಕ್ಷ್ಮದರ್ಶಕದಲ್ಲಿ ತೋರಿಸಿಕೊಟ್ಟರು. ಆಗಾಗ್ಗೆ ಈ ರೋಗವು ಮನುಷ್ಯರಲ್ಲಿಯೂ ಉಂಟಾಗಿ ಸಾವಿಗೀಡುಮಾಡುತ್ತಿತ್ತು. ೧೮೭೬ನೇ ಏಪ್ರಿಲ್ ೩೦ರಂದು ರಾಬರ್ಟ್ ಕಾಕ್‌ರು ಅತ್ಯಂತ ಮೇಧಾವಿ ತಜ್ಞರಾದ ಪ್ರೊಫೆಸರ್ ಫರ್ಡಿನಾಂಡ್ ಜೂಲಿಯಸ್ ಕಾನ್‌ರವರ ಮುಂದೆ ತಮ್ಮ ಸಂಶೋಧನೆಯನ್ನು ಮಂಡಿಸಿದರು. ಕಾನ್‌ರು ಇವರು ಬರೆದ ಪತ್ರಿಕೆಯನ್ನು ಮೆಚ್ಚಿ ರೋಗವು ಕ್ರಿಮಿಗಳಿಂದ ಹರಡುತ್ತದೆ ಎಂದು ೧೮೭೬ ಮೇ ೩ ರಂದು ತಿಳಿಸಿದರು. ರಾಬರ್ಟ್ ಕಾಕ್‌ರನ್ನು ತಮ್ಮ ವೈದ್ಯಕೀಯ ವೃತ್ತಿಯಲ್ಲಿ ಮುಂದುವರಿಯುವುದಕ್ಕೂ ಮತ್ತು ರೋಗಾಣುಗಳ ಬಗ್ಗೆ ಸಂಶೋಧನೆಯನ್ನು ನಡೆಸುವುದಕ್ಕೂ ಬ್ರಿಸ್ಲೋ

ಪಟ್ಟಣಕ್ಕೆ ಆಮಂತ್ರಿಸಲಾಯಿತು. ೧೮೮೭ ರಲ್ಲಿ ಕ್ರಿಮಿಗಳನ್ನು ಜಾರುಗಾಜಿನ ಮೇಲೆ ಹಾಗೂ ಹ್ಯಾಂಗಿಂಗ್ ಡ್ರಾಫ್ಟ್ ಟೆಕ್ನಿಕ್‌ನಲ್ಲಿ ಕಂಡುಹಿಡಿಯುವುದು ಮತ್ತು ಅವುಗಳನ್ನು ಅನಿಲಿಯನ್ ಡೈಸ್‌ಗಳಿಂದ ಮುಚ್ಚಿದರೆ ಕ್ರಿಮಿಗಳು ಅನಿಲಿಯನ್ ಡೈಗಳನ್ನು ಹೀರಿಕೊಂಡು ನೀಲಿ, ಕೆಂಪು ಮತ್ತು ನೇರಳೆ ಬಣ್ಣಗಳಿಂದ ಕೂಡಿದವುಗಳಾಗಿಯೂ ಸೂಕ್ಷ್ಮದರ್ಶಕದಲ್ಲಿ ಚೆನ್ನಾಗಿ ಎದ್ದು ಕಾಣುತ್ತವೆ ಎಂದು ತೋರಿಸಿಕೊಟ್ಟರು. ಈ ಕ್ರಿಮಿಗಳನ್ನು ತೋರಿಸುವುದಕ್ಕಾಗಿ ಒಂದು ಕ್ಯಾಮರಾವನ್ನು ಕೊಂಡುತಂದು ಕ್ರಿಮಿಗಳ ಫೋಟೋವನ್ನು ತೆಗೆಯಲು ಪ್ರಾರಂಭಿಸಿದರು. ಅನೇಕ ಸಂದರ್ಭಗಳಲ್ಲಿ ಅವರ ಹೆಂಡತಿ ಎಮಿಲ್ ಫ್ರಾಟ್ಸ್ ಮೋಡವಿಲ್ಲದ ಮತ್ತು ನಿರ್ಮಲಾಕಾಶವುಳ್ಳ ಸಮಯದಲ್ಲಿ ತನ್ನ ಗಂಡನಿಗೆ ಕ್ರಿಮಿಗಳ ಫೋಟೋ ತೆಗೆಯಿರಿ ಎಂದು ಗಟ್ಟಿಯಾಗಿ ಕಿರುಚಿ ಹೇಳುತ್ತಿದ್ದಳು. ಈ ವಾಕ್ಯವನ್ನು ಕೇಳುತ್ತಲೇ ಕಾಕ್‌ರು ಎಲ್ಲಾ ಕೆಲಸವನ್ನು ಬಿಟ್ಟು ಕ್ಯಾಮರಾ ಹಿಡಿದು ಫೋಟೋ ತೆಗೆಯಲು ಅನುವಾಗುತ್ತಿದ್ದರು. ಎಷ್ಟೋ ಸಾರಿ ಕಾಕ್‌ರು ತಮ್ಮ ಹೆಂಡತಿಯನ್ನು ಕ್ಲೌಡ್‌ಪುಷರ್ ಎಂದು ಕರೆಯುತ್ತಿದ್ದರು. ಈ ರೀತಿ ಗಂಡ ಹೆಂಡಿರ ಸಂಬಂಧ ಅತಿ ಪ್ರೀತಿ ಮತ್ತು ಒಡಂಬಡಿಕೆಯಿಂದ ಕೂಡಿತ್ತು.

ಸೂಕ್ಷ್ಮದರ್ಶಕದಲ್ಲಿ ತುಂಡುತುಂಡಾದ ದಪ್ಪದಪ್ಪ ಕಡ್ಡಿಗಳಂತೆ ಕಾಣುವ ಕ್ರಿಮಿಗಳನ್ನು (ಕ್ರಿಸ್ಟಲ್) ಹರಳುಗಳೆಂದು ಕರೆದು ಖಾಯಿಲೆಗಳು ಈ ಹರಳುಗಳ ಉಪ ಫಲಗಳಿರಬೇಕೆಂದು ಭಾವಿಸಿದರು. ಅವರೂ ಇವುಗಳೇ ಖಾಯಿಲೆಯನ್ನುಂಟುಮಾಡಬಾರದೆಂಬುದನ್ನು ಮನಗಂಡಿದ್ದರು. ಕಾಕ್‌ರು ಸಂಬಂಧಪಟ್ಟ ಖಾಯಿಲೆಯು ಯಾವಾಗಲೂ ಸಂಬಂಧಪಟ್ಟ ಕ್ರಿಮಿಗಳಿಂದ ಬರುತ್ತದೆಂದು ಸಿದ್ಧಾಂತ ಮಾಡಿ ಸಾರಿದರು. ಅಂಥ್ರಾಕ್ಸ್ ಖಾಯಿಲೆಯ ರಕ್ತವನ್ನು ಬಿಳಿ ಇಲಿಗಳಿಗೆ ಚುಚ್ಚಿದಾಗ ಇಲಿಗಳು ಒಂದು ದಿನದಲ್ಲಿ ಸತ್ತವು. ಸತ್ತ ಇಲಿಗಳ ರಕ್ತದಲ್ಲಿ ಮತ್ತು ಗುಲ್ಮದಲ್ಲಿ ಈ ಕಡ್ಡಿಯಂತಿರುವ ಹರಳುಗಳನ್ನು ಸೂಕ್ಷ್ಮದರ್ಶಕದಲ್ಲಿ ಕಂಡರು. ತದನಂತರ ಈ ಹರಳುಗಳನ್ನು ಕಲ್ಚರ್ ಮಾಡಲಾಗಿ ಅವು ಅತಿ ಹೆಚ್ಚಾಗಿ ಬೆಳೆದುದರಿಂದ ಇವುಗಳು ಜೀವವುಳ್ಳ ಸೂಕ್ಷ್ಮಾಣುಗಳೆಂದು ತಿಳಿದರು. ಅತಿ ಕಡಿಮೆ ಉಷ್ಣಾಂಶದಲ್ಲಿ ಈ ಹರಳುಗಳು ಉದ್ದವಾದ ದಾರದಂತಾಗಿ ತುದಿಯಲ್ಲಿ ಚಿಪ್ಪಿಗೆಯಾಕಾರದಲ್ಲಿದ್ದು ವರ್ಷಗಟ್ಟಲೆ ತಮ್ಮ ಗುಣಗಳನ್ನು ಮೊಟಕುಗೊಳಿಸಿ (ಡಾರ್‌ಮೆಂಟ್) ಕೊಂಡಿರುವುದನ್ನು ಕಂಡುಕೊಂಡರು. ಆದರೆ ಉಷ್ಣಾಂಶವುಳ್ಳ ಪ್ರಾಣಿಗಳ (ವಾರ್ಮ್‌ಬ್ಲಡೆಡ್ ಅನಿಮಲ್)

ರಕ್ತದಲ್ಲಿ ಇವುಗಳು ಸಜೀವ ಕ್ರಿಮಿಗಳಾಗಿ ಪರಿವರ್ತನೆಗೊಂಡು ಬಾಯಿಲೆಯನ್ನುಂಟುಮಾಡುವುದನ್ನು ಕಂಡುಕೊಂಡರು. ಸುಪ್ರಸಿದ್ಧ ಖ್ಯಾತ ಸಸ್ಯಶಾಸ್ತ್ರಜ್ಞ ಫರ್ಡಿನಾಂಡ್ ಕೋನ್‌ರವರಿಗೆ ಈ ದಾಖಲೆಗಳನ್ನು ತೋರಿಸಿದಾಗ ಕಾಕ್‌ರ ಸಂಶೋಧನೆಯು ಮಹಾನ ಮಹತ್ವದ್ದೆಂದು ಪರಿಗಣಿಸಿದರು. ಅವರ ಸ್ವಲ್ಪಕಾಲದ ನಂತರ ರಾಬರ್ಟ್ ಕಾಕ್‌ರ ಪ್ರಯೋಗಾಲಯ ಮತ್ತು ಅವರ ಪ್ರಯೋಗಗಳನ್ನು ಕಂಡಾಗ ಕಾಕ್‌ರು ಅತ್ಯುನ್ನತ ಸಂಶೋಧಕ ಮತ್ತು ಒಂದು ವಿಜ್ಞಾನಿಯೆಂದು ಘೋಷಿಸಿದರು.

ಸೋಮಾರಿತನವೆಂಬುದು ಕಾಕ್‌ರ ಹತ್ತಿರ ಸುಳಿಯುತ್ತಿರಲಿಲ್ಲ. ಯಾವಾಗಲೂ ಸಂಶೋಧನೆ ಪ್ರಯೋಗಗಳ ಯೋಜನೆಯಲ್ಲಿ ಮಗ್ನರಾಗಿರುತ್ತಿದ್ದರು. ಅವರು ಸೈನ್ಯದಲ್ಲಿ ವೈದ್ಯಾಧಿಕಾರಿಯಾಗಿದ್ದಾಗ ಅನೇಕ ಸೈನಿಕರು ಯುದ್ಧದಲ್ಲಿ ಉಂಟಾದ ಗಾಯದಿಂದ ನರಳಿ ಸಾಯುತ್ತಿದ್ದರು. ಮತ್ತು ಅನೇಕರಿಗೆ ಅಂದರೆ ಶೇಕಡ ೭೫ ಗಾಯಗೊಂಡ ಸೈನಿಕರಲ್ಲಿ ಕೈಕಾಲುಗಳನ್ನು ತುಂಡರಿಸಿಹಾಕುತ್ತಿದ್ದರು. ಆ ಕಾಲದಲ್ಲಿ ಇಂಗ್ಲೀಷ್ ಶಸ್ತ್ರಶಾಸ್ತ್ರಜ್ಞ ಜೋಸೆಫ್ ಲಿಸ್ಟರ್ ಕಾರ್ಬಾಲಿಕ್ ಸ್ಪ್ರಿಂಗ್‌ನ್ನು ಈ ಗಾಯಗಳ ಮೇಲೆ ಹಾಕಿ ಗುಣಪಡಿಸುತ್ತಿದ್ದರು. ಕಾರ್ಬಾಲಿಕ್ ಸ್ಪ್ರಿಂಗ್ ಗಾಯಗಳನ್ನು ಹೇಗೆ ಗುಣಪಡಿಸುತ್ತದೆ ಎಂಬುದು ತಿಳಿದಿರಲಿಲ್ಲ. ಕಾಕ್‌ರು ತಮ್ಮ ನಿರಂತರ ಪ್ರಯೋಗಗಳಿಂದ ಪ್ರಯತ್ನಪಟ್ಟು ೧೮೭೮ ರಲ್ಲಿ ಗಾಯಗಳಿಗೆ ಸಂಬಂಧಪಟ್ಟಂತೆ ಮತ್ತು ಗಾಯಗಳು ವ್ರಣವಾಗಿ ಸಾವಿಗೀಡಾಗುವುದಕ್ಕೆ ಕಾರಣವಾದ ಆರು ಬಗೆಯ ಕ್ರಿಮಿಗಳನ್ನು ಗುರುತಿಸಿದರು.

ಇಷ್ಟು ಹೊತ್ತಿಗೆ ಡೋಕ್ಟರ್ ಕಾಕ್‌ರ ವೈದ್ಯಾಧಿಕಾರಿ ಮತ್ತು ಅವರ ಕೆಲಸದ ಬಗ್ಗೆ ಇಡೀ ಜರ್ಮನಿಯಲ್ಲಿ ಬಾಯಿಂದ ಬಾಯಿಗೆ ಹರಡತೊಡಗಿತು. ೧೮೮೦ರಲ್ಲಿ ಬರ್ಲಿನ್‌ನ ಇಂಪೀರಿಯಲ್ ಆರೋಗ್ಯ ಕಛೇರಿಯ ನಿರ್ದೇಶಕರ ಹುದ್ದೆಗೆ ಕಾಕ್‌ರನ್ನು ನೇಮಿಸಿಕೊಂಡು ಅವರ ಸಂಶೋಧನೆಗೆ ನೆರವಾದರು. ಅಲ್ಲಿ ಕಾಕರಿಗೆ ಸಹ ಮಿತ್ರರು ಮತ್ತು ಆಧುನಿಕ ಉಪಕರಣಗಳು ಸಿಕ್ಕಿದವು. ಇವುಗಳ ಜೊತೆಗೆ ಇವರು ಸಹಾಯಕರನ್ನು ಹಾಗೂ ವರ್ಷಕ್ಕೆ ೬.೦೦೦ ಮಾರ್ಕ್ಸ್ ಹಣವನ್ನು ಮತ್ತು ಐದು ಕೊಠಡಿಗಳಿಂದ ಕೂಡಿದ ಎಲ್ಲಾ ಸೌಲಭ್ಯವುಳ್ಳ ಒಂದು ಮನೆಯನ್ನು ಇವರ ಕುಟುಂಬಕ್ಕೆ ಬಿಟ್ಟುಕೊಡಲಾಯಿತು. ಅಂದಿನಿಂದ ಕಾಕ್‌ರು ಈ ಕ್ರಿಮಿಗಳನ್ನು ನಾಶಪಡಿಸುವ ಬಗೆ ಹೇಗೆ ಎಂದು ವಿಚಾರಿಸ ತೊಡಗಿದರು ಮತ್ತು ಅನೇಕ ಪ್ರಯೋಗಗಳನ್ನು ಕೈಗೊಂಡರು. ಅವುಗಳಲ್ಲಿ

(ಸ್ಟೀಮ್) ಆವಿಯು ಕ್ರಿಮಿಗಳನ್ನು ನಾಶಪಡಿಸುತ್ತವೆ ಎಂದು ಕಂಡುಕೊಂಡು ತಿಳಿಸಿದರು. ಅಂದಿನಿಂದ ಇಂದಿನವರೆಗೂ ಆವಿಯು ಕ್ರಿಮಿನಾಶಕವಾಗಿ ಉಪಯೋಗಿಸುವ ಅತ್ಯುನ್ನತ ಮಾರ್ಗವಾಗಿ ಪರಿಣಮಿಸಿತು. ಇದರ ಜೊತೆಗೆ ರಾಬರ್ಟ್‌ಕಾಕ್‌ರ ದೃಷ್ಟಿಕೋನವು ಆ ಕಾಲದಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಪ್ರತಿ ೭ ರೋಗಿಗಳಲ್ಲಿ ಒಬ್ಬರನ್ನು ಸಾವಿಗೀಡು ಮಾಡುತ್ತಿದ್ದ ಕ್ಷಯರೋಗದ ಕಾರಣವೇನೆಂಬುದನ್ನು ತಿಳಿಯಬೇಕೆಂಬುದನ್ನು ನಿರ್ಧಾರ ಮಾಡಿದರು. ಅಂದಿನ ವೈದ್ಯರುಗಳು ಕ್ಷಯರೋಗವು ದೀರ್ಘ ಕಾಲದ ನ್ಯೂನ ಪೋಷಣೆಯಿಂದ (ಕ್ರಾನಿಕ್ ಮ್ಯಾಲ್ ನ್ಯೂಟ್ರಿಷನ್) ಬರುತ್ತದೆಂದು ತಿಳಿದಿದ್ದರು. ಆದರೆ ಕಾಕ್‌ರು ಈ ರೋಗವು ಒಬ್ಬರಿಂದ ಒಬ್ಬರಿಗೆ ಕ್ರಿಮಿಗಳಿಂದ ಹರಡುತ್ತದೆಂದು ಮನಗಂಡಿದ್ದರು.

ಕಾಕ್‌ರು ತಮ್ಮ ಪ್ರಯೋಗ ಶಾಲೆಯಲ್ಲಿ ತಾವೊಬ್ಬರೇ ವಾರಗಳಗಟ್ಟಲೆ ಕೆಲಸ ಮಾಡುತ್ತಿದ್ದರು. ಕೆಲವೊಮ್ಮೆ ದಿನಕ್ಕೆ ಹದಿನೆಂಟು ಗಂಟೆಗಳ ಕಾಲ ಕೆಲಸ ಮಾಡುತ್ತಿದ್ದರು. ಯಾರನ್ನೂ ಪ್ರಯೋಗ ಶಾಲೆಯೊಳಕ್ಕೆ ಸೇರಿಸುತ್ತಿರಲಿಲ್ಲ. ಏಕೆಂದರೆ ಈ ಖ್ಯಾತಿಯು ಅವರಿಗೆ ಬರಬಾರದೆಂಬುದೇ ಅವರ ಮುಖ್ಯ ಉದ್ದೇಶವಾಗಿತ್ತು. ಆರು ತಿಂಗಳುಗಳಲ್ಲಿ ೨೭೧ನೇ ಜಾರುಗಾಜಿನ ಮೇಲೆ ಕ್ರಿಯೆ ಮಾದರಿಯಲ್ಲಿ ಕ್ಷಯರೋಗದ ಕ್ರಿಮಿಗಳನ್ನು ಕಂಡುಹಿಡಿದರು. ಈ ಕ್ರಿಮಿಗಳನ್ನು ಇಲಿ ಮೊಲ ಮತ್ತು ಗಿನಿಪಿಗ್‌ಗಳು ತುಂಬಿದ ಪೆಟ್ಟಿಗೆಯಲ್ಲಿ ಇಬ್ಬನಿ ರೂಪವಾಗಿ (ಫಾಗ್) ಹಾಯಿಸಿದಾಗ ಆ ಪ್ರಾಣಿಗಳು ಕ್ಷಯರೋಗಕ್ಕೆ ತುತ್ತಾಗಿ ಸತ್ತವು. ಇದರಿಂದ ಅವರು ಈ ಕ್ರಿಮಿಗಳು ಗಾಳಿಯಲ್ಲಿದ್ದು ರೋಗವನ್ನುಂಟುಮಾಡುತ್ತವೆ ಎಂದು ಪ್ರಮಾಣೀಕರಿಸಿದರು. ೧೮೮೧ರಲ್ಲಿ ಕಾಕ್‌ರು ಲಂಡನ್‌ಗೆ ಹೋಗಿ ತಮ್ಮ ಸಾಲಿಡ್ ಮೀಡಿಯ ಮತ್ತು ಫಸ್ಟ್ ಪ್ಯೂರ್ ಕಲ್ಚರ್‌ಗಳ ಮೇಲೆ ಬೆಳೆಸಿದ ಕ್ರಿಮಿಗಳ ದಾಖಲೆಗಳನ್ನು ಫಸ್ಟ್ ಇಂಟರ್‌ನ್ಯಾಷನಲ್ ಮೆಡಿಕಲ್ ಕಾಂಗ್ರೆಸ್‌ನಲ್ಲಿ ತೋರಿಸಿ ತಿಳಿಸಿದರು. ಈ ವಿಷಯವನ್ನು ತಿಳಿದ ಲೂಯಿಪಾಶ್ಚರ್‌ರವರು ಕಾಕ್‌ರ ಮೇಧಾವಿತನವನ್ನು ತಿಳಿದು ಪ್ರಪಂಚದಲ್ಲಿ ಸಾಂಕ್ರಾಮಿಕ ರೋಗಗಳನ್ನು ಹರಡುತ್ತಿರುವ ಈ ಕ್ರಿಮಿಗಳನ್ನು ಕಂಡುಹಿಡಿದ ರಾಬರ್ಟ್‌ಕಾಕ್ ಸಂಶೋಧನಾ ಪ್ರಯೋಗಾಲಯವನ್ನು ನೋಡಬೇಕೆಂದು ಬರ್ಲಿನ್‌ಗೆ ಬಂದರು. ಅವುಗಳನ್ನು ನೋಡಿ ಮೆಚ್ಚಿ ಪ್ರಶಂಸಿಸಿದರು. ೧೮೮೨ನೇ ಮಾರ್ಚಿ ೨೪ ರಂದು ತಮ್ಮ ೩೯ನೇ ವಯಸ್ಸಿನಲ್ಲಿ ಅವರ ಅತ್ಯುನ್ನತ ಸಂಶೋಧನೆಯ ಪ್ರತಿಯನ್ನು ಬರ್ಲಿನ್‌ನಲ್ಲಿ ನಡೆದ ಫಿಸಿಯಾಲಜಿಕಲ್

ಸೊಸೈಟಿಯ ಶರೀರಶಾಲಿ ತಜ್ಞರ ಮುಂದೆ ಆ ದಿನದ ಸಾಯಂಕಾಲದ ಮಹಾ ಸಭೆಯಲ್ಲಿ ಮಂಡಿಸಿದರು. ಹಾಗೂ ಆ ಕ್ರಿಮಿಗಳು ಖಾಯಿಲೆಯುಳ್ಳ ಶರೀರದ ಭಾಗದಲ್ಲಿ ಇರುವುದನ್ನು ಮತ್ತು ಕಫದಲ್ಲಿ ಇಲ್ಲದಿರುವುದನ್ನು ತೋರಿಸಿ ತಿಳಿಸಿದರು. ಯಾವ ಶರೀರಶಾಲಿ ತಜ್ಞರೂ ಕೂಡ ಇವರ ಸಂಶೋಧನೆಯ ಬಗ್ಗೆ ತರ್ಕವನ್ನು ಮಾಡದೆ ಒಪ್ಪಿಕೊಂಡಿದ್ದು ಆ ಸಭೆಯಲ್ಲಿ ಮೊಟ್ಟಮೊದಲ ಬಾರಿಗೆ ಆಶ್ಚರ್ಯವನ್ನುಂಟುಮಾಡಿತು. ಹಾಗೂ ಈ ಕ್ರಿಮಿಗಳನ್ನು ಕಾಕ್ಸ್ ಬ್ಯಾಸಿಲಸ್ ಮತ್ತು ರೋಗವನ್ನು ಕಾಕ್ಸ್ ಡಿಸೀಸ್ ಎಂದು ಕರೆಯಲು ವೈದ್ಯಕೀಯ ರಂಗದಲ್ಲಿ ಅಂದಿನಿಂದ ಇಂದಿನವರೆಗೂ ಮತ್ತು ಮುಂದೆಯೂ ಕರೆಯುತ್ತಾ ಬಂದಿದೆ. ರಾಬರ್ಟ್ ಕಾಕ್‌ರ ಅತಿ ಮೆಚ್ಚುಗೆಯುಳ್ಳ ವಿದ್ಯಾರ್ಥಿಗಳು ಹಾಗೂ ಸಹೋದ್ಯೋಗಿಗಳೆಂದರೆ ಬಿಲಿಟು ಡಾಕ್ಟರ್ ಜಾರ್ಜ ಗ್ಯಾಫಿ (ಟೈಫಾಯಿಡ್ ಕ್ರಿಮಿಗಳನ್ನು ಬೆಳೆಸಿದ ವೈದ್ಯ) ಫ್ರೆಡರಿಕ್ ಅಗಸ್ಟ ಜಾಸಸ್ ಲೋಫ್ಲ (ಗ್ಲಾಂಡರ್ಸ್ ಬ್ಯಾಸಿಲಸ್ ಕಂಡು ಹಿಡಿದವರು) ಮತ್ತು ಜಪಾನಿನ ಕಿಟಾ ಸಾಟೋ.

ಅವರ ಇಷ್ಟಕ್ಕೆ ಕಾಕ್‌ರು ತೃಪ್ತರಾಗಲಿಲ್ಲ. ಅವರು ಯಾವಾಗಲೂ ಈ ಖಾಯಿಲೆಯನ್ನು ತಡೆಗಟ್ಟುವಲ್ಲಿ ಅನ್ವಯಿಸ ಬೇಕಾದ ಕ್ರಮಗಳ ಸಾರ್ವಜನಿಕ ಆರೋಗ್ಯದ ಬಗ್ಗೆ ಯೋಚಿಸುತ್ತಾ ಇದ್ದು, ಅನೇಕ ಸಲಹೆಗಳನ್ನು ಜರ್ಮನಿಯ ಸರ್ಕಾರಕ್ಕೆ ಅವರು ಕೊಟ್ಟಿದ್ದರಿಂದ ಕ್ಷಯರೋಗದಿಂದ ಸಾಯುತ್ತಿದ್ದವರ ಸಂಖ್ಯೆಯನ್ನು ೨೫ ವರ್ಷಗಳ ಕಾಲಾವಧಿಯಲ್ಲಿ ಶೇಕಡ ೫೦ ರಷ್ಟು ಕಡಿಮೆ ಮಾಡಲಾಯಿತು. ಅಷ್ಟರಲ್ಲಿ ೧೮೮೩ರಲ್ಲಿ ಇನ್ನೊಂದು ಖಾಯಿಲೆ ಈಜಿಪ್ಟನಲ್ಲಿ ಹರಡಲಾಯಿತು. ಈ ಭಯಾನಕ ರೋಗವು ಇಂಡಿಯಾ ದೇಶದಿಂದ ಪಾಶ್ಚಿಮಾತ್ಯ ದೇಶಗಳಿಗೆ ಬೇಗನೆ ಹರಡುತ್ತಿರುವುದನ್ನು ತಿಳಿದು— ಈ ಖಾಯಿಲೆಯ ಕಾರಣವೇನೆಂಬುದನ್ನು ಕಂಡು ಹಿಡಿಯಲು ಜರ್ಮನಿ ಸರ್ಕಾರವು ಕಾಕ್‌ರನ್ನು ಅಲೆಗ್ಸಾಂಡ್ರಿಯ ಮತ್ತು ಈಜಿಪ್ಟ ದೇಶಗಳಿಗೆ ಮೆಡಿಕಲ್ ತಂಡದ ಮುಖ್ಯಸ್ಥರನ್ನಾಗಿ ಆಯ್ಕೆ ಮಾಡಿ ಕಳುಹಿಸಿದರು. ಅಲ್ಲಿ ಅನೇಕ ಪ್ರಯೋಗಗಳನ್ನು ನಡೆಸಿದರು. ಕೋತಿ, ನಾಯಿ, ಬೆಕ್ಕು ಮತ್ತು ಇಲಿಗಳ ಮೇಲೆ ಕಾಲರಾ ರೋಗದ ಮಾದರಿ ಸಾಮಗ್ರಿಗಳನ್ನು (ಸ್ಪೆಸಿಮೆನ್ ಮೆಟೀರಿಯಲ್) ದೇಹಕ್ಕೆ ಚುಚ್ಚಿ ನಂತರ ಗಾಜಿನ ಮೇಲೆ ಡೈಗಳಿಂದ ಕಲೆ (ಸ್ಟೈನ್) ಮಾಡಿದ ನಂತರ ಕಾಮಾಕೃತಿಯಂತುಳ್ಳ ಕಾಲರಾ ಬ್ಯಾಸಿಲಿಸ್‌ಗಳನ್ನು ಕಂಡು ಹಿಡಿದರು. ನಂತರ ಇವರು ಇಂಡಿಯಾ ದೇಶಕ್ಕೆ ಬಂದು ಕಾಲರಾ

ರೋಗವು ರೋಗ ಕ್ರಿಮಿಗಳಿಂದ ಮಿಶ್ರಿತವಾದ ನೀರು, ಆಹಾರ ಮತ್ತು ಬಟ್ಟೆಗಳಿಂದ ಹರಡುತ್ತವೆ. ಆದ್ದರಿಂದ ಸಾರ್ವಜನಿಕರು ನೀರು ಕುಡಿಯುವ ಸ್ಥಳಗಳಲ್ಲಿ ನೀರನ್ನು ಶೋಧಿಸಿ ಉಪಯೋಗಿಸಬೇಕೆಂದು ಶಿಫಾರಸ್ಸು ಮಾಡಿದರು. ಅವರು ವಾಪಸ್ಸು ಜರ್ಮನಿಗೆ ಹೋದಾಗ ಒಂದು ಲಕ್ಷ ಮಾರ್ಕ್ಸ್ ಹಣವನ್ನು ರಾಷ್ಟ್ರೀಯ ಪ್ರಶಸ್ತಿಯಾಗಿ ಪಡೆದರು.

೧೮೮೫ರಲ್ಲಿ ಬರ್ಲಿನ್ ಫ್ರೆಡ್‌ರಿಕ್ ವಿಲಿಹೆಲ್ಮ್ ವಿಶ್ವವಿದ್ಯಾನಿಲಯದಲ್ಲಿ ಹೈಜೀಯನ್ ಮತ್ತು ಬ್ಯಾಕ್ಟೀರಿಯಾಲಜಿ ವಿಭಾಗದಲ್ಲಿ ಪ್ರೊಫೆಸರ್‌ರಾಗಿ ನಿಯಮಿಸಲ್ಪಟ್ಟರು. ಅದರೂ ಕೂಡ ಇವರ ಸಲಹೆಯನ್ನು ಬರ್ಲಿನ್‌ನ ಇಂಪೀರಿಯಲ್ ಆರೋಗ್ಯ ಕಛೇರಿಯು ಅವರ ಸಂಶೋಧನೆಗಾಗಿ ಸಹಕಾರವನ್ನು ನೀಡುತ್ತಾ ಅವರ ಸಲಹೆಗಳನ್ನು ಪಡೆಯುತ್ತಿದ್ದಿತು. ಇಷ್ಟಲ್ಲದೆ ಜರ್ಮನಿಯ ಸರ್ಕಾರವು ಇವರಿಗೆ ಹೊಸ ಸಂಶೋಧನಾ ಸಂಸ್ಥೆಯೊಂದನ್ನು ಒಂದು ವರ್ಷದೊಳಗಾಗಿ ನಾರ್ತ್ ಬರ್ಲಿನ್‌ನ ನಾರ್ವರ್ಪೆನ್‌ನಲ್ಲಿ ಕಟ್ಟಿಸಿಕೊಟ್ಟು ೧೮೯೧ರಲ್ಲಿ ಕಾಕ್ ಇನ್‌ಸ್ಟಿಟ್ಯೂಟ್ ಫಾರ್ ಇನ್‌ಫೆಕ್ಷಿಯಸ್ ಡಿಸೀಸ್ ಎಂಬ ನಾಮಫಲಕದ ಮೇಲೆ ಪ್ರಾರಂಭಿಸಿ ಅದಕ್ಕೆ ರಾಬರ್ಟ್‌ಕಾಕ್‌ರನ್ನು ಮೊಟ್ಟ ಮೊದಲ ನಿರ್ದೇಶಕರಾಗಿ ನೇಮಿಸಿತು. ಇದಕ್ಕೆ ಸರಿಯಾಗಿ ಹೊಂದಿಕೊಂಡಂತೆ ಒಂದು ಕ್ಷಯರೋಗ ಆಸ್ಪತ್ರೆಯನ್ನು ಪೇರ್‌ಸೂನ್ ಎಂಬಲ್ಲಿ ಕಟ್ಟಿಕೊಡಲಾಯಿತು. ಎರಡನೇ ಮಹಾಯುದ್ಧದಲ್ಲಿ ನಾಶವಾಗಿದ್ದ ಈ ಕಾಕ್ ಸಂಸ್ಥೆಯನ್ನು ಮತ್ತೆ ಪೂರ್ತಿಯಾಗಿ ಜರ್ಮನ್ ಸರ್ಕಾರವು ಕಟ್ಟಿಸಿದೆ.

೧೮೯೦ರಲ್ಲಿ ಕಾಕ್‌ರವರು ಕ್ಷಯರೋಗದ ಕ್ರಿಮಿಗಳನ್ನು ಗ್ಲಿಸರಿನ್‌ನಲ್ಲಿ ಶೋಧಿಸಿ ಹಳೆಯ ಟ್ಯೂಬರ್‌ಕ್ಯುಲಿನ್‌ನನ್ನು ಪಡೆದು ಅದು ಕ್ಷಯರೋಗಕ್ಕೆ ಔಷಧಿಯನ್ನಾಗಿ ಉಪಯೋಗಿಸಬಹುದೆಂದು ೧೦ ನೇ ಅಂತರರಾಷ್ಟ್ರೀಯ ವೈದ್ಯಕೀಯ ಕಾಂಗ್ರೆಸ್ ಮೇಳದಲ್ಲಿ ಬರ್ಲಿನ್‌ನಲ್ಲಿ ಹೇಳಿದರು. ಈ ವಿಷಯ ಪ್ರಪಂಚದಲ್ಲಿ ಎಲ್ಲೆಡೆಯಲ್ಲಿಯೂ ಹರಡಿತು. ಆದರೆ ಇದು ಔಷಧಿಯಾಗಿ ಪರಿಣಮಿಸಲಿಲ್ಲ ಹಾಗೂ ಯಶಸ್ವಿಯಾಗಲಿಲ್ಲ. ಮತ್ತೆ ೧೮೯೭ರಲ್ಲಿ ಹೊಸ ಟ್ಯೂಬರ್‌ಕ್ಯುಲಿನ್‌ನನ್ನು ತಯಾರಿಸಿದರು. ಪ್ರೈಸ್ಸೈರ್ ಪೆಸ್ಟಿಟ್ ಆಫ್ ಟ್ಯೂಬರ್‌ಕ್ಯುಲಿನ್ ಅದೂ ಕೂಡ ನಿಷ್ಪ್ರಯೋಜಕವಾಯಿತು. ಅದರೂ ಕೂಡ ಟ್ಯೂಬರ್‌ಕ್ಯುಲಿನ್‌ನ್ನು ಕ್ಷಯರೋಗಗಳನ್ನು ಕಂಡುಹಿಡಿಯಲು ಚುಚ್ಚುಮದ್ದಾಗಿ ಉಪಯೋಗಿಸಿ, ಅದರಲ್ಲಿ ಯಾರಿಗೆ ಕ್ಷಯರೋಗ ಬಂದಿದೆ, ಯಾರಿಗೆ ಇಲ್ಲ ಎನ್ನುವುದನ್ನು ನಿರ್ಧರಿಸಬಹುದೆಂದು ಹೇಳಿದರು. ೧೯೦೧ರಲ್ಲಿ ಲಂಡನ್ನಿಗೆ

ಭೇಟಿಕೊಟ್ಟು, ಅಲ್ಲಿ ನಡೆದ ೨ನೇ ಅಂತರರಾಷ್ಟ್ರೀಯ ಕ್ಷಯರೋಗದ ಕಾಂಗ್ರೆಸ್‌ನಲ್ಲಿ ಭಾಗವಹಿಸಿ ಬೊವೈನ್ ಕ್ಷಯರೋಗವು ಮಾನವನಿಗೆ ಅಷ್ಟು ಅಪಾಯಕಾರಿಯಲ್ಲ. ಆದರೆ ಮಾನವನಿಂದ ಮಾನವನಿಗೆ ಹರಡುವ ಕ್ಷಯರೋಗವು ತುಂಬಾ ಅಪಾಯಕಾರಿ ಎಂದು ಹೇಳಿದರು.

೧೮೮೦ರಲ್ಲಿ ಕ್ಲಾಸ್‌ಥಾಲ್‌ನಲ್ಲಿ ಇದ್ದಂಥ ಅವರ ಹಳೆಯ ಮನೆಯನ್ನು ಕೊಂಡುಕೊಂಡು ಅದನ್ನು ದುರಸ್ತಿ ಮಾಡಿಸಿದರು. ಆ ಊರಿನ ಜನಗಳು ಮತ್ತು ಸಹೋದ್ಯೋಗಿಗಳು ಇವರ ಜ್ಞಾಪಕಾರ್ಥವಾಗಿ ಆ ಮನೆಯ ಗೋಡೆಯ ಮೇಲೆ ಶಿಲಾಶಾಸನವನ್ನು ಇರಿಸಿದರು. ಹೀಗೆ ಪ್ರಖ್ಯಾತಿ ಹೊಂದಿದ ರಾಬರ್ಟ್‌ಕಾಕ್‌ರು ಯಾವಾಗಲೂ ತಮ್ಮ ಕೆಲಸದಲ್ಲಿ ನಿರತರಾಗಿದ್ದು ಆಗಾಗ್ಗೆ ದೂರ ಪ್ರದೇಶಗಳಿಗೆ ಹೋಗುತ್ತಿದ್ದುದರಿಂದ ಅವರ ಹೆಂಡತಿಯಾದ ಎಮಿಲಿ ಫ್ರಾಟ್ಸ್‌ಳಿಗೆ ಬಹಳ ಬೇಸರವಾಗಿ ಕಾಕ್‌ರು ತನ್ನ ಬಗ್ಗೆ ಉದಾಸೀನವನ್ನು ತಾಳಿರುವರೆಂದು ತಿಳಿದು ಮನೋವ್ಯಥೆಯಿಂದ ಹುಚ್ಚುಹುಚ್ಚಾಗಿ ವರ್ತಿಸುತ್ತಿದ್ದಳು. ೧೮೮೮ರಲ್ಲಿ ಇವರ ಮಗಳಾದ ಜರ್ಟ್ರೂಡ್‌ಳು ಡಾಕ್ಟರ್ ಎಡ್ವರ್ಡ್ ಪ್ಫೈಲ್‌ರನ್ನು ಮದುವೆಯಾಗಿ ತನ್ನ ಸ್ವಂತ ಸಂಸಾರವನ್ನು ನಡೆಸಲು ಇವರ ಮನೆಯಿಂದ ಬೇರೆ ಮನೆಗೆ ಹೋದಳು. ಕಾಕ್‌ರಿಗೆ ಈ ಸಮಯದಲ್ಲಿ ತಮ್ಮ ಹೆಂಡತಿಯ ಸಹಕಾರವಿಲ್ಲದಿರುವುದು ಬಹಳ ಬೇಸರವನ್ನುಂಟುಮಾಡಿತು. ಆ ಸಮಯದಲ್ಲಿ ಅಮೇರಿಕಾದಲ್ಲಿದ್ದ ತಮ್ಮ ಸಹೋದರನನ್ನು ನೋಡಿಕೊಳ್ಳಬೇಕೆಂದು ಯೋಚಿಸುತ್ತಾ ಇದ್ದರು. ಇಷ್ಟರಲ್ಲಿ ೨೬ ವರ್ಷಗಳ ಕುಟುಂಬ ಜೀವನವನ್ನು ಸಮರ್ಪಕವಾಗಿ ಸಾಗಿಸಿದ ಅಚ್ಚುಮೆಚ್ಚಿನ ಪ್ರೀತಿಪಾತ್ರಳಾದ ಎಮಿಲಿ ಫ್ರಾಟ್ಸ್‌ಳು ವಿವಾಹ ವಿಚ್ಛೇದನಮಾಡಿ ಮನೆಯಿಂದ ಹೊರಗೆ ಹೊರಟುಹೋದಳು. ಇದಾದ ೨ ತಿಂಗಳ ಮೇಲೆ ರಾಬರ್ಟ್‌ಕಾಕ್‌ರು ತಮ್ಮ ೫೦ನೇ ವಯಸ್ಸಿನಲ್ಲಿ ೨೧ ವರ್ಷ ವಯಸ್ಸಿನ ನಟಿಯಾದ ಹ್ವಾಲ್ಫೈಸ್ ಇ.ಎಫ್ ಎಡ್ವಿಗ್ ಫ್ರೈಬರ್ಗ್ ಎಂಬಾಕೆಯನ್ನು ಮದುವೆಯಾದರು. ಈ ಎರಡನೆಯ ವಿವಾಹವು ಜರ್ಮನಿಯ ಸರ್ಕಾರಿ ವಲಯದಲ್ಲಿ ಮತ್ತು ಸಾರ್ವಜನಿಕ ವಲಯದಲ್ಲಿ ಕೋಲಾಹಲವನ್ನುಂಟುಮಾಡಿತು. ಕ್ಲಾಸ್‌ಥಾಲ್‌ನಲ್ಲಿ ಅವರ ಮನೆಯ ಗೋಡೆಯ ಮೇಲೆ ಹಾಕಿದ್ದ ಶಿಲಾಶಾಸನವನ್ನು ಅಲ್ಲಿನ ಜನಗಳು ಕಿತ್ತುಹಾಕಿದರು ಮತ್ತು ಇವರನ್ನು ಸಮಾಜಬಹಿಷ್ಕಾರ ಮಾಡಬೇಕೆಂದು ಸಾರ್ವಜನಿಕರು ಇವರನ್ನು ತಿರಸ್ಕಾರ ಮನೋಭಾವನೆಯಿಂದ ನೋಡುತ್ತಿದ್ದರು. ಈ ಪರಿಸ್ಥಿತಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ರಾಬರ್ಟ್‌ಕಾಕ್‌ರು ತಮ್ಮ ಇಳಿ

ವಯಸ್ಸಿನ ಅನೇಕ ವರ್ಷಗಳನ್ನು ತಮ್ಮ ಚಿಕ್ಕವಯಸ್ಸಿನ ಹೆಂಡತಿಯೊಡಗೂಡಿ ದೇಶವಿದೇಶಗಳಲ್ಲಿ ಕಾಲಕಳೆಯಲು ಪ್ರಾರಂಭಿಸಿದರು. ೧೮೯೬ ರಿಂದ ೧೮೯೭ ರ ತನಕ ಬ್ರಿಟಿಷ್ ಸರ್ಕಾರದ ಆಹ್ವಾನದ ಮೇರೆಗೆ ಸೌತ್ ಆಫ್ರಿಕಾದಲ್ಲಿ ರಿಂಡರ್ ಪೆಸ್ಟ್ ಎಂಬ ಖಾಯಿಲೆ ಬಗ್ಗೆ ಮಾಹಿತಿಗೊಳಿಸಿ ಮಲೇರಿಯ, ಬ್ಲಾಕ್‌ವಾಟರ್ ಫೀವರ್ ಮತ್ತು ಜೆಟ್ಸ್ ಖಾಯಿಲೆಯ ಬಗ್ಗೆ ಸಂಶೋಧನೆ ನಡೆಸಿದರು. ಹಾಗೂ ಇಟಲಿ, ಇಂಡೋನೇಷಿಯ, ನ್ಯೂಗಿನಿಗಳಲ್ಲಿ ಮಕ್ಕಳಿಗೆ ಬರುವ ಮಲೇರಿಯ ಬಗ್ಗೆ ಪ್ರ್ಯಾಸಂಗ ಮಾಡಿ ಈ ರೋಗವನ್ನು ತಡೆಗಟ್ಟಲು ಕ್ವಿನೈನ್ ಬಳಕೆಯು ಅತ್ಯುತ್ತಮವೆಂದು ಹೇಳಿದರು. ೧೯೦೩ ರಿಂದ ೧೯೦೫ರವರೆಗೆ ಸೌತ್ ಆಫ್ರಿಕಾದ ರೊಡೀಷಿಯದಲ್ಲಿ ರಿಲ್ಯಾಪಸಿಂಗ್ ಫೀವರ್ ಹಾಗೂ ಹಾರ್ಸ್ ಸಿಕ್‌ನೆಸ್ (ಕುದುರೆ ಜ್ವರ) ಮತ್ತು ಮಾನವರಿಗೆ ಇರುವ ಸಂಬಂಧವನ್ನು ತಿಳಿಯುವಲ್ಲಿ ಹೆಚ್ಚಿನ ಆಸಕ್ತಿ ವಹಿಸಿದರು. ಈಸ್ಟ್ ಆಫ್ರಿಕಾದ ಜರ್ಮನಿಯರ ಕಾಲೋನಿಯಾಗಿದ್ದ ಟ್ಯಾಂಗ್‌ನಿಕಾದಲ್ಲಿ ಸ್ಲೀಪಿಂಗ್ ಸಿಕ್‌ನೆಸ್ (ನಿದ್ರಾ ಖಾಯಿಲೆ)ಯಿಂದ ನರಳುತ್ತಿದ್ದ ಜನಗಳಿಗೆ ಅಟಾಕ್ಸಿಲ್ ಎಂಬ ಔಷಧಿಯನ್ನು ಕೊಟ್ಟು ಅದರ ಪರಿಣಾಮವನ್ನು ಕಂಡುಹಿಡಿದರು. ೧೯೦೫ರಲ್ಲಿ ರಾಬರ್ಟ್‌ಕಾಕ್‌ರಿಗೆ ಫಿಜಿಯಾಲಜಿ ಮತ್ತು ಕ್ಷಯರೋಗದ ಬಗ್ಗೆ ಸಂಶೋಧನೆಯನ್ನು ನಡೆಸಿದ್ದಕ್ಕೆ ನೋಬೆಲ್ ಪ್ರಶಸ್ತಿಯನ್ನು ಕೊಡಲಾಯಿತು. ಇವರ ಹೆಸರು ಜರ್ಮನಿಯಲ್ಲೆಲ್ಲಾ ಪ್ರಖ್ಯಾತವಾಯಿತು. ಇವರನ್ನು ಜರ್ಮನ್ ಅಕಾಡೆಮಿ ಆಫ್ ಸೈನ್ಸ್ ಸಂಸ್ಥೆಯಲ್ಲಿ ಮೆಂಬರ್ ಆಗಿ ನೇಮಿಸಿದರು. ಈ ಪದ್ಧತಿಯಲ್ಲಿ ಜರ್ಮನಿಯ ಇಡೀ ಜನಾಂಗವು ಇವರನ್ನು ಹೊಗಳುತ್ತಾ ಇವರ ಹೆಸರನ್ನು ರಸ್ತೆಗಳಿಗೆ ಇಟ್ಟರು. ಇವರ ಪ್ರತಿಮೆಯನ್ನು ಅಲ್ಲಲ್ಲಿ ಪ್ರತಿಷ್ಠಾಪಿಸಿದರು. ಅವರನ್ನು ಬೀರು ಕುಡಿಯುವ ಲೋಟ ಮತ್ತು ಸಿಗಾರ್ ಪೈಪ್‌ಗಳ ಮೇಲೆ ಇವರ ಆಕೃತಿಯನ್ನು ಅಚ್ಚೊತ್ತಿ ಮಾರಲು ಪ್ರಾರಂಭಿಸಿದರು. ಅದೇ ವರ್ಷ ಇವರು ಜಪಾನಿಗೆ ಭೇಟಿ ಕೊಟ್ಟಾಗ ಇವರನ್ನು ಅತ್ಯಂತ ಪ್ರೀತಿ ವಿಶ್ವಾಸದಿಂದ ಬರಮಾಡಿಕೊಂಡು ಇವರ ಜ್ಞಾಪಕಾರ್ಥವಾಗಿ ಹಾರ, ಬಿರುದು ಮತ್ತು ಪದಕಗಳನ್ನು ಕೊಡಲು [illegible] ಸಿದರು. ಟೋಕಿಯೋದಲ್ಲಿ ಇವರ ಹಳೆಯ ಶಿಷ್ಯರೂ ಮತ್ತು ಸಹೋದ್ಯೋಗಿಯಾಗಿದ್ದ ಕಿಟಾಸಾಟೋರವರ ಇನ್‌ಸ್ಟಿಟ್ಯೂಟ್ ಆಫ್ ಬ್ಯಾಕ್ಟೀರಿಯಾಲಜಿಗೆ ಭೇಟಿ ಕೊಟ್ಟಾಗ ಆ ಜಾಗದಲ್ಲಿ ಸಿಂಟೋ ದೇವಾಲಯವನ್ನು ಇವರ ಜ್ಞಾಪಕಾರ್ಥವಾಗಿ ಕಟ್ಟಿದರು ಮತ್ತು ಇಲ್ಲಿನವರೆಗೂ ಪ್ರತಿ ವರ್ಷ ಕಾಕರನ್ನು ಸ್ಮರಿಸುತ್ತಾ ಇದ್ದಾರೆ. ತಮ್ಮ ೬೬ನೇ ವಯಸ್ಸಿನಲ್ಲಿ

ಕಾಕ್ ಇನ್ಸ್ಟಿಟ್ಯೂಟ್ ಆಫ್ ಇನ್‌ಫೆಕ್ಷಿಯಸ್ ಡಿಸೀಸ್ ಸಂಸ್ಥೆಯ ನಿರ್ದೇಶಕರ ಸ್ಥಾನದಿಂದ ೧೯೦೪ರಲ್ಲಿ ನಿವೃತ್ತಿ ಹೊಂದಿ ಅತ್ಯಂತ ಸೇವೆ ಸಲ್ಲಿಸಿದ್ದಕ್ಕೆ ಜನರ ಮೆಚ್ಚುಗೆಯನ್ನು ಪಡೆದರು. ತಮ್ಮ ಇಳಿವಯಸ್ಸಿನಲ್ಲಿ ಅನಾರೋಗ್ಯವಂತರಾದರೂ ಕೂಡ ೧೯೧೦ ಮಾರ್ಚ್ ತಿಂಗಳಲ್ಲಿ ಹೃದಯಾಘಾತದಿಂದ ನರಳು ನೋವುಂಟಾಗಿ ನರಳುತ್ತಿದ್ದರು. ಮೇ ೨೭ ಅವರು ಮತ್ತು ಅವರ ದಂಪತಿ ಬಾಡನ್‌ನಲ್ಲಿದ್ದ ಹೋಟೆಲಿಗೆ ಹೋಗಿ ವಿಶ್ರಾಂತಿ ಪಡೆಯುತ್ತಿದ್ದರು. ೧೯೧೦ ಮೇ ೨೭ರ ಸಂಜೆ ಕಾಕರವರು ಆ ಹೋಟೆಲಿನ ಬಾಲ್ಕನಿಯ ಮೇಲೆ ಒಬ್ಬರೆ ಬಯಲನ್ನು ನೋಡಿ, ಕುಳಿತು ಸೂರ್ಯಾಸ್ತವನ್ನು ನೋಡುತ್ತಿದ್ದ ಹಾಗೆಯೇ ಅವರ ಗಲ್ಲವು ಕೆಳಗೆ ಕುಸಿಯಿತು. ತಕ್ಷಣ ಅವರು ತೀರಿಹೋಗಿದ್ದರು. ಅಲ್ಲಿಗೆ ಅವರಿಗೆ ೬೭ ವರ್ಷ ವಯಸ್ಸಾಗಿತ್ತು. ಅವರ ದೇಹವನ್ನು ಅವರ ಇನ್ಸ್ಟಿಟ್ಯೂಟ್‌ನ ಒಂದು ಮೂಲೆಯಲ್ಲಿ ಹೂಳಲಾಯಿತು. (ಸೌತ್‌ವೆಸ್ಟ್ ವಿಂಗ್) ಈ ಒಂದು ಸಮಾಧಿಯ ಮೇಲೆ ಅಮೃತ ಶಿಲೆಯಿಂದ ಕಟ್ಟಲ್ಪಟ್ಟ ಕೊಠಡಿ ಹಾಗೂ ಇವರ ಜ್ಞಾಪಕಾರ್ಥವಾಗಿ ಬರ್ಲಿನ್‌ನ ಖ್ಯಾತ ಶಿಲ್ಪಿಯಾದ ಪ್ರೊಫೆಸರ್ ಡಾಕ್ಟರ್ ಡಬ್ಲ್ಯು ಷ್ಮಾರ್ಟ್‌ರವರು ಕೆತ್ತಿರುವ ಉಬ್ಬುಚಿತ್ರವನ್ನು ಅಮೃತ ಶಿಲೆಯಲ್ಲಿ ಕೆತ್ತಿ ಇಡಲಾಗಿದೆ. ಪ್ರತಿವರ್ಷವೂ ಈ ಜಾಗದಲ್ಲಿ ಹೂವು ಗಂಧಗಳಿಂದ ಪೂಜಿಸಿ ರಾಬರ್ಟ್‌ಕಾಕ್‌ರನ್ನು ನೆನೆಸಿಕೊಳ್ಳುತ್ತಾರೆ. ಇದೂ ಅಲ್ಲದೆ ಟಾಂಜೇನಿಯಾದ ದಾರೂಸಲೇಮ್‌ನಲ್ಲಿ ಸೆಂಟ್ರಲ್ ಫಿಸಿಯಾಲಜಿಕಲ್ ಲ್ಯಾಬೋರೇಟರಿಯಲ್ಲಿ ಕಾಕ್‌ರ ಜ್ಞಾಪಕಾರ್ಥವಾಗಿ ಒಂದು ಉಬ್ಬುಚಿತ್ರವಿದೆ. ಹಾಗೂ ಈಸ್ಟ್ ಬರ್ಲಿನ್‌ನಲ್ಲಿ ಇವರ ಉಬ್ಬುಚಿತ್ರವನ್ನು ಇಡಲಾಗಿದೆ.

ಈ ಮಹಾನ್ ವ್ಯಕ್ತಿಯ ಕ್ರಿಮಿಗಳ ಸಂಶೋಧನೆಯು ಇಡೀ ಪ್ರಪಂಚಕ್ಕೆ ತಿಳುವಳಿಕೆಯ ಬುನಾದಿಯಾಗಿ ಪರಿಣಮಿಸಿತು ಮತ್ತು ಅವರ ಅನೇಕ ಪ್ರಯೋಗಗಳ ಸಾರಾಂಶ ತತ್ವ ಸಿದ್ಧಾಂತಗಳು ಇಡೀ ವೈದ್ಯಕೀಯ ರಂಗದಲ್ಲೇ ಅಲ್ಲದೆ ಸಾರ್ವಜನಿಕ ಸಾಂಕ್ರಾಮಿಕ ರೋಗಗಳ ತಡೆಯುವಿಕೆ ಕಂಡುಹಿಡಿಯುವಿಕೆ ಮತ್ತು ಔಷಧೋಪಚಾರಗಳಿಗೆ ನಾಂದಿಯಾಗಿ ಇಡೀ ಮಾನವ ಕುಲಕೋಟಿಗೆ ಜೀವನಾಧಾರವಾಗಿ ಪರಿಣಮಿಸಿತು. ಇವರ ಸಂಶೋಧನೆಯ ಫಲವಾಗಿ ಕಂಡುಹಿಡಿದ ಕ್ಷಯರೋಗದ ಕ್ರಿಮಿಗಳ ಬಗ್ಗೆ ನೂರು ವರ್ಷಗಳಾಯಿತು. ಆದರೂ ಕೂಡ ಈ ರೋಗವು ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ಮಾನವೀಯ ಕುಲಕ್ಕೆ ಮಾರಕವಾಗಿ ಪರಿಣಮಿಸುತ್ತಾ ಇದೆ. ಇಡೀ ಪ್ರಪಂಚದಲ್ಲಿ ಈ ವರ್ಷ ರಾಬರ್ಟ್‌ಕಾಕ್‌ರ ನೆನಪಿನ ಶತಮಾನೋತ್ಸವವನ್ನು ಅತಿ

ವಿಜೃಂಭಣೆಯಿಂದ ಎಲ್ಲೆಲ್ಲಿಯೂ ಆಚರಿಸುವುದಲ್ಲದೆ ಕ್ಷಯರೋಗ ಅದರ ಲಕ್ಷಣ, ಚಿಹ್ನೆಗಳು, ಔಷಧೋಪಚಾರ ಮತ್ತು ರೋಗವನ್ನು ತಡೆಗಟ್ಟುವ ಬಗೆಗಳ ಬಗ್ಗೆ ಜನಗಳಿಗೆ ವೈಜ್ಞಾನಿಕ ಮಾಹಿತಿ ಮತ್ತು ತಿಳುವಳಿಕೆಗಳನ್ನು ಕೊಟ್ಟು ಈ ಶತಮಾನೋತ್ಸವವನ್ನು ಆಚರಿಸುವ ಪ್ರಯುಕ್ತ ಇನ್ನು ಇಪ್ಪತ್ತು ವರ್ಷದೊಳಗಾಗಿ ಅಂದರೆ ಕ್ರಿಸ್ತಶಕ ೨,೦೦೦ ವರ್ಷದೊಳಗೆ ಸರ್ವರಿಗೂ ಆರೋಗ್ಯ ಎಂಬ ಮಾಲಿಕೆಯಲ್ಲಿ ಕ್ಷಯರೋಗವನ್ನು ಹತೋಟಿಗೆ ತಂದು ಸಾರ್ವಜನಿಕರ ಸೇವೆಯಲ್ಲಿ ಒದಗಿಸಬೇಕೆಂದು ಪ್ರಪಂಚ ಆರೋಗ್ಯ ಸಂಸ್ಥೆಯು ಒಂದು ನಿರ್ದಿಷ್ಟ ಅಭಿಲಾಷೆಯಾಗಿದೆ. ಈ ಶತಮಾನೋತ್ಸವದ ಆಚರಣೆಯ ಪ್ರಯುಕ್ತ ಇಡೀ ಪ್ರಪಂಚದ ಸಾರ್ವಜನಿಕ ವ್ಯಕ್ತಿಯೂ ಕೂಡ ಕ್ಷಯರೋಗವನ್ನು ತಡೆಗಟ್ಟುವಲ್ಲಿ ಆಯಾ ದೇಶದ ಮತ್ತು ರಾಷ್ಟ್ರದ ಯೋಜನೆಗಳಿಗೆ ಹೊಂದಿಕೊಂಡು ಅವನ್ನು ಅನುಸರಿಸುತ್ತಾ ಕ್ಷಯರೋಗ ನಿವಾರಣಾ ಕಾರ್ಯಕ್ರಮದಲ್ಲಿ ಭಾಗಿಗಳಾಗಿ ಇಡೀ ಮಾನವ ಕುಲಕೋಟಿಯ ಶ್ರೇಯಸ್ಸಿಗಾಗಿ ಶ್ರಮಿಸುತ್ತಾರೆಂದು ಭಾವಿಸಲಾಗಿದೆ.

ಡಾ॥ ಜಿ. ವಿಶ್ವೇಶ್ವರಯ್ಯ



ವಿಕಾಸವಾದ

ಜ್ಞಾನವಂತರನ್ನೇ ಪಂಡಿತರೆನಿಸುವುದಿಲ್ಲ. ತಮ್ಮ ಜ್ಞಾನವನ್ನು ಕ್ರಿಯೆಯಲ್ಲಿ ತೋರಿಸಬಲ್ಲ ಪುರುಷಾಂತರು ಮಾತ್ರ ಪಂಡಿತರೆನಿಸುವರು.

—ಮಹಾಭಾರತ

ತನ್ನ ಕುಟುಂಬವನ್ನು ತೂಗಿಸಿಕೊಂಡು ಹೋಗಲಾರದ ವ್ಯಕ್ತಿ ಎಷ್ಟೇ ವಿದ್ಯಾವಂತನಾಗಿದ್ದರೂ ಸುಶಿಕ್ಷಿತನೆನಿಸುವುದಿಲ್ಲ.

—ಬನ್ಯಾರ್ಫ್

ಈರುಳ್ಳಿಯ ಬಗ್ಗೆ ನಿಮಗೆಷ್ಟು ಗೊತ್ತು?

ಸುಪ್ರಸಿದ್ಧ ಇಂಗ್ಲಿಷ್ ಲೇಖಕ ರಾಬರ್ಟ್ ಲೂಯಿಸ್ ಸ್ಟೀವನ್ಸನ್ "ಈರುಳ್ಳಿ ಗೆಡ್ಡೆಗಳೆಲ್ಲ ಗುಲಾಬಿ" ಎಂದು ಬಣ್ಣಿಸಿದ್ದಾನೆ. ಉಳ್ಳಾಗಡ್ಡೆ ಮತ್ತು ನೀರುಳ್ಳಿ ಎಂದೂ ಕರೆಯಲಾಗುವ ಇದರಲ್ಲಿ ಸುಮಾರು ೫೦೦ ಪ್ರಭೇದಗಳಿವೆ. ಹೂವಿನ ಕುಂಡವನ್ನು ಅಲಂಕರಿಸುವ ಬದಲು ಈರುಳ್ಳಿ ನಮ್ಮ ಅಡುಗೆಮನೆಯನ್ನು ಅಲಂಕರಿಸಿದೆ. ಇದು ಅಂತಾರಾಷ್ಟ್ರೀಯ ಪ್ರಾಮುಖ್ಯವುಳ್ಳ ತರಕಾರಿ. ಈರುಳ್ಳಿಯನ್ನು ಬಳಸದ ದೇಶವೇ ಇಲ್ಲ ಎನ್ನಬಹುದಾಗಿದೆ. ಗೆಡ್ಡೆ ಆಕಾರದಲ್ಲಿ ಬೆಳೆಯುವ ಬೆಳೆ ಇದು. ವಿವಿಧ ಹವಾಮಾನಗಳಲ್ಲಿ ಬೆಳೆಸಬಹುದು. ಜೌಗಿಲ್ಲದ ಮಣ್ಣುಗಳೂ ಈರುಳ್ಳಿ ಬೆಳೆಗೆ ಯೋಗ್ಯ.

ಚಟ್ನಿ, ಪಲ್ಯ, ಸಾಂಬಾರು, ಬಜ್ಜಿ, ಹಸಿ ಪಕೋಡ, ಚಿತ್ರಾನ್ನ ಇವೆಲ್ಲವುಗಳಲ್ಲಿಯೂ ಈರುಳ್ಳಿಯನ್ನು ಬಳಸುತ್ತಾರೆ. ಹಸಿ ಈರುಳ್ಳಿಯನ್ನು ಕೆಲವರು ಸೇವಿಸುವುದೂ ಉಂಟು. ರುಚಿ ಹಾಗೂ ಪುಷ್ಟಿಕರ ಆಹಾರ ಅಂಶಗಳಿರುವುದರಿಂದ ಇದೊಂದು ಜನಪ್ರಿಯ ತರಕಾರಿ ಎನಿಸಿದೆ.

ಮನುಷ್ಯ ಇತಿಹಾಸದ ಪ್ರಾರಂಭದಲ್ಲೇ ಸುಮಾರು ೫೦೦೦ ವರ್ಷಗಳ ಹಿಂದೆ ಈರುಳ್ಳಿ ಶೋಧಿಸಲ್ಪಟ್ಟಿತು. ಓನಿಯನ್ ಎಂಬ ಪದ ಬಂದದ್ದು ಲ್ಯಾಟಿನ್ ಭಾಷೆಯ ಯೂನಿಯೋ ಮತ್ತು ಫ್ರೆಂಚ್‌ನ ಒಯುಗ್ನೋನ್ ಎಂಬ ಪದದಿಂದ. ವೈದ್ಯಶಾಸ್ತ್ರದ ಪಿತಾಮಹ ಹಿಪ್ಪಾಕ್ರೆಟಿಸ್ ಈರುಳ್ಳಿ ದೃಷ್ಟಿಗೆ ಒಳ್ಳೆಯದು ಎಂದು ನಂಬಿದ್ದ. ೧೫೨೬ರಲ್ಲಿ ಪ್ರಕಟವಾದ ದ ಗ್ರೇಟ್ ಹರ್ಬಲ್ ಎಂಬ ಪುಸ್ತಕದಲ್ಲಿ ಈರುಳ್ಳಿಯ ರಸ ಲೇಪಿಸುವುದರಿಂದ ಬೊಕ್ಕತಲೆಯ ಮೇಲೆ ಕೂದಲು ಬೆಳೆಯುತ್ತದೆಂದು ಹೇಳಲಾಗಿದೆ. ಹುಚ್ಚುನಾಯಿ ಕಡಿದರೆ ಮತ್ತು ಮೂರ್ಛೆರೋಗಕ್ಕೆ ಇದೊಂದು ದಿವ್ಯೌಷಧಿಯಾಗಿದೆ. ಈರುಳ್ಳಿ ಪಚನಶಕ್ತಿಗೆ ಸಹಾಯ ಮಾಡುವುದು. ಸಾಮಾನ್ಯವಾಗಿ ಬರುವ ನೆಗಡಿಯನ್ನು ಇದು ನಿವಾರಿಸುವುದು. ಈರುಳ್ಳಿಯ ರಸದಿಂದ ಕಣ್ಣಿನ ರೋಗ ನಿವಾರಿಸಬಹುದು. ಇದು ರಕ್ತದ ಒತ್ತಡ ಕಡಿಮೆ ಮಾಡುವುದರೊಂದಿಗೆ ಕೊಲೆಸ್ಟರಾಲನ್ನು ಕಡಿಮೆ ಮಾಡಬಲ್ಲದು. ಆಯುರ್ವೇದದಲ್ಲೇ ಈರುಳ್ಳಿಯನ್ನು ಆಗಾಗ ಶಿಫಾರಸು ಮಾಡುವುದುಂಟು.

ಈರುಳ್ಳಿಯಲ್ಲಿ ಕ್ಯಾಲ್ಸಿಯಂ, ಕಬ್ಬಿಣ, ಪ್ರೋಟೀನ್ ಮತ್ತು ಸಿ ವಿಟಮಿನ್ನು,

---

೧೯೮೭ರ ಜನವರಿ ರೀಡರ್ಸ್ ಡೈಜೆಸ್ಟ್‌ನ ಸಂಚಿಕೆಯಲ್ಲಿ ಪ್ರಕಟವಾಗಿರುವ ಡು ಯು ನೋ ಯುವರ್ ಓನಿಯನ್ಸ್ ಲೇಖನದ ಭಾವಾನುವಾದ.

ಗಳಿವೆ. ಅಲೈಲ್ ಪ್ರೊಪೈಲ್ ಡೈಸಲ್ಫೈಡ್ ಎಂಬ ರಾಸಾಯನಿಕ ಮತ್ತು ಹೊಗೆಯಾಡುವ ಎಣ್ಣೆ ಇರುವುದರಿಂದ ಈರುಳ್ಳಿ ಖಾರವಾಗಿರುತ್ತದೆ. ಈ ಅಂಶ ಕಡಿಮೆ ಇರುವ ಈರುಳ್ಳಿಯಲ್ಲಿ ಖಾರ ಕಡಿಮೆ ಇರುತ್ತದೆ. ಈರುಳ್ಳಿಗೆ ಇರುವ ಇನ್ನೊಂದು ಅಸಾಧಾರಣ ಶಕ್ತಿ ಎಂದರೆ–ಅದು ನಮ್ಮ ಕಣ್ಣುಗಳಲ್ಲಿ ನೀರು ತರಿಸಬಲ್ಲುದು. ಇದಕ್ಕೆ ಕಾರಣ ಅದರಲ್ಲಿರುವ ಸಲ್ಫ್ಯೂರಿಕ್ ಆ್ಯಸಿಡ್. ಈರುಳ್ಳಿಗೆ ಇರುವ ಶಕ್ತಿ ಕೇವಲ ಜಾನಪದವಲ್ಲ. ಹೃದಯರೋಗತಜ್ಞ ಡಾ| ಎಫ್. ಸಿ. ಮಣಿಯಾರ್ ಅವರು "ಈರುಳ್ಳಿಯ ವೈದ್ಯಕೀಯ ಉಪಯೋಗ ಇನ್ನೂ ಸಂಶೋಧನೆಯ ಹಂತದಲ್ಲಿದೆ. ಹೃದಯರೋಗಗಳಲ್ಲಿ ಅದು ರಕ್ತದ ಒತ್ತಡವನ್ನು ಕಡಿಮೆ ಮಾಡಬಲ್ಲದು. ಆದರೆ ಹೆಚ್ಚು ಈರುಳ್ಳಿ ಸೇವಿಸಿ ಹೊಟ್ಟೆಯಲ್ಲಿ ಉರಿ ಹೆಚ್ಚಿಸಬಹುದು. ಈರುಳ್ಳಿಯೇ ಪ್ರಧಾನವಾಗಿ ಇರುವ ಪಥ್ಯವನ್ನು ಶಿಫಾರಸು ಮಾಡುವ ಮುನ್ನ ಸಾಕಷ್ಟು ಸಂಶೋಧನೆ ಅಗತ್ಯ" ಎನ್ನುತ್ತಾರೆ.

ಪಿರಾಮಿಡ್ಡಿನ ನಿರ್ಮಾಣ ಕೈಗೊಂಡ ಈಜಿಪ್ಟಿಯನ್ನರು ಶಕ್ತಿ ಹೆಚ್ಚಿಸಿಕೊಳ್ಳಲು ಈರುಳ್ಳಿ ಮತ್ತು ಬೆಳ್ಳುಳ್ಳಿಯನ್ನು ಯಥೇಚ್ಛವಾಗಿ ಸೇವಿಸುತ್ತಿದ್ದರಂತೆ. ಕ್ರಿ. ಪೂ. ೩೦೦೦ ವರ್ಷಗಳಷ್ಟು ಹಿಂದೆ ಈಜಿಪ್ಟಿನಲ್ಲೇ ಈರುಳ್ಳಿಯನ್ನು ಬೆಳೆಸುತ್ತಿದ್ದರೆಂದು ಹೇಳಲಾಗಿದೆ. ಇದು ಪ್ರಪಂಚದಲ್ಲಿ ಅತ್ಯಂತ ಪ್ರಾಚೀನವಾಗಿ ಉಳುಮೆ ಮಾಡಿದ ತರಕಾರಿ. ಈಜಿಪ್ಟಿಯನ್ನರು ಬಲಗೈಯಲ್ಲಿ ಈರುಳ್ಳಿಯನ್ನು ಹಿಡಿದು ಪ್ರಮಾಣ ಮಾಡುತ್ತಿದ್ದರು. ಅವರು ಈರುಳ್ಳಿ ಪದರು ಪದರಾಗಿ ಇರುವುದರಿಂದ ಅದು ಅನಂತವಾದದ್ದೆಂದು ಭಾವಿಸಿದ್ದರು. ಈಜಿಪ್ಟಿನಲ್ಲಿ ಬೆಳೆಯುವ ಒಂದು ವಿಧವಾದ ಈರುಳ್ಳಿಯನ್ನು ಪೂಜಿಸುವ ಪದ್ಧತಿಯೂ ಇದೆ.

ಪಾಶ್ಚಾತ್ಯ ರಾಷ್ಟ್ರಗಳಲ್ಲಿಯೂ ಈರುಳ್ಳಿಯ ಬಗ್ಗೆ ಮೆಚ್ಚುಗೆಯ ನುಡಿಗಳಿವೆ. ರೋಮನ್ ಚಕ್ರವರ್ತಿ ನೀರೋ ತನ್ನ ಧ್ವನಿಯನ್ನು ಸುಧಾರಿಸಿದ್ದಕ್ಕಾಗಿ ಈರುಳ್ಳಿಯನ್ನು ಪ್ರಶಂಸಿಸಿದ್ದಾನೆ. ಮಧ್ಯ ಯೂರೋಪಿನಲ್ಲಿ ಈರುಳ್ಳಿಯನ್ನು ಬಾಡಿಗೆಯ ಬದಲಿಗೂ ವಿವಾಹದಂಥ ಶುಭಕಾರ್ಯಗಳಲ್ಲಿ ಕಾಣಿಕೆಯಾಗಿಯೂ ನೀಡುತ್ತಿದ್ದರು. ೧೫೭೦ರ ಸುಮಾರಿಗೆ ಈರುಳ್ಳಿಯಿಂದ ಸಿದ್ಧಪಡಿಸಬಹುದಾದ ವಿವಿಧ ಬಗೆಯ ಅಡಿಗೆಗಳ ಬಗ್ಗೆ ಉಲ್ಲೇಖಗಳಿವೆ. ಈರುಳ್ಳಿಯನ್ನು ಗೆಡ್ಡೆ ಬಿಡದಿರುವಾಗಲೇ ಕಿತ್ತು ಉಪಯೋಗಿಸುವುದುಂಟು. ಇದರ ಹಸಿರು ಸೊಪ್ಪಿನಲ್ಲಿ ಸಾಕಷ್ಟು ಪೌಷ್ಟಿಕಾಂಶಗಳಿವೆ.

ಭಾರತ ಈರುಳ್ಳಿ ಬೆಳೆಯುವ ಒಂದು ಪ್ರಮುಖ ರಾಷ್ಟ್ರವಾಗಿದೆ. ಕರ್ನಾಟಕ, ಆಂಧ್ರ, ತಮಿಳುನಾಡು, ಮಹಾರಾಷ್ಟ್ರ, ಅಸ್ಸಾಂ ಮತ್ತು ಬಿಹಾರ ರಾಜ್ಯಗಳಲ್ಲಿ

ಈರುಳ್ಳಿಯನ್ನು ಹೆಚ್ಚಾಗಿ ಬೆಳೆಯುತ್ತಾರೆ. ಪ್ರಾಚೀನ ಕಾಲದಿಂದಲೂ ಭಾರತವು ಈರುಳ್ಳಿಯನ್ನು ರಫ್ತು ಮಾಡುತ್ತ ಬಂದಿದೆ. ಸಿಂಗಾಪುರ ಮತ್ತು ಮಲೇಷ್ಯಾಗಳಲ್ಲಿ ಭಾರತದ ಈರುಳ್ಳಿಗೆ ತುಂಬ ಬೇಡಿಕೆ ಇದೆ. ಈರುಳ್ಳಿ ಭಾರತಕ್ಕೆ ವಿದೇಶೀ ವಿನಿಮಯವನ್ನು ಗಳಿಸಿಕೊಡುತ್ತ ಬಂದಿದೆ. ಜಪಾನ್, ಬರ್ಮ, ಶ್ರೀಲಂಕಾ, ಇರಾನ್, ಆಫ್ರಿಕಗಳಿಗೂ ಭಾರತ ಈರುಳ್ಳಿಯನ್ನು ರಫ್ತು ಮಾಡುತ್ತದೆ. ಕರ್ನಾಟಕದ ಚಿಕ್ಕಬಳ್ಳಾಪುರದ ಈರುಳ್ಳಿಗೆ ಶ್ರೀಲಂಕಾದಿಂದ ಹೆಚ್ಚು ಬೇಡಿಕೆ ಇದೆ. ೧೯೭೯–೮೦ ರಲ್ಲಿ ೭೦೦೦೦ ಟನ್ನುಗಳಷ್ಟು ಈರುಳ್ಳಿಯನ್ನು ರಫ್ತು ಮಾಡಿ ೧೨–೧೫ ಕೋಟಿ ರೂ.ಗಳನ್ನು ಭಾರತ ಗಳಿಸಿತು. ಭಾರತದಲ್ಲಿ ಉತ್ಪಾದವಾಗುವ ಈರುಳ್ಳಿ ೨.೫ ಮಿಲಿಯನ್ ಟನ್ನುಗಳು.

ಈರುಳ್ಳಿ ಬೆಳೆಗಾರರಿಗೆ ಸರ್ಕಾರದ ನ್ಯಾಷನಲ್ ಅಗ್ರಿಕಲ್ಚರ್ ಕೋಆಪರೇಟಿವ್ ಮಾರ್ಕೆಟಿಂಗ್ ಫೆಡರೇಷನ್ನಿನ ನಾಸಿಕ್ ಸಹಾಯ ಮಾಡುತ್ತದೆ. ಇದು ಈರುಳ್ಳಿ ಬೆಳೆಗಾರರ ಹಿತವನ್ನು ರಕ್ಷಿಸುತ್ತದೆ. ಬೆಲೆಗಳು ಕುಸಿದಾಗ, ವ್ಯಾಪಾರ ಕುಸಿದು ಹೋದಾಗ ಇದು ಬೆಳೆಗಾರರಿಗೆ ಸಹಾಯ ಮಾಡುತ್ತದೆ. ಪ್ರಸಿದ್ಧ [illegible] ಈರುಳ್ಳಿಯಿಂದಲೇ ನಾನು ಯುದ್ಧಗಳಲ್ಲಿ ಗೆಲ್ಲಲು ಸಾಧ್ಯವಾಯಿತು ಎಂದು ಹೇಳಿದ್ದಾನೆ.

ದಕ್ಷಿಣ ಭಾರತದಲ್ಲಿ ಉಪಯೋಗದಲ್ಲಿರುವ ಮದ್ರಾಸ್ ಈರುಳ್ಳಿ ಅತ್ಯಂತ ಜನಪ್ರಿಯವಾಗಿದೆ. ಚಿಕ್ಕದಾಗಿರುವ ಇದನ್ನು ಕೆಲವೆಡೆ ಇಡಿಯಾಗಿಯೇ ಬಳಸಬಹುದಾಗಿದೆ.

ಈರುಳ್ಳಿ ಕೊಳ್ಳುವಾಗ ನೆನಪಿನಲ್ಲಿಡಬೇಕಾದ ಕೆಲವು ಮುಖ್ಯ ಅಂಶಗಳು: ಹೊರಗಿನ ಬಣ್ಣದ ಈರುಳ್ಳಿಯ ಮೇಲ್ಪದರ ಒಣಗಿರಬೇಕು. ಕತ್ತು ಇದ್ದು ಮೆತ್ತಗಾಗಿರುವ, ಕಪ್ಪು ಮಚ್ಚೆಯಿರುವ, ಮೊಳಕೆ ಒಡೆದಿರುವ ಈರುಳ್ಳಿಗಳನ್ನು ಕೊಳ್ಳಬೇಡಿ. ಈರುಳ್ಳಿ ಮಧ್ಯ ಮೆದುವಾಗಿದ್ದರೆ ಅದು ಕೊಳೆತಿದೆ ಎಂದು ಭಾವಿಸಬೇಕು. ಹಾಗೆಯೇ ಬಿಳಿ ಈರುಳ್ಳಿಯನ್ನು ಎಂದೂ ಖರೀದಿಸಬೇಡಿ. ಅದಿಗೆ ಈರುಳ್ಳಿ ಕೊಂಚ ಸುವಾಸಿತವಾಗಿರುತ್ತದೆ. ಇಡಿಯಾಗಿರುವಾಗ ವಾಸನೆಯುಕ್ತವಾಗಿರುತ್ತದೆ. ಈರುಳ್ಳಿಯ ಗಾತ್ರಕ್ಕೂ ರುಚಿಗೂ ಸಂಬಂಧವಿಲ್ಲವಾದರೂ ಮಧ್ಯಮ ಗಾತ್ರವು ಹೆಚ್ಚು ಅನುಕೂಲಕರವಾಗಿರುವುವು.

ಹಸಿರು ಈರುಳ್ಳಿ ಕೊಳ್ಳುವಾಗ ಅದು ೧೫–೨೦ ಸೆಂ. ಮೀ. ಉದ್ದವಾಗಿರುವುದನ್ನೇ ಪಡೆಯಿರಿ. ಹೆಚ್ಚು ಬೆಳೆದದ್ದು ಪರಿಪೂರ್ಣವಾಗಿ ಉಪಯೋಗಿಸಲು ಸಾಧ್ಯವಾಗುವುದಿಲ್ಲ.

ಅಡಿಗೆ ಈರುಳ್ಳಿಯ ತುದಿ ಚೂಪಾಗಿದ್ದು ಅದು ಸಾಂಬಾರ, ಚಟ್ನಿ ಮುಂತಾದವಕ್ಕೆ ರುಚಿ ತಂದುಕೊಡಬಲ್ಲುದು. ಈರುಳ್ಳಿಯಲ್ಲಿರುವ ಆ್ಯಸಿಡಿಟಿಯನ್ನು ಕಡಿಮೆಮಾಡಲು ನಿಂಬೆಹಣ್ಣನ್ನು ಉಪಯೋಗಿಸಿ. ಸಾಂಬಾರ, ದಾಲ್ ಮುಂತಾದವಕ್ಕೆ ಕೆಂಪಾದ ಮದ್ರಾಸ್ ಈರುಳ್ಳಿಯನ್ನೇ ಉಪಯೋಗಿಸಿ. ವೈಜ್ಞಾನಿಕವಾಗಿ ಒಣಗಿಸಿದ ಈರುಳ್ಳಿಗಳ ರುಚಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಅಡಿಗೆಗೆ ಉಪಯೋಗಿಸುವ ಈರುಳ್ಳಿಯನ್ನು ಶೈತ್ಯಾಗಾರದಲ್ಲಿ ಇಡಬಾರದು. ಅವುಗಳ ತಾಜಾತನವನ್ನು ಒಣಗಿದ ಸ್ಥಳದಲ್ಲಿ ಶೇಖರಿಸಬಹುದಾಗಿದೆ. ಶೈತ್ಯಾಗಾರದಲ್ಲಿ ಇಡುವುದಾದಲ್ಲಿ ಈರುಳ್ಳಿಯನ್ನು ಕತ್ತರಿಸಿ ಇಡಿ. ಈರುಳ್ಳಿಯಿಂದ ವಾಸನೆ ಬರುತ್ತಿದ್ದರೆ ಅದನ್ನು ಉಪ್ಪುನೀರಿನಲ್ಲಿ ತೊಳೆಯಿರಿ. ಈರುಳ್ಳಿಯನ್ನು ಹೆಚ್ಚುವಾಗ ಕಣ್ಣಿನಲ್ಲಿ ನೀರು ಬಾರದ ಹಾಗೆ ಮಾಡಲು ಅದನ್ನು ನೀರಿನಲ್ಲಿ ೧೦-೧೫ ನಿಮಿಷ ಇಡಿರಿ. ಇದರಿಂದ ಅದರಲ್ಲಿರುವ ಸಲ್ಫರ್ ಕಡಿಮೆ ಆಗಬಲ್ಲುದು.

ಜಿ. ಎಸ್. ಭಟ್ಟ



ನಾಳೆ ಮಾಡುವಲ್ಲಿ ಇಂದೇ ಕೂಗಿಕೊಳ್ಳುತ್ತಿದ್ದರೂ ಅವರಿಗೆ ಯಾರೂ ಕಿವಿಗೊಡುವುದಿಲ್ಲ. ಸ್ವಲ್ಪಕತನದ ಉಸಿರು ಬೇರೆ ಸತ್ಯಳ ಕೂಡಾ ನಮ್ಮ ಕಿವಿಗೆ ಮಾಗಣಿ ಕೇಳುತ್ತದೆ.

—ಶೇಕ್ಸ್‌ಪಿಯರ್

ಒಂದೇ ವಿಚಾರವನ್ನು ಕುರಿತು ಯಾವಾಗಲೂ ಯೋಚಿಸುತ್ತಿರುವವನು ಖಂಡಿತವಾಗಿಯೂ ಅವನ ಬುದ್ಧಿಯ ಸಮತೋಲನವನ್ನು ಕಳೆದುಕೊಳ್ಳುತ್ತಾನೆ.

—ಹಿಲ್

ಪುಸ್ತಕ ವಿಮರ್ಶೆ

ಬಾಳಿಕಟ್ಟೆಯ ಬಳಿ—ಕಥಾಸಂಕಲನ; ನವಕರ್ನಾಟಕ ಪಬ್ಲಿಕೇಷನ್ಸ್ (ಪ್ರೈ) ಲಿಮಿಟೆಡ್, ಬೆಂಗಳೂರು. ಇದರ ವಿಶ್ವಕಥಾ ಕೋಶದ ಯೋಜನೆಯಲ್ಲಿ ಪ್ರಕಟವಾಗಿರುವ ೧೨ನೆಯ ಸಂಪುಟ. ಪ್ರಧಾನ ಸಂಪಾದಕ: ನಿರಂಜನ. ಪುಟಗಳು iv+೧೮೨ ಬೆಲೆ ೧೦ರೂ. (೧೯೮೧)

ಈ ಸಂಪುಟದಲ್ಲಿ ಯುಗೊಸ್ಲಾವಿಯದ ೫ ಕಥೆಗಳೂ ಅಲ್ಬೇನಿಯದ ೩ ಕಥೆಗಳೂ ಬಲ್ಗೇರಿಯದ ೪ ಕಥೆಗಳೂ ಇದ್ದು ಒಟ್ಟು ೧೨ ಕಥೆಗಳಿವೆ. ಅನುವಾದ: ಜಿ. ಶ್ರೀನಿವಾಸರಾಜು.

ಯುಗೊಸ್ಲಾವಿಯದ ೫ ಕಥೆಗಳಲ್ಲಿ ಐವೊ ಆಂಡ್ರಿಚ್ ಬರೆದ "ಬಾಳಿಕಟ್ಟೆಯ ಬಳಿ" ನೊಬೆಲ್ ಪ್ರಶಸ್ತಿ ವಿಜೇತನ ಕಥೆ. ಬಾಳಿಯಲ್ಲಿ ಬರುವ ಗೌರವಿಸುವ ಒಂದು ದೊಡ್ಡ ಕಟ್ಟಡ. ಅದರಲ್ಲಿನ ಎಲ್ಲರನ್ನೂ ಸರಳ, ಸ್ನೇಹ ಬಯಸು. ಮುದುಕನೊಬ್ಬನ ಆ ಕಟ್ಟಡಕ್ಕೆ ಹೊಸ ಹೆಸರನ್ನು ಇಟ್ಟು ಬರುವ ಹೊಸ್ತಿಗಳ ಜೊತೆಗಾರನ ಬಂದು ನೋಡುವುದು. ಆ ಹೆಣ್ಣು ಗರ್ಭಿಣಿ, ಅನಾಥಳಾದ ಹುಡುಗಿ, ಅವಳಿಂದ ಹುಟ್ಟಿದ ಮಗು ಶಾಂತಿ ಕೊಡುವುದು, ಕೊನೆಗೆ ಮನೆಯ ಒಡೆಯನ ಕಾಳಜಿಯಿಂದ ಅವಳ ಹೃದಯ ಪರಿವರ್ತನೆಯಾಗುವಂತೆ ಮಾಡುವ. ಮತ್ತೆ ಒಂದು ದಿನ ಅಂಕೆಯಿಲ್ಲ ಹುಚ್ಚನ, ನಮಗಾದ ಮನೆಯಲ್ಲಿ ನುಡಿಯುವುದು ಗರ್ಭಿಣಿ ಹೆಣ್ಣು ಮಗುವಿನಿಂದ ನೊಂದು ನೋಡಿ ಎಲ್ಲರಿಗೂ ಹಾಕು ಪ್ರಿಯ ಎಲ್ಲರ ಸ್ತ್ರೀಗೆ ಪಾತ್ರಳಾಗುವುದು. ಕಥೆ ಬಹು ಸರಳವಾಗಿ ಓದುಗರ ಮನ ಮೆಚ್ಚಿಸುವುದು.

ಮಿಹಾಯಿಲ್ ಲಾಲಿಚ್ ಬರೆದ "ಮುತ್ತು ಮತ್ತು ಹುಡುಗರು" ಕಥೆ ಎಲ್ಲವನ್ನೂ ಮೀರಿದ ಒಂದು ಚಿತ್ರ ನೀಡುತ್ತದೆ. ಇದರಲ್ಲಿ ಕಥೆಗಾರ ಮಕ್ಕಳ ಮನಸ್ಸಿನ ಮುಗ್ಧತೆ ಯುದ್ಧದ ಭಯಂಕರತೆ. ಹಾಗೇ ಮಾನವ ಮತಿಭ್ರಮಣೆಯನ್ನು ಹೆಚ್ಚು ಬೇರ್ಪಡಿಸಿ ತೋರಿಸುವ ಪ್ರತಿಸ್ಪರ್ಧಿಗಳ ಕ್ರೌರ್ಯಕ್ಕೆ ಯುದ್ಧವೇ ಕಾರಣವೆನ್ನುವುದನ್ನು ನಮ್ಮ ನಾಗರಿಕ ಜಗತ್ತಿನ ಕ್ರೌರ್ಯವನ್ನು ವಿವರಿಸಿ ನಮ್ಮ ಮುಂದಿಟ್ಟಿದ್ದಾನೆ.

ಬ್ರಾಂಕೊ ಚೊಪಿಚ್ ಬರೆದ "ಯುದ್ಧದ ಮಕ್ಕಳ" ಒಬ್ಬ ಕ್ರೂರ ಯುದ್ಧ ಕೋರನ ಕಥೆ. ಸಾಹಸಿ, ಹಿರಿಯನೆನಿಸಿಕೊಂಡವನ ಕೊನೆಗೆ ಅವನ ಕ್ರೌರ್ಯ

ದಿಂದಲೇ ಹುಚ್ಚ ಎನಿಸಿಕೊಂಡು ಜನರಿಂದ ಹತನಾಗುವ.

ಸಿ. ವಿಂಡೆರೊವಿಚ್ಸ್ ಇವರ "ಒಂದು ಚಲನಚಿತ್ರ—ಮೂರು ರೀಲುಗಳಲ್ಲಿ" ಬಡಮಕ್ಕಳ ಆಸೆ ಆಕಾಂಕ್ಷೆಗಳನ್ನೂ ಹಣವಂತರ ಹೃದಯಹೀನತೆ, ಢಂಬಾಚಾರವನ್ನು ಹಾಗೇ ಬಡವರನ್ನು ತಮ್ಮ ಕೆಲಸಗಳಿಗೆ ಅವರು ಬಳಸಿಕೊಳ್ಳುವ ರೀತಿಯನ್ನು ಸಿನಿಮಾದಂತೆಯೇ ನಮ್ಮ ಕಣ್ಣಮುಂದೆ ತರುವ ಕಥೆ.

ಲಿಯೋನಸ್ ಜಿಲಾಸ್ ಇವರ "ಯುದ್ಧ" ಕರ್ತವ್ಯಪರತೆ ಎಂತಹ ನಿಷ್ಠೂರವಾದದ್ದು ಎಂಬುವರ ಕಥೆ. ಯುದ್ಧದಲ್ಲಿ ತಮ್ಮ ಮೊದಲ ಇಬ್ಬರು ಮಕ್ಕಳನ್ನು ಕಳೆದುಕೊಂಡು ಮೂರನೆಯವನನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸಿದ ಮುದಿತಂದೆತಾಯಿಗಳ ವ್ಯರ್ಥಪ್ರಯತ್ನ ತಮ್ಮ ಮಗ ಯುದ್ಧದಲ್ಲಿ ಸತ್ತನೆಂದು ಶವಪೆಟ್ಟಿಗೆಯಲ್ಲಿ ಬಚ್ಚಿಟ್ಟು ಅವನನ್ನು ತಮ್ಮ ಮನೆಗೆ ಒಯ್ಯಲು ಪ್ರಯತ್ನಿಸುವರು. ಗುಂಪಿನಲ್ಲಿದ್ದ ಒಬ್ಬಾತನಿಗೆ ಅನುಮಾನ ಬಂದು ಸೈನಿಕ ಅಧಿಕಾರಿಗೆ ತಿಳಿಸುವ. ಅಧಿಕಾರಿ ಶವಪೆಟ್ಟಿಗೆಯನ್ನು ತೆಗೆಸಿ ನೋಡಿದಾಗ ಜೀವಂತ ಯುವಕ ಕಂಡುಬರುವ. ಅವನನ್ನು ಹಾಗೇ ಶವಪೆಟ್ಟಿಗೆಯಲ್ಲೆ ಮಲಗಲು ಸೈನ್ಯಾಧಿಕಾರಿ ಆಜ್ಞೆಮಾಡಿ ಶವಪೆಟ್ಟಿಗೆ ಮುಚ್ಚಿಸಿ ಗುಂಡು ಹೊಡೆಯುವ. ಶವಪೆಟ್ಟಿಗೆಯ ತಳದಿಂದ ರಕ್ತ ಸೋರಲಾರಂಭಿಸುವುದು. ಮುದುಕ-ಮುದುಕಿ ಕಂಗಾಲಾಗಿ ದಿಕ್ಕುತೋಚದೆ ಶವಪೆಟ್ಟಿಗೆಯನ್ನು ಎಳೆದುಕೊಂಡು ಹೋಗುವ ದಾರುಣ ಚಿತ್ರ ಯುದ್ಧಕಾಲದಲ್ಲಿ ಜನ ಅನುಭವಿಸಿದ ಕಷ್ಟನಷ್ಟಗಳ ಭೀಕರ ಚಿತ್ರ ಕೊಡುತ್ತದೆ.

ಇದರಲ್ಲಿ ಆಫ್ರಿಕಾಕ್ಕೆ ಸಂಬಂಧಿಸಿದ ೩ ಕಥೆಗಳಿವೆ. ಆ ಪೈಕಿ ಅಲೆಕ್ಸ್ ಜಾಕ್ಸ್ ಇವರ "ಧಾನ್ಯ ಕತ್ತರು" ಒಂದು. ಜಮೀನ್ದಾರರು ತಮ್ಮ ಹೊಲ, ತೋಟಗಳಲ್ಲಿ ಬಡಜನರನ್ನು ಎಷ್ಟು ದಯನೀಯವಾಗಿ ದುಡಿಸಿಕೊಳ್ಳುತ್ತಿದ್ದರು, ಅವರ ಬಿಳಿ, ಕರಿಯರ ವರ್ಗಗಳ ನಡುವೆ ಬಡಜನರ ಜೀವನದ ದುರ್ಭರತೆ, ಹಿಂದಿನ ಜನಾಂಗದ ಒಂದು ಬಗೆಯ ಚಿತ್ರ ನಮ್ಮ ಮುಂದೆ ನಿಲ್ಲುತ್ತದೆ. ಮುಂಬರುವ ಕ್ರಾಂತಿಗೆ ಸೂಚನೆಯಂತೆ ಆಗಾಗ ಆ ಜನರು ಆಡಿಕೊಳ್ಳುತ್ತಿದ್ದ ಮಾತುಗಳು ಗಮನಾರ್ಹವೆನಿಸುತ್ತವೆ. ತನ್ನ ನೌಕರ ಕುಟುಂಬ ಒಂದನ್ನು ಮನೆಯಿಂದ ಓಡಿಸಲು ಜಮೀನ್ದಾರ ಆ ಮನೆಯ ಧಾನ್ಯವನ್ನೇ ಕದಿಸುವುದು ಕೇಂದ್ರ ಘಟ್ಟ.

ಫಿಲ್ ಡಾರ್ ಗೊಸಾತ ಇವರ "ಅಜ್ಞಾತ ಪ್ರತಿರೋಧ"—ಒಬ್ಬ ಧೀರಯೋಧ ಐದುಮಂದಿ ನಾಜಿಗಳನ್ನು ಕೊಂದು ಸಾವನ್ನಪ್ಪಿರುತ್ತಾನೆ. ಅವರ ಪರಿಚಯ ಯಾರಿಗೂ ಇರದು. ಆದರೆ ಪ್ರೊಗಾನ್ ಎಂಬ ಹೆಂಗಸು ತನ್ನ ಮಗನೆಂದು

ಮುಗಿಸುತ್ತಾಳೆ. ಅಂತಹ ಒಬ್ಬ ಧೀರ ಯೋಧನನ್ನು ತನ್ನ ಮಗನೆಂದು ಕರೆದುಕೊಳ್ಳಲು ತಾಯಂದಿರು ಇಷ್ಟಪಡುತ್ತಾರೆಂಬುದು ಕಥೆಯ ತಿರುಳು. ಬಲ್ಗೇರಿಯದ ಮೂರು ಕಥೆಗಳಲ್ಲಿ ಕೊನೆಯದಾದ ನಾಸಿಲಿರಾ ಇವರ "ಸಂಗಾತಿಗಳು" ಕಥೆಯೇ ಅಲ್ಲ. ಸಂಕಲನದಲ್ಲಿ ಸೇರಿಸುವಂತಹದಲ್ಲವೆಂಬುದು ನನ್ನ ಅನಿಸಿಕೆ.

ಬಲ್ಗೇರಿಯದ ೪ ಕಥೆಗಳ ಗುಂಪಿನ ಪೈಕಿ ಐಲೊ ಪೆತ್ರೊವ್ ಇವರ "ತಾಯಿ" ಮೊದಲನೆಯದು. ಅದು ಮುದಿಯ ಕಾಡಿನಂಚಿನ ಒಂದು ಹೆಣ್ಣುಕೋಳಿ ತನ್ನ ಮರಿಗಳಿಗೆ ಆಹಾರ ಒದಗಿಸಲು ಏನೇನೋ ಮಾಡಿ, ಹೋರಾಟದಲ್ಲಿ ತನ್ನ ಒಂದು ಕಾಲನ್ನೇ ಮುರಿದುಕೊಂಡು ಮತ್ತೆ ತನ್ನ ಮರಿಗಳ ಬಳಿ ಓಡಿಬರುತ್ತದೆ. ಹಸಿದ ಮರಿಗಳಿಗೆ ತನ್ನ ಕಾಲನ್ನೇ ಕಿತ್ತು ತಿನ್ನಿಸುತ್ತದೆ, ಕೊನೆಗೆ ತನ್ನ ದೇಹವನ್ನೇ ಆ ಮರಿಗಳಿಗೆ ಆಹಾರವಂತೆ ಉಣಬಡಿಸಿ ಪ್ರಾಣಬಿಡುತ್ತದೆ. ಕಟ್ಟ ಪ್ರಾಣಿ ತೋಳದಲ್ಲಿ ತಾಯಿಯಂತಹ ದೊಡ್ಡ ಗುಣವಿರುವುದನ್ನು ಗುರುತಿಸಿದ ಲೇಖಕ ಮನೋಭಾವವನ್ನು ಯಾರು ತಾನೆ ಮೆಚ್ಚುವುದಿಲ್ಲ.

ಯೋರ್ದಾನ್ ಯೊವ್ಕೊವ್ ಇವರ "ಅಪರಿಚಿತ" ಒಂದು ಸಾಮಾನ್ಯ ಕಥೆ. ಕುದುರೆಯನ್ನು ಗೋದಿ ಹೊಲದಲ್ಲಿ ಮೇಯಲು ಬಿಟ್ಟ ತಪ್ಪಿಗೆ ಶಿಕ್ಷೆ ವಿಧಿಸುವ ಮುಂಚೆ ಆ ಕುದುರೆ ಸಾಯುತ್ತ ಬಿದ್ದಾಗ ಅವರ ಹೇಳಿಕೆ ಪತ್ರದಲ್ಲಿದ್ದರೂ ಅವನಿಗೆ ಅವನು ಅಪರಿಚಿತನಾಗುವುದು ಆಶ್ಚರ್ಯವೆನಿಸುತ್ತದೆ.

ಎಲಿನ್ ಪೆಲಿನ್ ಇವರ "ಕಮಿಷನರ್ ಸಾಹೇಬರ ಕ್ರಿಸ್‌ಮಸ್" ಒಬ್ಬ ನಿರ್ದಯಿ, ದುರ್ನಡತೆಯ ಕಮಿಷನರ್ ಹಳ್ಳಿಯೊಂದಕ್ಕೆ ಹೊರಟಿದ್ದ. ಗಾಡಿ ಹೊಡೆಯುತ್ತಿದ್ದ ಯುವಕನಿಗೆ ಆಗಾಗ ಗದರಿಸುತ್ತಿದ್ದ ಮತ್ತು ಹಳ್ಳಿ ಜನರನ್ನು ಪೀಡಿಸುತ್ತಿದ್ದ. ಮಾತಿನ ಮಧ್ಯೆ ಹಳ್ಳಿಯ ರೈತನೊಬ್ಬನ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲು ಅವನು ಹೋಗುತ್ತಿರುವ ವಿಷಯ ಗಾಡಿಯ ಚಾಲಕನಿಗೆ ತಿಳಿಯುತ್ತದೆ. ಬಡ ರೈತನಿಗೆ ಈ ವಿಷಯ ತಿಳಿಸಿ ಅವನು ತನ್ನ ಊಟಕ್ಕೆ ಆಗುವಷ್ಟು ಹಣವನ್ನು ಬೇರೆಲ್ಲಿಯಾದರೂ ಮುಚ್ಚಿಟ್ಟುಕೊಳ್ಳುವಂತೆ ಮಾಡದಿದ್ದರೆ ವರ್ಷಾನುಕಾಲ ಅವನು ಕಷ್ಟ ಅನುಭವಿಸಬೇಕಾಗುತ್ತದೆ ಎಂದು ಯೋಚಿಸಿ ಉಪಾಯವಾಗಿ ದಾರಿಯನ್ನು ಬದಲಿಸಿಬಿಟ್ಟು, ನೀರು ತುಂಬಿದ ಜೌಗು ಪ್ರದೇಶದಲ್ಲಿ ಗಾಡಿ ನಿಲ್ಲಿಸಿ ಕಮಿಷನರ್ ಸಾಹೇಬ ಕೂಗಾಡುತ್ತಿದ್ದರೂ ಓಡಿ ಹೋದ ಕುದುರೆಯನ್ನು ಹಿಂದಕ್ಕೆ ಕರೆತರುತ್ತೇನೆಂದು ತಾನೂ ಅಲ್ಲಿಂದ ಹೊರಟುಹೋಗುತ್ತಾನೆ. ರಾತ್ರಿಯೆಲ್ಲ ಆ ಕಮಿಷನರ್ ಸಾಹೇಬ ಆ ಗಾಡಿಯ

ಒಳಗೇ ಇರುವಂತೆ ಮಾಡುತ್ತಾನೆ. ಕಮಿಷನರ್ ಸಾಹೇಬನ ದರ್ಪ, ಬಡಾಯಿ ಎಲ್ಲ ಕರಗಿ ಆತನ ದೀನತೆ, ಗೋಳಾಟ, ತನ್ನನ್ನು ಹಳ್ಳಿಗೆ ತಲುಪಿಸು ಎಂದು ಪಲ್ಲಕಿಯವನು ಬೇಡಿಕೊಳ್ಳುವುದನ್ನು ಕಂಡಾಗ ಆತನೆಷ್ಟು ಸ್ವಾರ್ಥಿ ಎನ್ನಿಸುವುದು, ಆತನ ಬಗ್ಗೆ ಸ್ವಲ್ಪವೂ ಕರುಣೆ ಹುಟ್ಟದು.

ಪೆಸೆಲಿನ್ ಅಂದ್ರೆಯೇವ್ ಇವರ “ತಾನ್ಯ” ಕಥೆಯನ್ನು ಸಂಕಲನದಲ್ಲಿ ಜಗತ್ತಿನ ಶ್ರೇಷ್ಠ ಕಥೆಯೆಂದು ಹೇಗೆ ಪರಿಗಣಿಸಿದರೋ ಕಾಣದಾಗಿದೆ. ಬಲ್ಗೇರಿಯದ ಫಾಸಿಸ್ಟ್ ವಿರೋಧಿ ಕ್ರಾಂತಿಕಾರಿ ಕವಿ ಎನ್. ವೈ. ವಾಪ್ಸ್ಸಾರೋವ್‌ನ ಕಾವ್ಯವನ್ನು ಬಾಲ್ಕೆ ಓದುತ್ತಾಳೆ—ಯೋಧರು ಅವನ್ನು ಮುಟ್ಟಿಕೊಂಡು ಇನ್ನಷ್ಟು ಕೇಳಲು ಬಯಸುತ್ತಾರೆ. ಬುಟ್ಟಕವಿಯ ಕಾವ್ಯ ಕಾಲವನ್ನು ಮೀರಿ ಬಾಳುವುದಲ್ಲದೆ ಅದ್ದಿನ ಜನಾಂಗಕ್ಕೆ ನಿರಂತರ ಜೀವನ ನೀಡಬಲ್ಲುದು ಎಂಬುದನ್ನು ಬುದ್ಧಿ ಯನ್ನು ಕಥೆಯಿಂದು ಕಲಿಯುವಂತಿಲ್ಲವೆಂಬುದು ಓದುಗರಿಗೆ ತಿಳಿಯುತ್ತದೆ.

ಒಟ್ಟಿನಲ್ಲಿ ಈ ಸಂಪುಟದಲ್ಲಿ ಶ್ರೀಮಂತ ಜಮೀನ್ದಾರರ ಕ್ರೌರ್ಯ, ಬಡ ಕಾರ್ಮಿಕರ ಗೋಳು, ಸಮಾಜವಾದದ ಹೆಚ್ಚಳ ಮತ್ತು ಯುದ್ಧದ ಬಿಸಿತಟ್ಟಿದ ಕಥೆಗಳಿವೆ. ಸರಳ ಅನುವಾದದ ಈ ವಿದೇಶೀ ಕಥೆಗಳನ್ನು ಓದುತ್ತ ಹೋದಂತೆ ನಮ್ಮ ಕಥೆಗಳ ಬಗ್ಗೆ ಹೆಚ್ಚು ಗೌರವ, ಒಲವು ಬೆಳೆಯುವುದರಲ್ಲಿ ಸಂಶಯವಿಲ್ಲ. ಎಲ್ಲಕ್ಕೂ ಮಿಗಿಲಾಗಿ ಪ್ರಧಾನ ಸಂಪಾದಕ ನಿರಂಜನರ ಪ್ರಸ್ತಾವನೆ ಯುಗೊಸ್ಲಾವಿಯ, ಅಲ್ಬೇನಿಯ ಮತ್ತು ಬಲ್ಗೇರಿಯ ದೇಶಗಳ ಇತಿಹಾಸ—ಸಾಹಿತ್ಯ ಕುರಿತ ಪಕ್ಷಿನೋಟವಾಗಿದ್ದು ಬಹು ಉಪಯುಕ್ತವೆನಿಸಿದೆ.

ಬಿ. ಶಾಮಸುಂದರ

* * *

ಮಾಡಿಕಲಿ (ಮಕ್ಕಳಿಗಾಗಿ ವೈಜ್ಞಾನಿಕ ಉಪಕರಣಗಳು)—ಲೇಖಕರು: ಶ್ರೀಮತಿ ಶಾಲಿನಿ ಕುಲಕರ್ಣಿ, ಶ್ರೀ ಎಸ್. ಆರ್. ಭಾಗವತ, ಶ್ರೀ ಜಾಗೃತ ಭಾರತ, ಧಾರವಾಡ: ಪುಟ: ೩೫; ರೂ. ೯; ೧೯೮೧.

ಕೈ, ತಲೆ ಮತ್ತು ಹೃದಯಕ್ಕೆ ತರಬೇತಿ ನೀಡಿ ಅವುಗಳ ನಡುವೆ ಹೊಂದಾಣಿಕೆ ಮಾಡಿ, ಮಕ್ಕಳಲ್ಲಿ ವೈಜ್ಞಾನಿಕ ಅಭಿರುಚಿ, ವೈಜ್ಞಾನಿಕ ಮನೋಭಾವನೆ, ವೈಜ್ಞಾನಿಕ ಸಂಸ್ಕೃತಿ ಬೆಳೆಸುವುದೇ ಈ ಪುಸ್ತಕದ ರಚನೆಗೆ ಕಾರಣ. ಒಬ್ಬ ಸಾಮಾನ್ಯ ವಿದ್ಯಾರ್ಥಿಗೂ ಅತಿ ಕಡಿಮೆ ಖರ್ಚಿನಲ್ಲಿ ನಮ್ಮ ಸುತ್ತಲಿನ ವಸ್ತುಗಳನ್ನೇ ಉಪಯೋಗಿಸಿ, ಅತಿ ಸುಲಭವಾಗಿ, ಮಕ್ಕಳಿಗೆ

ಪ್ರಯೋಗ ಮಾಡಲು ಬರುವಂತೆ ಕಲಿಸುವುದರೊಂದಿಗೆ ಮುಖ್ಯ ತತ್ವವನ್ನು ಆಟದಿಂದಲೇ ಮಾಡಿ ಕಲಿಯುವಂತೆ ಪ್ರೇರೇಪಿಸುವುದೇ ಈ ಪುಸ್ತಕದ ಮುಖ್ಯ ಉದ್ದೇಶ"—ಈ ಮಾತುಗಳನ್ನು ಲೇಖಕರು 'ಈ ಪುಸ್ತಕ ಬರೆದದ್ದೇಕೆ?' ಎಂಬ ಶೀರ್ಷಿಕೆಯಡಿಯಲ್ಲಿ ಬರೆದಿದ್ದಾರೆ.

ಹೀಗೆ ನಿರ್ಮಿಸಬೇಕು, ಅವುಗಳಲ್ಲಿ ಅಡಗಿರುವ ತತ್ತ್ವ ಏನು ಎಂಬುದನ್ನು ೨೦ಕ್ಕೂ ಹೆಚ್ಚು ವೈಜ್ಞಾನಿಕ ಉಪಕರಣಗಳನ್ನು ಪರಿಚಯಿಸಲಾಗಿರುವ ಈ ಪುಸ್ತಕದಲ್ಲಿ ಮೇಲೆ ಉಲ್ಲೇಖಿಸಿದ ಮಾತುಗಳಿಗೆ ಪ್ರಾಮಾಣಿಕವಾಗಿರುವ ಪ್ರಯತ್ನ ಕಂಡು ಬರುತ್ತದೆ. ಆದರೆ ಯಾವ ವಯಸ್ಸಿನ ಮಕ್ಕಳಿಗಾಗಿ ಈ ಪುಸ್ತಕ ಬರೆಯಲಾಗಿದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಿಲ್ಲವಾದ್ದರಿಂದ ಈ ಪ್ರಯತ್ನದ ಯಶಸ್ಸಿನ ಬಗ್ಗೆ ಖಚಿತವಾಗಿ ಹೇಳುವುದು ಕಷ್ಟ. ಪ್ರೌಢಶಾಲೆಯ ಮಕ್ಕಳನ್ನು ಉದ್ದೇಶಿಸಿ ಈ ಪುಸ್ತಕ ಬರೆಯಲಾಗಿದೆ ಎಂದಿಟ್ಟುಕೊಂಡರೆ. ನಿರೂಪಣೆ ಚಿಕ್ಕದಾಗಿ ಚೊಕ್ಕವಾಗಿದೆ ಎನ್ನಬಹುದು. ಸಾಕಷ್ಟು ಚಿತ್ರಗಳನ್ನು ಬಳಸಿರುವುದೂ ಚಿತ್ರಗಳು ಉಪಕರಣಗಳ ಬಗ್ಗೆ ಸ್ಪಷ್ಟ ಕಲ್ಪನೆ ಮೂಡಿಸುವಲ್ಲಿ ಸಮರ್ಥವಾಗಿರುವುದೂ ಈ ಪುಸ್ತಕದ ಮೆಚ್ಚುಗೆಗೆ ಕಾರಣವಾಗುವ ಇನ್ನೊಂದು ಅಂಶ.

ಮಕ್ಕಳಿಗಾಗಿ ಬರೆದ ಪುಸ್ತಕದಲ್ಲಿ ಮಕ್ಕಳ ಬಗ್ಗೆ ಬರೆದ ದೊಡ್ಡವರ ಮಾತುಗಳನ್ನು ಉದ್ಧರಣಗಳಾಗಿ ಖಾಲಿ ಜಾಗದಲ್ಲಿ ತುಂಬುವ ಅವಶ್ಯಕತೆ ಇರಲಿಲ್ಲ ಎನಿಸುತ್ತದೆ.

ಆಸಕ್ತ ವಿದ್ಯಾರ್ಥಿಗಳಲ್ಲಿ ಉತ್ಸಾಹ ಮೂಡಿಸಿ, ಕಾರ್ಯಪ್ರವೃತ್ತಗೊಳಿಸುವ ಉದ್ದೇಶದಿಂದ ಹೊರ ಬಂದಿರುವ ಈ ಪುಸ್ತಕ ಕನ್ನಡದಲ್ಲಿ ನನಗೆ ತಿಳಿದಮಟ್ಟಿಗೆ ಮೊದಲ ಯತ್ನ. ಆ ದೃಷ್ಟಿಯಿಂದ ಲೇಖಕರು ಮತ್ತು ಪ್ರಕಾಶಕರಿಗೆ ಪ್ರೋತ್ಸಾಹ ನೀಡಬೇಕು.

ಈ ಪುಸ್ತಕದ ಬೆಲೆ ಒಂಬತ್ತು ರೂಪಾಯಿಗಳೆಂದು ನಿಗದಿ ಮಾಡಲಾಗಿದೆ. ಸುಮಾರು ೫೫ ಪಡಿಯಚ್ಚುಗಳಿಂದ ಕೂಡಿರುವ ಕ್ರೌನ್ ಚತುರ್ದಳ ಗಾತ್ರದ ೪೦ ಪುಟಗಳ ಈ ಪುಸ್ತಕಕ್ಕೆ ಇಂದು ತಗಲುವ ಉತ್ಪಾದನಾ ವೆಚ್ಚ ಗೊತ್ತಿರುವವರಿಗೆ ಬೆಲೆ ನಿಗದಿಯಲ್ಲಿ ಅನ್ಯಾಯವಾಗಿದೆ ಎಂದೇನೂ ಅನಿಸದು. ಆದರೆ ಪುಸ್ತಕಗಳಿಗೆ ಇಷ್ಟು ಬೆಲೆಯಿಟ್ಟರೆ ಅವು ಜನಗಳನ್ನು ತಲುಪುತ್ತವೆಯೇ ಎಂಬುದು ಅನುಮಾನಾಸ್ಪದ. ಇಂತಹ ಪ್ರಕಟಣೆಗಳಿಗೆ ಮುಂಚಿತವಾಗಿಯೇ ನೆರವು ನೀಡುವ ಯೋಜನೆಗಳನ್ನು ರೂಪಿಸುವ ಜವಾಬ್ದಾರಿ ಸರಕಾರಕ್ಕಿರಬೇಕು.

ಇಲ್ಲದೇಹೋದರೆ ಪ್ರಕಾಶಕರು ಹೇಳಿಕೊಂಡಿರುವಂತೆ ಒಂದು ಪುಸ್ತಕ ಹೊರ ತರುವಷ್ಟಕ್ಕೆ ಮಾತ್ರವೇ ಅವರು ತೃಪ್ತರಾಗಬೇಕಾಗುತ್ತದೆ.

ಸ. ರಾ. ಸುದರ್ಶನ

* * *

ನಾಗರಿಕ ಹಕ್ಕುಗಳ ರಕ್ಷಣಾ ಕಾನೂನು ಪುಟ: ೧೦೦, ೫ನಯ ಮುದ್ರಣ, ೧೯೭೫.

ಬಾಲವಿವಾಹ ನಿಷೇಧ ಕಾನೂನು ಪುಟ: ೨೦, ೨ನೆಯ ಮುದ್ರಣ, ೧೯೮೨.

ಮಕ್ಕಳ (ದುಡಿಮೆ ಒತ್ತೆ ಇಡುವ) ಕಾನೂನು—ಪುಟಗಳು ೧೨, ೨ನೆಯ ಮುದ್ರಣ, ೧೯೮೧

ಗರ್ಭಪಾತ ಕಾನೂನು—ಪುಟಗಳು ೫೨, ೨ನೆಯ ಮುದ್ರಣ, ೧೯೮೨. ವೆಂಕಟೇಶ ಕುಲಕರಣಿ.

ಕರ್ನಾಟಕ ಐಷಾರಾಮುಗಳ ಮೇಲಿನ ಕರ (ಹೋಟೆಲು ಮತ್ತು ವಸತಿಗೃಹ) ಕಾನೂನು—ಪುಟಗಳು ೨೪, ಪ್ರಥಮ ಮುದ್ರಣ, ೧೯೭೯. ಚಂದ್ರಶೇಖರ ಹಿರೇಮಠ.

ಮೇಲಿನ ಎಲ್ಲ ಪುಸ್ತಕಗಳ ಪ್ರಕಾಶಕರು ಜಾಗೃತ ಭಾರತ, ಧಾರವಾಡ.

ಅಸ್ಪೃಶ್ಯತೆ, ಜಾತಿ ನಮ್ಮ ದೇಶವನ್ನು ಪ್ರಾಚೀನದಿಂದಲೂ ಹಿಂಸಿಸಿರುವ ಸಮಸ್ಯೆಗಳು. ಶೂದ್ರರ ಜೀವನ ಈ ದೇಶದಲ್ಲಿ ನರಕಸದೃಶವಾದದ್ದು. ಅವರ ಬದುಕಿಗೂ ಪ್ರಾಣಿಗಳ ಬದುಕಿಗೂ ವ್ಯತ್ಯಾಸವೇ ಇಲ್ಲ. ಮೇಲು ವರ್ಗದ ಜನ ಅವರನ್ನು ಕಾಣುವ ರೀತಿ ಹಾಗೆ. ಇಂಥ ಅಮಾನವೀಯ ಹೀನ ವ್ಯವಸ್ಥೆಯನ್ನು ನಿವಾರಿಸಲು, ಶೂದ್ರರೂ ಮನುಷ್ಯರಂತೆ ಬದುಕಲು ಸಾಧ್ಯವಾಗುವಂತೆ ೧೯೫೫ರಲ್ಲಿ ನಾಗರಿಕ ಹಕ್ಕುಗಳ ರಕ್ಷಣಾ ಕಾನೂನನ್ನು ಮಾಡಲಾಯಿತು. ಇದರ ಪ್ರಕಾರ ಅಸ್ಪೃಶ್ಯತೆಯನ್ನು ಬೋಧಿಸುವುದನ್ನು, ಆಚರಿಸುವುದನ್ನು ಮತ್ತು ಅಸ್ಪೃಶ್ಯತೆಯ ಘೋಷಣೆ ಹಾಗೂ ಆಚರಣೆಯಿಂದ ಉದ್ಭವಿಸುವ ಯಾವುದೇ ಅನರ್ಹತೆ ಹಾಗೂ ಅದಕ್ಕೆ ಸಂಬಂಧಿಸಿದವುಗಳಿಗೆ ದಂಡನೆ ವಿಧಿಸಲಾಗುತ್ತದೆ. ಪ್ರಸ್ತುತ ಗ್ರಂಥದಲ್ಲಿ ಈ ಕಾನೂನಿನ ಸಮಗ್ರ ಪರಿಚಯ ಮಾಡಿಕೊಡಲಾಗಿದೆ. ಅಲ್ಲಲ್ಲಿ ಕೆಲವು ಕ್ಲಿಷ್ಟ ಸಂದರ್ಭಗಳಿಗೆ ವಿವರಣೆ ನೀಡಲಾಗಿದೆ. ಪುಸ್ತಕದ ಆರಂಭದ ೨೩ ಪುಟಗಳಲ್ಲಿ ಕೊಟ್ಟಿರುವ ಅಸ್ಪೃಶ್ಯತೆಯ ಇತಿಹಾಸದ ಸ್ಥೂಲ ಪರಿಚಯದ ಹಿನ್ನೆಲೆ ನಾವು ಈ ಕಾನೂನನ್ನು ಮಾನವೀಯ ದೃಷ್ಟಿಯಿಂದ ಅರ್ಥಮಾಡಿಕೊಳ್ಳುವುದಕ್ಕೆ ನೆರವಾಗಿದೆ. ಜೊತೆಗೆ ಅಸ್ಪೃಶ್ಯತೆಯ ಹಿನ್ನೆಲೆಯಲ್ಲಿ ಕೋರ್ಟಿಗೆ ಹತ್ತಿದ ಕೆಲವು ನಿದರ್ಶನಗಳನ್ನೂ ಆ ಸಂಬಂಧ ಪಟ್ಟ

ಕೆಲವು ತೀರ್ಪುಗಳನ್ನು ಇಲ್ಲಿ ಎತ್ತಿಕೊಡಲಾಗಿದೆ. ೧೯೭೬ರಲ್ಲಿ ಈ ಕಾನೂನಿಗೆ ಸಂಬಂಧಪಟ್ಟಂತೆ ಆದ ಕೆಲವು ತಿದ್ದುಪಡಿಗಳನ್ನು ಈ ಪುಸ್ತಕದಲ್ಲಿ ಗಮನಿಸಿರುವುದು ಇವತ್ತಿನ ಸಂದರ್ಭದಲ್ಲಿ ಸಮಕಾಲೀನವಾಗಿ ಅರ್ಥೈಸಲು ಸಹಾಯಕವಾಗಿದೆ.

ಬಾಲ್ಯ ವಿವಾಹ ನಿಷೇಧ ಕಾನೂನು (೧೯೨೯) ಬಾಲ್ಯ ವಿವಾಹದ ಬಗೆಗಿರುವ ಕೆಲವು ನಿರ್ಬಂಧಗಳನ್ನು ತಿಳಿಸುತ್ತದೆ. ಹೆಣ್ಣು ಮತ್ತು ಗಂಡಿನ ಮದುವೆಯ ವಯಸ್ಸನ್ನು ಈ ಕಾನೂನು ನಿಗದಿಪಡಿಸುತ್ತದೆ. ಒಂದು ಕಾಲಕ್ಕೆ ವಿಪರೀತ ಸ್ಥಿತಿಗೆ ತಲುಪಿದ್ದ ಈ ಸಾಮಾಜಿಕ ಸಮಸ್ಯೆ ಇತ್ತೀಚಿನ ದಿನಗಳಲ್ಲಿ ಕ್ಷೀಣಿಸಿರುವುದು ಸಾಮಾಜಿಕ ಆರೋಗ್ಯದ ನಿದರ್ಶನವಾಗಿದೆ.

ಮಕ್ಕಳ ಕಾನೂನು (೧೯೩೩) ಮಕ್ಕಳ ದುಡಿಮೆಯನ್ನು ಒತ್ತೆ ಇಡುವುದನ್ನು (ಅಡ ಇಡುವುದನ್ನು) ನಿಷೇಧಿಸುವ ಕಾನೂನು. ಎಳೆಯವಯಸ್ಸಿನ ಮಕ್ಕಳನ್ನು ಅಮಾನುಷವಾಗಿ ದುಡಿಸಿಕೊಂಡು ಶೋಷಿಸುತ್ತಿರುವ ವರ್ಗವನ್ನು ಈ ಕಾನೂನು ನಿಯಂತ್ರಿಸುತ್ತದೆ. ಭಾರತದಲ್ಲಿ ಬಾಲ ಕಾರ್ಮಿಕರ ಶೋಷಣೆ ವ್ಯಾಪಕವಾಗಿ ಸಾಗಿದೆ. ಹೋಟೆಲ್, ಫ್ಯಾಕ್ಟರಿ, ಅಂಗಡಿ, ವರ್ಕ್‌ಶಾಪ್‌ಗಳಲ್ಲಿ ಇಂಥ ಶೋಷಣಾದಾಯಕ ನಿಯೋಜನೆ ನಡೆದಿದೆ. ಈ ಕಾನೂನು ಅಂಥ ಶೋಷಿತರಿಗೊಂದು ವರದಾನವಾಗಿದೆ.

ಹೋಟೆಲ್ ಹಾಗೂ ವಸತಿಗೃಹಗಳ ಬೇಡಿಕೆಗೆ ನಗರ ಪ್ರದೇಶಗಳಲ್ಲಿ ಹಿತಕ್ಕೆ ಮೀರಿ ವೃದ್ಧಿಸಿದೆ. ಈ ದೇಶದಲ್ಲಿ ಉಳ್ಳವರ ಹಾಗೂ ಬಡವರ ನಡುವಿನ ಅಂತರ ಅಪಾರವಾದದ್ದು. ಸಂಪತ್ತಿನ ಹಂಚಿಕೆಯಲ್ಲಿ ಕೂಡ ಅಸಮಾನತೆ ಎದ್ದು ಕಾಣುತ್ತದೆ. ಉಳ್ಳವರು ಬಂಡವಾಳ ತೊಡಗಿಸಿ ವ್ಯಾಪಾರಕ್ಕೆ ಮೋಸಮಾಡಿ (ತೆರಿಗೆ ನೀಡದೆ) ಅಕ್ರಮ ರೀತಿಯಲ್ಲಿ ಹಣ ಮಾಡುವುದನ್ನು ಗಮನದಲ್ಲಿಟ್ಟುಕೊಳ್ಳುವ ದೃಷ್ಟಿಯಿಂದ ರೂಪಿಸಿರುವ ಕರ್ನಾಟಕ ಐಷಾರಾಮಗಳ ಮೇಲಿನ ಕರ ಕಾನೂನು (೧೯೭೯) ಕಪ್ಪು ಹಣ ಮಾಡುವ ಕೆಲವು ಮಾರ್ಗಗಳನ್ನು ಸ್ವಲ್ಪಮಟ್ಟಿಗೆ ನಿಯಂತ್ರಿಸಲು ಸಹಕಾರಿಯಾಗಬಹುದು. ಈ ಕಾನೂನಿನ ವ್ಯಾಪ್ತಿ ಕರ್ನಾಟಕಕ್ಕೆ ಮಾತ್ರ ಸೀಮಿತವಾದದ್ದು.

ಜನನ ನಿಯಂತ್ರಣ ನಮ್ಮ ದೇಶದಲ್ಲಿ ಹಾಸ್ಯಾಸ್ಪದ ಸ್ಥಿತಿಗೆ ತಲುಪಿರುವ ಇಂದಿನ ಸಂದರ್ಭದಲ್ಲಿ ವೈದ್ಯಕೀಯ ಗರ್ಭಪಾತ ಕಾನೂನು (೧೯೭೧) ವಿಶೇಷ ಬೆಲೆಯುಳ್ಳದ್ದು. ನಮ್ಮ ಜನ ಕೊಂಚಕೂಡ ಸಾಮಾಜಿಕ ಜವಾಬ್ದಾರಿಯಿಲ್ಲದವರು, ಸಂಪ್ರದಾಯಶರಣರು, ವೈಜ್ಞಾನಿಕ ತಿಳಿವಳಿಕೆ ಸ್ವಲ್ಪಕೂಡ ಇಲ್ಲದವರು.

ಅವರ ದೃಷ್ಟಿಯಲ್ಲಿ 'ಗರ್ಭಪಾತ' ಪಾಪ. ಗರ್ಭಪಾತ ಇಂದಿನ ದಿನಗಳಲ್ಲಿ ಪ್ರಪಂಚದಾದ್ಯಂತ ಚರ್ಚಿತವಾಗುತ್ತಿರುವ ಭೀಕರ ಸಮಸ್ಯೆ. ಧಾರ್ಮಿಕವಾಗಿ ಈ ಕಾರ್ಯ ಎಲ್ಲ ಜನಾಂಗಗಳಲ್ಲೂ ನಿಷಿದ್ಧ. ಮಾನವೀಯ ದೃಷ್ಟಿಯಿಂದ ನೋಡಿದಾಗ ಇದು ಅಮಾನುಷವೆನ್ನಿಸಬಹುದು. ಆದರೆ ನಮ್ಮ ಬದುಕಿನ ಪ್ರಸ್ತುತ ಪರಿಸ್ಥಿತಿಯನ್ನು ಗಮನಿಸಿ ಗಂಭೀರವಾಗಿ ಆಲೋಚಿಸಿದರೆ ಮಕ್ಕಳ ಜನನಕ್ಕಿಂತ ಗರ್ಭಪಾತ ಪುಣ್ಯದ ಕೆಲಸ. ಮಕ್ಕಳನ್ನೇ ಪಡೆಯದೆ ಗರ್ಭಪಾತ ವಲ್ಲ, ಬೇಡದ ಮಗುವನ್ನು, ತಮ್ಮ ಬದುಕಿನ 'ಹೊರೆ' ಯಾಗುವ ಸೃಷ್ಟಿಯನ್ನು ನಿಯಂತ್ರಿಸುವ ಏಕೈಕ ಮಾರ್ಗ. ಪ್ರಸ್ತುತ ಗ್ರಂಥದಲ್ಲಿ ಗರ್ಭಪಾತದ ಇತಿಹಾಸ, ನಾನಾ ದೇಶಗಳಲ್ಲಿರುವ ಜನನ ನಿಯಂತ್ರಣದ ಸಮಸ್ಯೆ, ಪ್ರಾಚೀನರು ಜನನ ನಿಯಂತ್ರಣಕ್ಕೆ ಅನುಸರಿಸುತ್ತಿದ್ದ ಕ್ರಮಗಳು, ಗರ್ಭನಿರೋಧಕಗಳು ಮೊದಲಾದ ವಿಷಯಗಳ ಬಗ್ಗೆ ಉಪಯುಕ್ತ ಮಾಹಿತಿಗಳಿವೆ. ಭಾರತದಲ್ಲಿ ಕುಟುಂಬ ಯೋಜನಾಕ್ರಮವನ್ನು ಮೊದಲಬಾರಿಗೆ ಕೈಗೊಂಡ ಕೀರ್ತಿ ಕರ್ನಾಟಕದ್ದು (೧೯೩೦) ಎಂಬ ಸಂಗತಿ ಇಲ್ಲಿ ಉಲ್ಲೇಖನೀಯ.

ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿಸುವುದು, ಅಕ್ಷರಸ್ಥರನ್ನು ಪ್ರಜ್ಞಾವಂತರನ್ನಾಗಿಸುವುದು ನಮ್ಮ ಸಾಮಾಜಿಕ ಜವಾಬ್ದಾರಿಗಳಲ್ಲೊಂದು. ಈ ದಿಸೆಯಲ್ಲಿ ಪ್ರಾಮಾಣಿಕವಾಗಿ ಕಾರ್ಯಪ್ರವೃತ್ತರಾಗಿರುವ ವೆಂಕಟೇಶ ಕುಲಕರಣಿಯವರು ಜಾಗ್ರತ ಭಾರತದ ಮೂಲಕ ಕನ್ನಡವನ್ನು ಶ್ರೀಮಂತಗೊಳಿಸುತ್ತಿದ್ದಾರೆ, ಕನ್ನಡಿಗರನ್ನು ಹೆಚ್ಚು ಪ್ರಜ್ಞಾವಂತರನ್ನಾಗಿಸುತ್ತಿದ್ದಾರೆ. ಆದರೆ ಭಾಷೆಯ ಸೂಕ್ತ ಬಳಕೆಯಲ್ಲಿ ಇವರ ಲೇಖನಿ ಸ್ವಲ್ಪಮಟ್ಟಿಗೆ ಪಳಗಬೇಕಾಗಿದೆ. (ಉದಾ: worshipplace—ಅರ್ಚನಾಸ್ಥಳ. ಇದಕ್ಕೆ ಬದಲು ಆರಾಧನಾ ಸ್ಥಳ ಎಂದು ಬಳಸಬಹುದಿತ್ತು. ಇಂಥವು ಅನೇಕವಿವೆ). ಈ ಬಗೆಯ ಕೆಲವು ಅರೆ ಕೊರೆಗಳನ್ನು ಬಿಟ್ಟರೆ ಅವರು ತಮ್ಮ ಕೆಲಸದಲ್ಲಿ, ಉದ್ದೇಶದಲ್ಲಿ ಬಹುಪಾಲು ಯಶಸ್ವಿಯಾಗಿದ್ದಾರೆ.

ಕೃಷ್ಣ ಹಾಸನ

* * *

ಸ್ಮರಣ—ಲೇಖಕರು: ಡಾ|| ಹಾ. ಮಾ. ನಾಯಕ; ಪ್ರಕಾಶಕರು: ಮಿತ್ರ ಪ್ರಕಾಶನ, ೨೪, ಸರಸ್ವತಿಪುರಂ ಹೊಸ ಬಡಾವಣೆ, ಮೈಸೂರು ೫೭೦೦೦೯, ಪುಟಗಳು: ೧೨೮, ಬೆಲೆ ೮ರೂ.

ಡಾ|| ಹಾರೋಗದ್ದೆ ಮಾನಪ್ಪ ನಾಯಕರು ಕನ್ನಡದ ವಿದ್ವತ್ ಪ್ರಪಂಚದಲ್ಲಿ ಹೆಸರು ಪಡೆದಿರುವುದರೊಡನೆ ಇಂದಿನ ಸಾಮಯಿಕ ವಿಚಾರಗಳ ಲೇಖಕರಲ್ಲಿ

ಪ್ರಮುಖರಾಗಿದ್ದಾರೆ. ಸಾಮಾಯಿಕ ವಿಷಯ ಮತ್ತು ಜೀವನ ಚರಿತ್ರೆಗಳಲ್ಲಿ ಅವರ ಬಿಡಿ ಲೇಖನಗಳ ಸಂಕಲನಗಳು ಈಗ ಒಂದು ಡಜನ್ ಮೀರುತ್ತವೆ. ಪ್ರಸ್ತುತ ಸಂಗ್ರಹ ಡಾ|| ನಾಯಕರು ವಿವಿಧ ಪತ್ರಿಕೆಗಳಲ್ಲಿ ಕಾಲಕಾಲಕ್ಕೆ ಬರೆದ ವ್ಯಕ್ತಿ ಪರಿಚಯದ ಹದಿನಾಲ್ಕು ಲೇಖನಗಳೊಡನೆ ೧೯೭೫-೭೮ರ ಅವಧಿಯಲ್ಲಿ ಅವರು ಪ್ರಬುದ್ಧ ಕರ್ನಾಟಕದ ಸಂಪಾದಕರಾಗಿದ್ದಾಗ ಬರೆದ ಅನೇಕ ಟಿಪ್ಪಣಿಗಳನ್ನು ಒಳಗೊಂಡಿದೆ. ವ್ಯಕ್ತಿ ಚರಿತ್ರೆಗಳು ಪ್ರಧಾನವಾಗಿ ಸಾಹಿತಿಗಳ ಕಲಾವಿದರ (ಭಾರತೀಯ ಮತ್ತು ವಿದೇಶಿ) ಶತಮಾನೋತ್ಸವ ಅಥವಾ ನಿಧನ ಸಂದರ್ಭಗಳಲ್ಲಿ ಬರೆದವುಗಳು. ಕನ್ನಡ ಕುಲಪುರೋಹಿತ, ಆಲೂರ ವೆಂಕಟರಾಯರು, ಎಂ. ಎಸ್. ಪುಟ್ಟಣ್ಣ, ಬಂಕಿಮ, ಶರಚ್ಚಂದ್ರ, ಪ್ರೇಮಚಂದ್, ಜೀನ್‌ಪಾಲ್ ಸಾರ್ತ್ರೆ, ಕೆ. ಜಿ. ಕುಂದಣಗಾರ, ನಂದಲಾಲಬಸು, ಚೌಡಯ್ಯ ಮೊದಲಾದವರು ಈ ಪುಸ್ತಕದಲ್ಲಿ ಸ್ಥಾನಾಪನ್ನರಾಗಿದ್ದಾರೆ. 'ಸ್ಮರಣ' ಎಂಬ ಹೆಸರೇ ಸೂಚಿಸುವಂತೆ ಅವು ಈ ಮಹಾಪುರುಷರ ಹಿರಿಮೆಯನ್ನು ನೆನೆಯುವ ಬರವಣಿಗೆಗಳು. ಡಾ|| ನಾಯಕರ ಸರಳ ಸಹಜ ಅಸಂದಿಗ್ಧ ಕನ್ನಡ ಶೈಲಿ ಇವುಗಳಿಗೆ ತನ್ನದೇ ಮೆರಗುಕೊಟ್ಟಿದೆ. ಪತ್ರಿಕೆಗಳಿಗೆ ಬರೆದವಾದುದರಿಂದ ಅವು ಪ್ರತಿಯೊಂದೂ ನಾಲ್ಕಾರು ಪುಟಗಳೊಳಗೆ ಆಯಾ ವ್ಯಕ್ತಿಯ ವಿಷಯದಲ್ಲಿ ತಿಳಿದುಕೊಳ್ಳಬೇಕಾದ ವಿವರಗಳನ್ನೆಲ್ಲ ಒಳಗೊಂಡಿವೆ. ಅವರ ಸಾಹಿತ್ಯ ಅಥವಾ ಕೃತಿಗಳ ಸವಿವರ ವಿಮರ್ಶೆಯನ್ನಾಗಲಿ, ಅವರ ವೈಯಕ್ತಿಕ ಜೀವನಗಳ ಒಳಪದರುಗಳ ಸುಳಿವುಗಳನ್ನಾಗಲಿ ಇಂಥ ಲೇಖನಗಳಲ್ಲಿ ಸೇರಿಸುವುದು ಸಾಧ್ಯವಲ್ಲ. ಆಯಾ ವ್ಯಕ್ತಿಗಳ ಜೀವನಗಳಿಗೆ ಇವು ಒಂದು ಪ್ರವೇಶ ಎಂಬಂತಿದ್ದು ಸಾಮಾನ್ಯ ಓದುಗರಿಗೂ ವಿದ್ಯಾರ್ಥಿಗಳಿಗೂ ಪತ್ರಿಕಾ ಕರ್ತರಿಗೆ ಕೂಡ ಕೈಪಿಡಿಗಳಂತಿವೆ. ಪ್ರಬುದ್ಧ ಕರ್ನಾಟಕಕ್ಕಾಗಿ ಬರೆದ ಟಿಪ್ಪಣಿಗಳ ಮುಖ್ಯ ಪ್ರಯೋಜನ ಅವು ಸಾಹಿತ್ಯ ಮತ್ತು ಶಿಕ್ಷಣ ರಂಗಗಳಲ್ಲಿ ದುಡಿದವರ ಮತ್ತು ನಡೆದ ಘಟನೆಗಳ ಒಂದು ಕಾಲಾನುಕ್ರಮಣಿಕೆಯಾಗಿವೆ ಎಂಬುದು ಮೈಸೂರು ವಿಶ್ವವಿದ್ಯಾನಿಲಯದ ಅರ್ಧಶತಮಾನದ ಚರಿತ್ರೆ ಒಂದು ಒಳ್ಳೆ ರೇಖಾನ್ಯಾಸವಾಗಿದೆ.

ಹಿತಮಿತ, ಹದವುಳ್ಳ, ಮಿತಿಬಲ್ಲ ಜನಪ್ರಿಯ ಬರವಣಿಗೆಗೆ 'ಸ್ಮರಣ' ಒಂದು ಉತ್ತಮ ಉದಾಹರಣೆಯೆನ್ನಬೇಕು.

ಪಾ. ವೆಂ. ಆಚಾರ್ಯ

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಕ್ರೌನ್ ಅಷ್ಟದಳ ೬೪ ಪುಟಗಳು

ಬಿಡಿ ಪ್ರತಿ: ಒಂದು ರೂಪಾಯಿ

ವಾರ್ಷಿಕ ಚಂದಾ : ೧೦ ರೂಪಾಯಿ

ಸಾರ್ವಜನಿಕ ವಿದ್ಯಾವಂತರ ಉಪಯೋಗಕ್ಕಾಗಿ, ಮುಖ್ಯವಾಗಿ ಗ್ರಾಮಸ್ಥರ ಮತ್ತು ಗ್ರಾಮ ಪುಸ್ತಕ ಭಂಡಾರಗಳ ಅಧಿಕಾರಿಗಳ ಉಪಯೋಗಕ್ಕಾಗಿ ಈ ಪತ್ರಿಕೆ ಪ್ರಕಟವಾಗುತ್ತಿದೆ.

(ಅ) ಕನ್ನಡೇತರ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳ ಮತ್ತು ಲೇಖನಗಳ ಸಾರಾಂಶಗಳನ್ನು ಪ್ರಕಟಿಸಿ ಅವುಗಳ ಪರಿಚಯವನ್ನು ಮಾಡಿಕೊಡುವುದು

(ಆ) ಆಯಾ ತಿಂಗಳಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ಮತ್ತು ಮುಖ್ಯ ಕನ್ನಡ ಲೇಖನಗಳನ್ನು ಪ್ರಕಟಿಸುವುದು.

(ಇ) ಕನ್ನಡದಲ್ಲಿ ಪ್ರಕಟವಾಗಿರುವ ಉತ್ತಮ ಪುಸ್ತಕಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸುವುದು.

(ಈ) ಪುಸ್ತಕ ಭಂಡಾರ ವ್ಯವಸ್ಥೆ ವಿಚಾರವಾಗಿ ಲೇಖನಗಳನ್ನು ಪ್ರಕಟಿಸುವುದು.

(ಉ) ಒಬ್ಬ ಲೇಖಕರ ಎಲ್ಲ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು. ಒಂದು ವಿಷಯದ ಮೇಲೆ ಬರೆದಿರುವ ಅನೇಕ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು.

(ಊ) ಗ್ರಾಮ ಜೀವನಕ್ಕೆ ಸಂಬಂಧಪಟ್ಟ ಕಥೆಗಳು, ಕವಿತೆಗಳು, ಪ್ರಬಂಧಗಳ ಮತ್ತು ವ್ಯಕ್ತಿ ಚಿತ್ರಗಳನ್ನು ಪ್ರಕಟಿಸುವುದು.

(ಋ) ಕಲಾಚಿತ್ರಗಳನ್ನು ಅಚ್ಚು ಮಾಡುವುದು.

(ೠ) ಕನ್ನಡದಲ್ಲಿ ಪ್ರಕಟವಾದ ಅತಿ ಮುಖ್ಯ ಲೇಖನದ ಸಾರಾಂಶವನ್ನು ಪ್ರಕಟಿಸುವುದು.

(ಎ) ಗ್ರಾಮಸ್ಥರಿಗೆ ರುಚಿಸುವ ವಿಷಯಗಳ ಮೇಲೆ ಸುಲಭ ಶೈಲಿಯಲ್ಲಿ ಲೇಖನಗಳನ್ನು ಪ್ರಕಟಿಸುವುದು.

ಪ್ರಧಾನ ಕಾರ್ಯದರ್ಶಿ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಕೃಷ್ಣಮೂರ್ತಿಪುರಂ : : ಮೈಸೂರು - ೪

Reg. No. KRNN. 29 / WPP 6

LICENSE No. 21
LICENSED TO POST WITHOUT PREPAYMENT

ನೀವು ಓದಲೇಬೇಕಾದ ಪುಸ್ತಕಗಳು.....

ಜನಪ್ರಿಯ ವಾಲ್ಮೀಕಿ ರಾಮಾಯಣ

ಶರಣ ಚರಿತಾಮೃತ

ನನ್ನೂರು

ಗೋಕುಲ

ಭಗತ್‌ಸಿಂಗ್

ಸಿ. ವಿ. ರಾಮನ್

ವಚನ ಭಾಗವತ

ವಿದ್ಯಾಪೀಠಗಳು

ಶ್ರೀ ಶಂಕರಾಚಾರ್ಯ

ಆಂಡರ್‌ಸನ್ ಮತ್ತು ಇತರ ಕತೆಗಳು

ನಳಚರಿತ್ರೆಯ ಸಂಗ್ರಹ

ಗ್ರಂಟ್ವಿಗ್

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು
ತರಿಸಿ ಓದಿರಿ

Edited by R. Boraiah, Printed by H. G. Ramaswamy Iyengar aanager at Karnataka State Adult Education Council Press Mnd Published by Karnataka State Adult Education Council Mysore city (India)